SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 12 Pages:56
July - 2024, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಜುಲೈ 2024

ಬೆಲೆ ರೂ. 20/-



ತಿರುಮಲೆ ಸ್ವಾಮಿಯವರ
ಆಣಿವಾರ ಆಸ್ಥಾನ ಮಹೋತ್ಸವ
16-07-2024












13-06-2024 ರಂದು ಆಂಧ್ರಪ್ರದೇಶದ ರಾಜ್ಯದ ಮುಖ್ಯಮಂತ್ರಿಯಾದ ಗೌ॥ ಶ್ರೀ. ನಾರಾಚಂದ್ರಬಾಬು ನಾಯ್ಡು ರವರು ಮತ್ತು ಆಂಧ್ರಪ್ರದೇಶದ ಮಂತ್ರಿಯಾದ (ಹೆಚ್‌ಆರ್, ಐಟಿ,ಆರ್‌ಟಿಜಿ) ಗೌ॥ ಶ್ರೀ ಎನ್. ಲೋಕೇಶ್ ಅವರು ಕುಟುಂಬ ಸಮೇತವಾಗಿ ತಿರುಮಲೆ ಸ್ವಾಮಿಯವರ ದರ್ಶನವನ್ನು ಪಡೆದರು. ದರ್ಶನಾನಂತರ ಇವರಿಗೆ ಸ್ವಾಮಿಯವರ ತೀರ್ಥಪ್ರಸಾದ ಮತ್ತು ಚಿತ್ರಪಟವನ್ನು ನೀಡುತ್ತಿರುವ ದತ್ತಿ ಇಲಾಖೆಯ ಪ್ರತ್ಯೇಕ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಆರ್. ಕರಿಕಾಲವಲವನ್ ಐ.ಎ.ಎಸ್., ಮತ್ತು ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮಂ ಐ.ಎ.ಎಸ್., ಮತ್ತು ಶ್ರೀಮತಿ. ಎಂ. ಗೌತಮಿ ಐ.ಎ.ಎಸ್., ರವರು ಮತ್ತು ಇತರ ಶಾಸನ ಸಭೆ ಸದಸ್ಯರು ಮತ್ತು ಉನ್ನತಾಧಿಕಾರಿಗಳು ಪಾಲ್ಗೊಂಡರು.

# ಭಗವದ್ಗೀತೆ



**ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ ।**
**ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ಕರ್ತುಮರ್ಹತಿ ॥**

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -17)

**ಯಾವುದು ಎಲ್ಲೆಡೆಯು ತುಂಬಿದೆಯೋ ಅದು ಎಂದೂ ನಾಶವಾಗತಕ್ಕದಲ್ಲವೆಂದು ತಿಳಿ, ನಾಶವಿಲ್ಲದ ಅದನ್ನು ಹೋಗಲಾಡಿಸುವುದಕ್ಕೆ ಯಾರಿಂದಲೂ ಆಗದು.**



ವೆಂಕಟಾದ್ರಿ ನಿಲಯನ ಪಂಕಜನಾಭನ ತೋರವ್ವ ಲಕುಮಿ ॥ಪ॥
ವಸುದೇವ ದೇವಕಿ ಕಂದಾ ನಮ್ಮ ಶಶಿಮುಖಿರೊಡನೆ ಆನಂದಾ ॥
ಪಶುಗಳ ಕಾಯ್ದ ಗೋವಿಂದ ನಮ್ಮ ಬಿಸಜನಾಭ ಮುಕುಂದಾ
ಸಾಮಜರಾಜ ವರದಾ ಬಲು ಪ್ರೇಮದಿ ಭಕುತರ ಪೊರೆದಾ।
ಆ ಮಹಾದಿತಿಜರ ತರಿದಾ ನಿಸ್ಸೀಮ ಮಹಾಮಹಿಮನಾಗಿ ಮೆರೆದ ನಮ್ಮ
ಉರಗ ಗಿರಿಯಲಿಪ್ಪ ಅಂದು। ಮರುತನ ಹೆಗಲೇರಿ ಬಪ್ಪ ।
ಶರಣರಿಗ್ವರವೀವ ತಪ್ಪ ಸಿರಿ ಮೋಹನವಿಠ್ಠಲ ತಿಮ್ಮಪ್ಪ ನಮ್ಮಪ್ಪನ ॥

- ಶ್ರೀ ಮೋಹನ ವಿಠ್ಠಲ



## ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು

### 17-07-2024 ರಿಂದ 20-07-2024 ರ ವರೆಗೆ

| | | | |
|---|---|---|---|
| 17-07-2024 | ಬುಧವಾರ | ----- | ಅಂಕುರಾರ್ಪಣೆ |
| 18-07-2024 | ಗುರುವಾರ | ಪಂಚಮೂರ್ತಿಗಳಿಗೆ ಸ್ನಪನ ತಿರುಮಂಜನ | ಪವಿತ್ರ ಮಂಡಲ ಪೂಜೆ, ಹೋಮ |
| 19-07-2024 | ಶುಕ್ರವಾರ | ಗ್ರಂಧಿ ಪವಿತ್ರ ಸಮರ್ಪಣೆ ವ್ರತಚರಿ | ಪವಿತ್ರ ಪ್ರತಿಷ್ಠೆ ವ್ರತಚರಿ |
| 20-07-2024 | ಶನಿವಾರ | ಪವಿತ್ರ ಸಮರ್ಪಣೆ ಪವಿತ್ರೋತ್ಸವ ಸಮಾಪ್ತಿ | ಪಂಚ ಮೂರ್ತಿಗಳ ಮೆರವಣಿಗೆ |



ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀಕ್ರೋಧಿ ನಾಮ ಸಂವತ್ಸರ ಜ್ಯೇಷ್ಠ- ಆಷಾಢ ಮಾಸ ಸಂಚಿಕೆ

ಸಂಪುಟ : 03 ಜುಲೈ - 2024 ಸಂಚಿಕೆ : 12



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಜೆ. ಶ್ಯಾಮಲ ರಾವ್ ಐ.ಎ.ಎಸ್.
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ. ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ . ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು,
ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ.,ಪ್ರೆಸ್,
2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org**
ಮೂಲಕ ಓದಬಹುದು.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಗುರು-ಬದುಕಿನ ಬೆಳಕು | -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 07 |
| ಚಾತುರ್ಮಾಸ್ಯದ ತತ್ವ ಮತ್ತು ಚಿಂತನೆ | -ವೇ.ವಿ.ಶಿವರಾಮ ಜೋಗಳೇಕರ | 09 |
| ದಕ್ಷಿಣಾಯಣ ಪರ್ವ ಪುಣ್ಯಕಾಲ | -ಶ್ರೀಮತಿ. ಮಾಧುರಿ ದೇಶಪಾಂಡೆ | 12 |
| ಭೀಮನ ಅಮಾವಾಸ್ಯೆ | -ಶ್ರೀಮತಿ. ವೀಣಾ ರವಿಕುಮಾರ್ | 14 |
| ನೀರ್ಥಡಿಯ ರಂಗನಾಥ ಆಲಯ | -ಕೆಂಗೇರಿ ಚಕ್ರಪಾಣಿ | 16 |
| ಶ್ರೀದವಿಟ್ಠಲದಾಸರು | -ಡಾ.ಎನ್.ಜಿ.ವಿಜಯಲಕ್ಷ್ಮೀರಾಘವೇಂದ್ರಾಚಾರ್ಯ | 18 |
| ತಿರುಪತಿಯ ಶಾಸನಗಳಲ್ಲಿ ವಿಜಯನಗರ ಕಾಲದ ಜಲತಂತ್ರಜ್ಞಾನ ಒಂದು ಸಮೀಕ್ಷೆ | - ಡಾ॥ ಹರಿಹರ ಶ್ರೀನಿವಾಸರಾವ್ | 21 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | -ದಿ॥ ಶ್ರೀನಿವಾಸನ್ ಬಿ.ಎನ್. | 24 |
| ಶ್ರೀಕಲ್ಯಾಣವೇಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರದ ವೈಭವೋತ್ಸವಗಳು | ------------------- | 28 |
| ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ- ವರ್ಣಪ್ರಿಯ ಸಂಧಿ | -ಶ್ರೀಮತಿ-ಪ್ರಿಯಾ ಪ್ರಾಣೇಶ ಹರಿದಾಸ | 31 |
| ಗೋಧಿಯಿಂದ ಆರೋಗ್ಯ ಸಂರಕ್ಷಣೆ | -ಡಿ.ಎಸ್.ಬದ್ರಿನಾಥ್ | 34 |
| ವೇದವೂ ಮತ್ತು ವೇದವ್ಯಾಸರು | -ಶ್ರೀಮತಿ. ಕಲ್ಯಾಣಿ | 36 |
| ಚಾತುರ್ಮಾಸ್ಯದ ಕೆಲವು ವ್ರತಗಳು | -ಡಾ॥ ಸುಮನ ಬದರೀನಾಥ್ | 38 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ. ಆರ್. ನರಸಿಂಹನ್ | 42 |
| ಶ್ರೀವೆಂಕಟಾಚಲ ಮಹಾತ್ಮೆ | -ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ -ಧರ್ಮಶಾಸ್ತ್ರದಲ್ಲಿ ಸಂಕಲ್ಪದ ಮಹತ್ವ | - ಪ್ರಣವ | 48 |
| ಚಿತ್ರಕಥೆ -ದೈವ ದೂಷಣೆ ಮಹಾಪಾಪ | -ಶ್ರೀಮತಿ. ವಿ. ನಾಗವಲ್ಲಿ | 52 |

ಮುಖಚಿತ್ರ - ಸ್ವಾಮಿಯವರ ಆಣಿವಾರ ಆಸ್ಥಾನ, ತಿರುಮಲೆ
ಹಿಂಬದಿಚಿತ್ರ - ವೇದವ್ಯಾಸರು (ಚಿತ್ರಕಲೆ)

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಂ
ಪಾ
ದ
ಕೀ
ಯ

# ಆದರ್ಶ ಗುರುಗಳು

'ಗಿರಿಯೋ ಗರವಸ್ತೇಭ್ಯೋಽ ಪ್ಯುರ್ವೀ ಗುರ್ವೀ ತತೋಽಪಿ ಜಗದಂಡಮ್।
ತಸ್ಮಾದಪ್ಯತಿ ಗುರವಃ ಪ್ರಲಯೇಽ ವ್ಯಚಲಾಮಹಾತ್ಮನಃ॥

ಪರ್ವತಗಳು ಅತ್ಯಂತ ಭಾರವಾದವು. ಅವುಗಳಿಗಿಂತಲೂ ಭೂಮಿ ತೂಕ ಹೆಚ್ಚು ಅದಕ್ಕಿಂತಲೂ ಬ್ರಹ್ಮಾಂಡವು ಅತ್ಯಂತ ಭಾರವಾದುದು. ಇವೆಲ್ಲವೂ ಪ್ರಳಯಕಾಲದ ಸಮಯದಲ್ಲಿ ನಾಶವಾಗುವಂತಹುವು. ಆದರೆ ಪ್ರಳಯ ಕಾಲದಲ್ಲೂ ಗುರುತ್ವವನ್ನು ಕಾಪಾಡಿಕೊಳ್ಳುವಂತಹಾ, ಆ ಸಮಯದಲ್ಲೂ ಅಚಲವಾಗಿರುವಂತಹವರು ಮಹಾತ್ಮರು.ಯಾವ ವಿದ್ಯಾರ್ಥಿಗೇ ಆದರೂ ಗುರುಕೃಪೆ, ಗುರುವಿನ ಅನುಗ್ರಹವಿಲ್ಲದೇ ವಿದ್ಯೆಯು ಒಲಿಯುವುದಿಲ್ಲ. ಆ ವಿದ್ಯಾರ್ಥಿಯ ಓದು ಸಾರ್ಥಕವಾಗುವುದಿಲ್ಲ. ವಿದ್ಯಾಭ್ಯಾಸವು ಸಂಪೂರ್ಣವಾಗಬೇಕೆಂದರೆ ಗುರುವಿನ ಉಪದೇಶ, ಮಾರ್ಗದರ್ಶನ ಬಹಳ ಮುಖ್ಯವಾದುದು. ವಿದ್ಯಾರ್ಥಿಯಲ್ಲಿ ಹುದುಗಿರುವ ಜ್ಞಾನದಾಹವನ್ನು ತೀರಿಸಬೇಕೆಂದರೆ ಅದು ಗುರುವಿನಿಂದ ಮಾತ್ರ ಸಾಧ್ಯವಾಗುತ್ತದೆ. ಅಂತಹ ಉತ್ತಮವಾದ ಗುರುವನ್ನು ಹುಡುಕುವುದೇ ವಿದ್ಯಾರ್ಥಿಯ ಪ್ರಪ್ರಥಮ ಕರ್ತವ್ಯವಾಗಿರುತ್ತದೆ.

ಗುರುವೂ ಸಹ ತನ್ನ ಬಳಿಗೆ ವಿದ್ಯೆಯನ್ನು ಕಲಿಯಲು ಬರುವ ವಿದ್ಯಾರ್ಥಿಗೆ ತನ್ನಲ್ಲಿರುವ ಜ್ಞಾನ ಭಂಡಾರವನ್ನು ಧಾರೆಯರೆಯಬೇಕು. ಆದರೆ ಆ ದಾನ ಸತ್ಪಾತ್ರರಿಗೆ ಮಾತ್ರ ಲಭ್ಯವಾಗುತ್ತದೆ. ಅದಕ್ಕೆ ಹಿರಿಯರು ಎಲ್ಲಾ ದಾನಗಳಿಗಿಂತಲೂ ಶ್ರೇಷ್ಠವಾದ ದಾನ ವಿದ್ಯಾದಾನ ಎಂದಿದ್ದಾರೆ.

"ಗುರು" ಎಂಬ ಶಬ್ದವನ್ನು ಕೇಳುತ್ತಲೇ ನಮ್ಮೆಲ್ಲರ ಮನಸ್ಸಿನಲ್ಲಿ ಒಂದು ರೀತಿಯ ಭಕ್ತಿಭಾವನೆ ಉಂಟಾಗುತ್ತದೆ. ಏಕೆಂದರೆ ದೊಡ್ಡವರು ತಿಳಿಸಿದಂತೆ ಗುರುಗಳು ತಂದೆ ತಾಯಿಗಳ ಸಮಾನ ಹಾಗೂ ಪೂಜ್ಯರು, ಗುರುವಿನ ಸ್ಥಾನ ಅತ್ಯಂತ ಉನ್ನತ ಮಟ್ಟದಲ್ಲಿರುತ್ತದೆ. ವಿದ್ಯಾರ್ಥಿಯು ಜ್ಞಾನವನ್ನು ಅರ್ಜಿಸಬೇಕೆಂದರೆ ಅದಕ್ಕೆ ಸದ್ಗುರುವಿನ ಅವಶ್ಯಕತೆ ಇದ್ದೇ ಇರುತ್ತದೆ. ಗುರುವು ಇಲ್ಲದಿದ್ದರೆ ವಿದ್ಯಾರ್ಥಿ ಕಣ್ಣಿದ್ದೂ ಕುರುಡನಾಗುತ್ತಾನೆ. ಅಂಧನು ಮುನ್ನಡೆಯುವುದಕ್ಕೆ ಯಾವ ರೀತಿ ಒಂದು ಆಧಾರವು ಮುಖ್ಯವಾಗಿ ಬೇಕಾಗುತ್ತದೇ, ಹಾಗೇ, ವಿದ್ಯಾರ್ಥಿಗೆ ಗುರುವಿನ ಮಾರ್ಗದರ್ಶನ ಮುಖ್ಯವಾಗುತ್ತದೆ. ಅದಕ್ಕೆ ತಮಸೋಮಾ ಜ್ಯೋತಿರ್ಗಮಯಾ ಎಂದು ಗುರುವಿನ ಬಗೆಗೇ ಹೇಳಿದ್ದಾರೆ.

ಒಂದು ಮಗು ಜನ್ಮಿಸುವುದಕ್ಕೆ ತಂದೆ ಕಾರಣವಾದರೆ ಒಬ್ಬ ಗುರುವು ಆ ಮಗುವು ವಿದ್ಯಾರ್ಥಿಯಾದಾಗ ಅದಕ್ಕೆ ಜ್ಞಾನವನ್ನು ಧಾರೆ ಎರೆದು ಅವನ ಸಂಪೂರ್ಣ ಜೀವನಕ್ಕೆ ಮಾರ್ಗದರ್ಶನ ಮಾಡುತ್ತಾನೆ. ಜ್ಞಾನವೆಂದರೆ ಕೇವಲ ಉತ್ತಮ ಪುಸ್ತಕವನ್ನು ಓದುವುದೆಂದು ಅರ್ಥವಲ್ಲ. ಮಾನವನು ಮಾನವತೆಯಿಂದ ದೈವತ್ವದ ಕಡೆಗೆ ಸಾಗುವುದಕ್ಕೆ ಬೇಕಾಗಿರುವ ಮುಖ್ಯವಾದ ಸಾಧನ.

ಮಾನವನು ಕೆಲವು ಪರಿಸ್ಥಿತಿಯಲ್ಲಿ ತನ್ನ ನೀಚವಾದ ಕೆಲಸಗಳಿಂದ ರಾಕ್ಷಸ ಗುಣವನ್ನು ಹೊಂದಿರುವ ವ್ಯಕ್ತಿಯಂತೆ ಬದಲಾಗುತ್ತಾನೆ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಎಂಬ ನಾಣ್ನುಡಿಯಂತೆ ಹುಟ್ಟಿದಾಗಿನಿಂದಲೇ ನಮ್ಮಲ್ಲಿ ಸತ್ಪ್ರವರ್ತನೆ, ಸನ್ನಡತೆ, ಸದ್ಭಾವನೆಗಳು ಅಂಕುರವಾಗಬೇಕು. ಅವೆಲ್ಲವೂ ಬೆಳೆಯುತ್ತಿದ್ದಂತೆ ನಮ್ಮಲ್ಲಿ ಬೇರೂರಬೇಕು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಆದ್ದರಿಂದ ಮಕ್ಕಳಿಗೆ ಚಿಕ್ಕವಯಸ್ಸಿನಿಂದಲೇ ಒಳ್ಳೆಯ ವಿದ್ಯಾಭ್ಯಾಸವು ದೊರೆಯಬೇಕೆಂದರೆ ಸುಶಿಕ್ಷಿತವಾದ ಸದ್ಗುರುವು ದೊರೆಯಬೇಕು. ಸುಶಿಕ್ಷಿತರಾದ ಗುರುಗಳೇ ದೇಶದ ಆಸ್ತಿ! ಇಂತಹಾ ಅಮೂಲ್ಯವಾದ ಆಸ್ತಿಯನ್ನು ಪೋಷಿಸುವುದು ದೇಶದಲ್ಲಿರುವ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೆನ್ನುವುದು ಮರೆಯಬಾರದು.

ಪ್ರತಿಯೊಬ್ಬ ಗುರುವೂ ತನ್ನ ಕರ್ತವ್ಯವನ್ನು ಅತ್ಯಂತ ನಿಷ್ಠೆಯಿಂದ ಚಿತ್ತಶುದ್ಧಿಯಿಂದ ನಿರ್ವಹಿಸಬೇಕು. ಏಕೆಂದರೆ ಗುರುವಿನ ನಡವಳಿಕೆಯನ್ನೇ ವಿದ್ಯಾರ್ಥಿಯು ನೋಡಿ ಕಲಿಯುತ್ತಾನೆ. ಆತನಲ್ಲಿ ಗುರುವಿನ ಗುಣಗಳು, ನಡತೆಗಳು ಪ್ರತಿಬಿಂಬಿಸುತ್ತವೆ. ಅಷ್ಟೇ ಅಲ್ಲದೇ ಆ ಗುರುವಿನ ಮಾತುಗಳನ್ನೇ ವಿದ್ಯಾರ್ಥಿಯು ಕಲಿಯುತ್ತಾನೆ. ಆದ್ದರಿಂದ ಗುರುವಿನ ಮಾತುಗಳು, ನಡವಳಿಕೆಗಳು ಸ್ವಲ್ಪ ಹೆಚ್ಚೂ ಕಡಿಮೆಯಾದರೂ ವಿದ್ಯಾರ್ಥಿಯ ಮೇಲೆ ಅದು ಪ್ರಭಾವ ಬೀರುತ್ತವೆ. ಗುರುವೆಂದರೆ ನಡೆದಾಡುವ ಗ್ರಂಥಾಲಯದಂತಹವನು, ತನ್ನ ನಡವಳಿಕೆ, ಜ್ಞಾನಗಳಿಂದ ಅಯಸ್ಕಾಂತದಂತೆ ವಿದ್ಯಾರ್ಥಿಯನ್ನು ತನ್ನೆಡೆಗೆ ಸೆಳೆದುಕೊಳ್ಳಬೇಕು. ವಿದ್ಯಾಲಯವೇ ದೇವಸ್ಥಾನ! ಆದ್ದರಿಂದ ನಾವು ಗುರುವನ್ನು ದೇವರಂತೆ ಪೂಜಿಸಬೇಕು. ವಿದ್ಯಾಲಯದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳೂ ದೇವರ ಪೂಜೆಯಂತದು. ಆದ್ದರಿಂದ ಪೂಜೆ ಸರಿಯಾಗಿ ನಡೆಯಬೇಕು. ಇದಕ್ಕೆ ಎಲ್ಲರ ಸಹಕಾರದ ಅಗತ್ಯವಿದೆ. ಸಹಕಾರವಿದ್ದರೆ ಸಾಧ್ಯವಾಗದೇ ಇರುವುದೇನಿದೆ? ಈ ಸಹಕಾರದಲ್ಲಿ ಒಟ್ಟು ಮೂರುವಿಧಗಳಿವೆ. ಅವು ಮನಸಾ, ವಾಚಾ, ಕರ್ಮಣಾ ಮಾಡುವಂತಹಾ ಸಹಾಯಗಳು, ಪ್ರತಿಯೊಂದು ಒಂದು ರೀತಿಯಲ್ಲಿ ತನ್ನದೇ ಆದ ಫಲವನ್ನು ನೀಡುತ್ತದೆ. ಒಬ್ಬ ವಿದ್ಯಾರ್ಥಿಯ ಜೀವನದಲ್ಲಿ ಇಷ್ಟೊಂದು ಮಹತ್ವವಾದ ಪಾತ್ರವನ್ನು ವಹಿಸುವಂತಹಾ ಗುರುವಿನ ದಾರಿಯಲ್ಲಿ ನಡೆಯುತ್ತಾ ಆದರ್ಶಪ್ರಾಯರಾಗಲೆಂದು ಬಯಸೋಣ.

**ಗುರುಬ್ರಹ್ಮಾ ಗುರುವಿಷ್ಣು ಗುರುದೇವೋ ಮಹೇಶ್ವರಃ**
**ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀಗುರವೇ ನಮಃ**



# ಗುರು ಬದುಕಿನ - ಬೆಳಕು

-ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

**97393 69621**

ಆಷಾಢ ಶುಕ್ಲ ಪೂರ್ಣಿಮೆಯನ್ನು ವ್ಯಾಸಪೂರ್ಣಿಮೆಯೆಂದೂ 'ಗುರುಪೂರ್ಣಿಮೆ'ಯೆಂದೂ ಕರೆಯುತ್ತಾರೆ. ನಮಗೆ ವಿದ್ಯೆಯನ್ನು ನೀಡಿ ಬಾಳಿಗೆ ಬೆಳಕನ್ನು ನೀಡಿದ ಎಲ್ಲ ಗುರುಪರಂಪರೆಯನ್ನು ಸ್ಮರಿಸಿ ಗೌರವಿಸುವ ದಿನವೇ ಗುರುಪೂರ್ಣಿಮೆ. 'ಗು' ಎಂದರೆ ಕತ್ತಲೆ, ಅವಿದ್ಯೆ; ಅದನ್ನು ಹೋಗಲಾಡಿಸುವವನೇ ಗುರು. ಜೀವನಕ್ಕೆ ವಿದ್ಯೆಯ ನೆರವು ಇಲ್ಲದಿದ್ದರೆ ಬಾಳಿನ ಹಾದಿ ಸುಗಮವಾಗದು.

ನಮ್ಮ ಗುರಿಯನ್ನು ತಲುಪಲು ಅರಿವಿನ ಬೀಜವನ್ನು ನಮ್ಮಲ್ಲಿ ಬಿತ್ತುವವನೇ ಗುರು. ಅಂಥ ಗುರುವನ್ನು ಸ್ಮರಿಸಿ ಆರಾಧಿಸಬೇಕಾದ್ದು ನಮ್ಮ ಕರ್ತವ್ಯ. ದಕ್ಷಿಣಮೂರ್ತಿಯನ್ನು ಆದಿಗುರು ಎಂದು ನಮ್ಮ ಪರಂಪರೆಯಲ್ಲಿ ಸ್ವೀಕರಿಸಲಾಗಿದೆ. ವ್ಯಾಸಪೂರ್ಣಿಮೆಯ ದಿನ ಸನ್ಯಾಸಿಗಳು ಚಾತುರ್ಮಾಸ್ಯ ವ್ರತವನ್ನು ಆರಂಭಿಸುತ್ತಾರೆ. ಇದೂ ಕೂಡ ವಿದ್ಯೆಯ ಅನುಸಂಧಾನಕ್ಕೆ ಪೂರಕವಾಗಿದೆ. ಲೌಕಿಕ ವಿದ್ಯೆಯನ್ನು ನೀಡಿದ ಗುರುಗಳಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಹೀಗಾಗಿ ಎಲ್ಲ ಗುರುಗಳನ್ನೂ ಆರಾಧಿಸುವ ಪರ್ವ ದಿನವೇ 'ಗುರುಪೂರ್ಣಿಮೆ'.

ಗುರುಪೂರ್ಣಿಮೆ ಕೇವಲ ವೈದಿಕ ಸಂಪ್ರದಾಯಕ್ಕಷ್ಟೇ ಮೀಸಲಾದ ಪರ್ವ ದಿನವಲ್ಲ, ಎಲ್ಲ ಪಂಥದವರೂ ಗುರು ಪೂರ್ಣಿಮೆಯನ್ನು ಆಚರಿಸುವುದುಂಟು. ಸಿದ್ಧಾರ್ಥನಾಗಿದ್ದವನು ಬುದ್ಧನಾಗಿ ಮೊದಲ ಧರ್ಮ ಪ್ರವಚನವನ್ನೂ ನೀಡಿದ ದಿನವೇ ಆಷಾಢಹುಣ್ಣಿಮೆ. ದಕ್ಷಿಣಾಮೂರ್ತಿ ಎಲ್ಲ ಅರಿವಿನ ಮೂಲಪುರುಷ, ಜ್ಞಾನ ಎನ್ನುವುದು ಎಲ್ಲ ಕಾಲಕ್ಕೂ ಶಕ್ತಿಶಾಲಿಯಾದದ್ದು ಎನ್ನುವುದನ್ನು ಸಂಕೇತಿಸುವಂತೆ ಅವನು ತಾರುಣ್ಯದಲ್ಲಿ ಬೆಳಗುತ್ತಿರುವವನು. ಭಗವಾನ್ ವ್ಯಾಸರು ವೇದವನ್ನು ವಿಂಗಡಿಸಿ ಜ್ಞಾನದ ಅನುಸಂಧಾನಕ್ಕೆ ನೆರವಾದವರು. ಮಾತ್ರವಲ್ಲ ಮಹಾಭಾರತ ಮತ್ತು ಪುರಾಣಗಳನ್ನು ರಚಿಸಿ ಜ್ಞಾನ ಪ್ರಸಾರವನ್ನು ನಿರಂತರವಾಗಿ ಮಾಡುತ್ತಿರುವವರು. ಬುದ್ಧ ಜಗತ್ತಿನ ದುಃಖದ ಮೂಲವನ್ನು ಕಂಡು ಹಿಡಿದು ಅದನ್ನು ಹೋಗಲಾಡಿಸುವ ದಾರಿಯನ್ನೂ ಸೂಚಿಸಿದವನು.

ಗುರು ಶಿಷ್ಯ ಪರಂಪರೆಗೆ ಗೌರವ ಮನ್ನಣೆಗಳು ಈಗಲೂ ಇವೆಯೇ ಎಂದರೆ ಸಂಪೂರ್ಣ ಇಲ್ಲವೆನ್ನಲಾಗದು. ಅಪರೂಪಕ್ಕೊಂಬಂತೆ ಅಂತಹ ಗುರುಗಳೂ ಇದ್ದಾರೆ. ಅಂತಹ ಶಿಷ್ಯರೂ ಇದ್ದಾರೆ. ಆದರೆ ಅವರು ಅತಿ ಅಲ್ಪ ಸಂಖ್ಯಾತರೆಂಬುದೇ ಇಂದಿನ ದುರಂತ. ಎಷ್ಟೇ ದೊಡ್ಡ ಹುದ್ದೆಯಲ್ಲಿದ್ದೂ ತಾವು ಕಲಿತ ಪ್ರೈಮರಿ ಶಾಲೆಯ ಮಾಸ್ತರ ಬಗೆಗೆ ಭಕ್ತಿ ಗೌರವಗಳನ್ನು ತೋರುವವರು ಈಗಲೂ ಸಿಗುತ್ತಾರೆ. ಅದಕ್ಕೆ ಕಾರಣ ಆ ಗುರುಗಳು ನೀಡಿದ ವಿದ್ಯೆ ಜೇಡಿಮಣ್ಣಿನಂತಿದ್ದ ತನ್ನನ್ನು ತಿದ್ದಿ ತೀಡಿ ಸುಂದರ ಮೂರ್ತಿಯನ್ನಾಗಿ ರೂಪಿಸಿದ್ದು ಅವರ ಕೃಪಾ ಕಟಾಕ್ಷ.

ಪ್ರಾಚೀನ ಕಾಲದಲ್ಲಿ ವಿದ್ಯಾರ್ಜನೆಗಾಗಿ ಶಿಷ್ಯ ಗುರುವಿನ ಬಳಿಗೇ ಹೋಗುತ್ತಿದ್ದ. ಅವನ ಪದತಲದಲ್ಲಿ ಕುಳಿತು ವಿದ್ಯಾರ್ಜನೆಯನ್ನು ಒಂದು ತಪಸ್ಸೆಂದು ಭಾವಿಸಿ ಕಲಿಯುತ್ತಿದ್ದ. ಆ ವಿದ್ಯೆಯೋ ಲೌಕಿಕ ಪ್ರಯೋಜನಕ್ಕಿಂತ ಮುಕ್ತಿಯ ಮಾರ್ಗ ತೋರುವಂತಹದಾಗಿತ್ತು. 'ಸಾ ವಿದ್ಯಾ ಯಾ ವಿಮುಕ್ತ ಯೇ' ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ' ಎಂಬ ಮಾತುಗಳು ಇದಕ್ಕೆ ಸಾಕ್ಷಿಯಾಗಿವೆ. ಆಗ ಗುರುವಾದವನು ವಿದ್ಯೆಯನ್ನು ಸತ್ಪಾತ್ರರಿಗೆ ದಾನ ಮಾಡುತ್ತಿದ್ದನೇ ಹೊರತು ಈಗಿನಂತೆ ಸತ್ಪಾತ್ರನೋ,

ಅಪಾತ್ರನೋ ಎಂಬುದನ್ನು ಲೆಕ್ಕಿಸದೆ ವಿದ್ಯೆಯ ವಿಕ್ರಯ ಮಾಡುತ್ತಿರಲಿಲ್ಲ. ವಿದ್ಯಾರ್ಥಿ ಎಂಬುದಕ್ಕೆ ಅರ್ತ 'ವಿದ್ಯೆಯ ಯಾಚಕ' ಎಂದಾಗುತ್ತದೆ. ಆದರೆ ಈಗ ವಿದ್ಯಾರ್ಥಿ ನಿಜ ವಾದ ಅರ್ಥದಲ್ಲಿ ನೌಕರಿಯ ಅರ್ಥಿ, ಧನಾರ್ಥಿಯೇ ಆಗಿ ದ್ದಾನೆ, ಹೀಗೆ ಶಿಷ್ಯನ ಮೂಲ ಉದ್ದೇಶವೇ ಹಳ್ಳ ಹಿಡಿದಿರು ವುದು ಒಂದು ಕಡೆಯಾದರೆ ಮಹಾಪಾಪ ಎಂದು ಭಾವಿಸುವ ಗುರು ಈಗ ಇಲ್ಲ. 'ನನ್ನಲ್ಲಿ ವಿದ್ಯೆ ಎಂಬ ಸರಕಿದೆ, ನಿನ್ನಲ್ಲಿ ಹಣವಿದ್ದರೆ ಕೊಂಡುಕೋ' ಎನ್ನುವ ಗುರುಗಳು ನನ್ನಲ್ಲಿ ಹಣವಿದೆ ನೀನು ಕಲಿಸುವ ವಿದ್ಯೆಯ ರೇಟೆಷ್ಟು ಹೇಳು' ಎಂಬ ಶಿಷ್ಯರು ಇವರ ಸಂಖ್ಯಾ ಬಾಹುಳ್ಯದಿಂದ ಶಿಕ್ಷಣ ರಂಗ ಕುಲ ಗೆಟ್ಟು ಹೋಗಿದೆ. ಒಳ್ಳೆಯ ಉದ್ಯೋಗ ಸಿಗದ ಕಾರಣಕ್ಕೆ ಶಿಕ್ಷಕ ರಾಗಿ ಕೆಲಸಕ್ಕೆ ಸೇರಿಕೊಂಡು ಅದನ್ನು ಹೊಟ್ಟೆ ಪಾಡಿನ ಉದ್ಯೋಗವೆಂದು ತಿಳಿದವರೇ ಈಗ ಹೆಚ್ಚು! ಈ ವಿದ್ಯಮಾನ ಗಳೇ ಎಲ್ಲ ಪಲ್ಲಟಗಳಿಗೂ ಕಾರಣವಾಗಿದೆ.

'ಇತಿಹಾಸದಲ್ಲಿ ಆಡಳಿತಗಾರರು' ಎಂದರೆ ರಾಜ ಮಹಾರಾಜರು ಎಂದೇ ಅರ್ಥ. ಅವರಿಗೆ ಸಲಹೆ ನೀಡಲು ರಾಜಗುರುಗಳು ಇರುತ್ತಿದ್ದರು. ಆ ಗುರುಗಳು ಮಠದ ಸ್ವಾಮಿಗಳೇ ಆಗಿರಬೇಕಾಗಿರಲಿಲ್ಲ. ಆದರೆ ಅವರು ಧರ್ಮ ಸೂಕ್ಷ್ಮಗಳನ್ನು ಚೆನ್ನಾಗಿ ಬಲ್ಲವರೂ, ವಿವೇಕವಂತರೂ, ಪ್ರಜ್ಞಾವಂತರೂ ಆಗಿರುತ್ತಿದ್ದರು ಎಂಬುದು ಮಾತ್ರ ನಿಶ್ಚಿತ. ರಾಜನಿಗೆ ಅವರು ಕೇವಲ ಬೌದ್ಧಿಕ ಆಧ್ಯಾತ್ಮಿಕ ಮಾರ್ಗದರ್ಶನ ನೀಡುತ್ತಿರಲಿಲ್ಲ ಜೊತೆಗೆ ಆಡಳಿತಾತ್ಮಕ ಸಮಸ್ಯೆಗಳು ಬಂದಾಗ, ಧರ್ಮ ಸಂಕಟದ ಸ್ಥಿತಿಗಳು ಉದ್ಭವವಾದಾಗ ಸಲಹೆಗಳನ್ನು ನೀಡು ತ್ತಿದ್ದರು. ಈಗ ರಾಜ ಪ್ರಭುತ್ವ ಹೋಗಿ ಪ್ರಜಾಪ್ರಭುತ್ವ ಬಂದಿದೆ. ಹಿಂದಿನ ರಾಜರುಗಳಿಗೆ ಸಲಹೆಗಾರರಾಗಿ ಗುರುಗಳಿದ್ದಂತೆ ಈಗಿನ ರಾಜಕಾರಣಿಗಳಿಗೂ ಗುರುಗಳಿರಬೇಕು ಎಂದು ನಿರೀಕ್ಷಿಸುವುದು ತಪ್ಪು. ಈಗಿನ ರಾಜಕಾರಣಿಗಳಿಗೆ ಅಂತಹ ಬೌದ್ಧಿಕ, ಆಧ್ಯಾತ್ಮಿಕ ಹಸಿವೂ ಇಲ್ಲ ಇರುವಂತೆ ತೋರಿಸಿ ಕೊಂಡರೂ ಅದು ಅವರು ಅಭಿನಯಿಸಲಿರುವ ದೊಡ್ಡಾಟದ ಒಂದು ಸಣ್ಣ ಅಂಕ ಅಷ್ಟೆ! ಅವರು ಮಠಗಳಿಗೆ ಹೋಗು ತ್ತಾರಾದರೂ ಅದು ಬೌದ್ಧಿಕ ಆಧ್ಯಾತ್ಮಿಕ ಮಾರ್ಗದರ್ಶನ ಪಡೆಯಲು ಖಂಡಿತಾ ಅಲ್ಲ. ತಾವು ಹೋಗುವ ಮಠಗಳ ಅನುಯಾಯಿಗಳಿಗೆ ಅದರಿಂದ ಸಂತೋಷವಾಗುತ್ತದೆ ಅವರು ತನ್ನನ್ನು ಬೆಂಬಲಿಸುತ್ತಾರೆ. ಇನ್ನು ಗುರುಗಳ ವಿಷಯಕ್ಕೆ ಬಂದರೆ ಅವರಿಗೆ ತಾವು ಪ್ರತಿನಿಧಿಸುವ ಸಮುದಾಯದ ಹಿತ ಚಿಂತನೆಯೇ ಮೊದಲ ಆದ್ಯತೆಯಾಗಿರುತ್ತದೆ. ಹೀಗಾಗಿ ಅವರು ತಮ್ಮ ಸಮುದಾಯವೆಂಬ ಆಯಾಮವನ್ನೂ ಮೀರಿ ಇಡೀ ರಾಜ್ಯದ ರಾಷ್ಟ್ರದ ಹಿತವನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಲಹೆ ನೀಡುತ್ತಾರೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ.

ನಮ್ಮ ದೇಶದ ಪ್ರಾಚೀನ ಸಾಹಿತ್ಯದಲ್ಲಿ ಗುರು ಶಿಷ್ಯರ ಸಂಬಂಧದ ಬಗೆಗೆ ವ್ಯಾಪಕ ಉಲ್ಲೇಖಗಳು ಬರುತ್ತವೆ. ಗುರುವಿನ ಪದತಲದಲ್ಲಿ ಭಕ್ತಿಯಿಂದ ಕುಳಿತು ಕಲಿಯಬೇಕು. ಆದರೆ ಅವರು ಹೇಳಿದ್ದನ್ನೆಲ್ಲಾ ಕುರುಡಾಗಿ ನಂಬಬಾರದು. ಅವರು ಹೇಳಿದ್ದನ್ನು ಪ್ರಶ್ನಿಸಿ ಸಂಶಯಗಳನ್ನು ನಿವಾರಿಸಿಕೊಂಡೇ ನಂಬಬೇಕು. ಗುರುವನ್ನು ಹೊರಗೆ ಅರಸುವುದಕ್ಕಿಂತ ತನ್ನೊಳಗೇ ಕಂಡು ಕೊಳ್ಳಬೇಕೆನ್ನುತ್ತಾರೆ ಶರಣರು. ತನ್ನ ತಾನರಿದವರಿಗೆ ತನ್ನರಿವೇ ಗುರು ಎಂಬುದು ಅವರ ಮಾತಿನ ಸಾರವಾಗಿದೆ. ಶಿವಪಥ ನರಿ ವಡೆ ಗುರುಪಥವೇ ಮೊದಲು ಎಂದು ಬಸವಣ್ಣನವರು ಹೇಳಿ ದ್ದಾರೆ. ಭವಸಾಗರವನ್ನು ದಾಟಿಸುವ ಗುರುವನ್ನು ಎಲ್ಲ ಭಕ್ತರೂ ಕೊಂಡಾಡಿದ್ದಾರೆ. ಹಾಕಿದ ಜನಿವಾರವಾ ಸದ್ಗುರುರಾಯ ನೂಕಿದ ಭವಭಾರವಾ ಎಂದು ಹಾಡಿದ್ದಾರೆ. ಶಿಶುನಾಳ ಶರೀ ಫರು,ಅಜ್ಞಾನವೆಂಬ ಕತ್ತಲಿಗೆ ಗುರು ಜ್ಞಾನದ ಸೂರ್ಯ, ಗುರುವೇ ಬ್ರಹ್ಮ, ವಿಷ್ಣು ಮಹೇಶ್ವರ ಎಂದು ಸಾರುವ ಮಂತ್ರವೊಂದಿದೆ. ಗುರುವೆಂದರೆ ನರನಲ್ಲ, ಸಾಕ್ಷಾತ್ ಹರ, ಒಟ್ಟಾರೆ ಗುರುವೆಂದರೆ ನಡೆದಾಡುವ ದೇವರು ಎಂದೇ ನಮ್ಮ ಪ್ರಾಚೀನ ಸಾಹಿತ್ಯ ಸಾರು ತ್ತಿದೆ.



**ಸ್ವಾಮಿಯ ಆಲಯದಲ್ಲಿ**
**ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

– ಕಾರ್ಯನಿರ್ವಹಣಾಧಿಕಾರಿ



# ಚಾತುರ್ಮಾಸ್ಯದ ತತ್ವ ಮತ್ತು ಚಿಂತನೆ

**ವೇ.ವಿ-ಶಿವರಾಮ ಜೋಗಳೇಕರ**
**8275180641**

ಹಬ್ಬ ಹರಿದಿನಗಳು ವ್ರತ ಉಪಾಸನೆ ಇತ್ಯಾದಿ ನಮ್ಮ ಧಾರ್ಮಿಕ ಮತ್ತು ಸಾಮಾಜಿಕ ಜೀವನದಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿರುವ ಅತ್ಯಂತ ಮುಖ್ಯವಾದ ಮತ್ತು ಪರಿಚಿತವಾದ ವಿಷಯ. ವ್ರತ, ಉಪಾಸನೆ ಹರಿದಿನಗಳು ಹೆಚ್ಚು ಚಾತುರ್ಮಾಸದಲ್ಲಿರುತ್ತದೆ. ಹಬ್ಬಗಳಂತೂ ಸಾಮಾನ್ಯವಾಗಿ ಇಡೀ ಮನುಷ್ಯ ವರ್ಗಕ್ಕೆ ಸಹಜ ಪ್ರೀತಿಯ ಉತ್ಸಾಹದ ವಿಷಯ. "ಉತ್ಸವ ಪ್ರಿಯಾಃ ಖಲು ಮನುಷ್ಯಾಃ" ಎಂದು ಮಹಾಕವಿ ಕಾಳಿದಾಸನೂ ಈ ಸತ್ಯವನ್ನು ಗಮನಿಸಿದ್ದಾನೆ. ನಮ್ಮ ಹಬ್ಬ ಹರಿ ದಿನ ಉಪವಾಸ, ಉಪಾಸನೆ ಇವುಗಳು ಜ್ಞಾನ ವಿಜ್ಞಾನ ಪೂರ್ಣವಾಗಿವೆ. ಅವುಗಳ ಸ್ವರೂಪವನ್ನು ತಪೋ ಜ್ಞಾನ ಸಮಾಧಿಗಳಿಂದ ಮಹರ್ಷಿಗಳು ಕಂಡು ಅದನ್ನು ನಮಗೆ ಬೋಧಿಸಿದರು. ಕಾಲರೂಪವಾದ ಶರೀರವನ್ನು ಅದರ ಅಂಗೋಪಾಂಗಗಳೊಡನೆ ಚೆನ್ನಾಗಿ ಅರ್ಥಮಾಡಿಕೊಂಡು. ದೇಹ ದೇಶಗಳನ್ನು ಗಮನಿಸಿ ಆತ್ಮನಿಗೆ ನಾಲ್ಕು ಪುರುಷಾರ್ಥಗಳನ್ನು ಮತ್ತು ಶ್ರೇಯೋಮಾರ್ಗಗಳನ್ನು ದೊರಕುವಂತೆ ಅನೇಕ ಹಬ್ಬ-ಹರಿದಿನ ಉಪಾಸನೆ ಉಪವಾಸ ಇತ್ಯಾದಿಗಳು ನಮಗೆ ದಾರಿದೀಪವೆನಿಸಿವೆ. ಇದರೊಳಗೆ ಬಹು ಮುಖ್ಯವಾಗಿ ಚಾತುರ್ಮಾಸ್ಯ ನಾಲ್ಕು ತಿಂಗಳು ವ್ರತ-ಉಪವಾಸ-ಉಪಾಸನೆ ಗಮನಿಸಬಹುದಾಗಿದೆ.

ಉಪವಾಸ-ಸಾಮಾನ್ಯ ಅರ್ಥ. ಉಪವಾಸ ಎಂದರೆ ಆಹಾರ ಪಾನೀಯಗಳನ್ನು ಸೇವಿಸದೆ ಇರುವುದು ಎಂಬ ಅಭಿಪ್ರಾಯ ಬರುತ್ತದೆ. ಹೀಗೆ ಹೊರಗಿನ ಆಹಾರ ಪಾನೀಯಗಳನ್ನು ವರ್ಜಿಸುವುದು ಉಪವಾಸವ್ರತದ ಹೊರಗಿನ ಲಕ್ಷಣ ಎಂದು ಶಾಸ್ತ್ರಗಳೂ ಗಮನಿಸುತ್ತವೆ. "ಯಜ್ಞೇನ ತಪಸಾ ಅನಾಶಕೇನ" (ಬೃ.ಆ.ಉಪನಿಷತ್) ಉಪವಾಸ, ಉಪವಸನಂ, ಜಾಪವಸ್ತಂ,ಉಪ್ರೋಷಿತಂ ಎಂಬ ಶಬ್ದಗಳಿಂದ ಈ ನಿಯಮವು ಕರೆಯಲ್ಪಡುತ್ತದೆ. ಧಾತುಗಳಿಗೆ ಅನೇಕ ಅರ್ಥಗಳಿರುವುದರಿಂದ ಈ ಶಬ್ದಗಳಿಗೆ ಭೋಜನವನ್ನು ತ್ಯಜಿಸುವಿಕೆ ಎಂಬ ಅರ್ಥವು ಬಂದಿದೆ. "ಅನೇಕಾರ್ಥತ್ವಾದ ಭೋಜನೇ ವೃತ್ತಿಃ" ಉಪವಾಸ ಉಪವಸನ ಎಂಬ ಪದಗಳಿಗೆ ಸಮೀಪದಲ್ಲಿ ವಾಸ ಮಾಡುವುದು ಎಂದು ಅರ್ಥ, ಯಾರ ಸಮೀಪದಲ್ಲಿ ವಾಸ? ಯಾರ ಸಹವಾಸದಲ್ಲಿರಬೇಕು? ಈ ಪ್ರಶ್ನೆ ಏಳುತ್ತದೆ. ಪರಮಾತ್ಮನ ಸಮೀಪದಲ್ಲಿರಬೇಕು. ಆತ್ಮಗುಣಗಳೊಡನೆ ಕೂಡಿರುವುದೇ ಉಪವಾಸ, ಉಪವಾಸವೆಂದರೆ ಕೇವಲ ಶರೀರ ಶೋಷಣೆಯಲ್ಲ,

### ಉಪವಾಸ ಏಕೆ ಮಾಡಬೇಕು?

ಆಗಾಗ್ಗೆ ಲಂಘನ(ಉಪವಾಸ) ವನ್ನು ಮಾಡುತ್ತಿದ್ದರೆ ದೇಹವು ರೋಗರಹಿತವಾಗುತ್ತದೆ. "ಲಂಘನಂ ಪರಮೌಷಧಂ" ಎಂದಿದೆ ವೈದ್ಯಶಾಸ್ತ್ರ ಇದು ಅನುಭವಸಿದ್ಧವಾದ ಸಹಜವೂ ಆಗಿದೆ. ಆದರೆ ವ್ರತದ ಅಂಗವಾಗಿ ಹೇಳಲ್ಪಟ್ಟಿರುವ ಉಪವಾಸಕ್ಕೆ ಶರೀರದ ಆರೋಗ್ಯ ಸಾಧನೆಯಲ್ಲಿಯೇ ಪ್ರಯೋಜನವು ಪೂರ್ತಿಯಾಗುವುದಿಲ್ಲ. ದೇಹದ ಆರೋಗ್ಯವೂ ಆತ್ಮಧ್ಯಾನಕ್ಕೆ ಅವಶ್ಯಕವೇ. ಅನಾಮಯೀ ಯಾವದಾತ್ಮಾನಂ ಸಮ್ಮನ್ಯತೇ "ಆದರೆ ಉಪವಾಸವು ಬೇರೆ ರೀತಿಯಲ್ಲೂ ಧ್ಯಾನಕ್ಕೆ ಸಹಾಯ ಮಾಡುತ್ತಿದೆ.



ದೇಹವು ಆಹಾರವಿಲ್ಲದೆ ಲಘುವಾಗಿದ್ದರೆ ಈ ಇಂದ್ರಿಯ ವಿನಿಯೋಗ ಸೇವಾರೂಪದ ಉಪವಾಸಕ್ಕೂ ಸಹಾಯವಾಗುತ್ತದೆ. ಉಪವಾಸದ ತತ್ತ್ವವು ಆಧ್ಯಾತ್ಮಿಕವಾದುದು. ಇದು ಒಂದು ಮಾನಸಿಕ ಶಿಸ್ತು. ಒಟ್ಟಿನಲ್ಲಿ ಉಪವಾಸವು ಜಾಗರಣೆಯಂತೆಯೇ ಭಗವದಾರಾಧನೆ ಮತ್ತು ಯೋಗಗಳಿಗೆ ಒಂದು ಸಾಧನವೇ ಹೊರತು ಅದೇ ಸಾಧ್ಯವಲ್ಲ ಎಂಬ ಮುಖ್ಯವಾದ ವಿಷಯವನ್ನು ನೆನಪಿನಲ್ಲಿಡಬೇಕು. ಉಪವಾಸಕ್ಕೆ ದಾಸನಾಗಬೇಡ. ಅದನ್ನು ನಿನ್ನ ದಾಸನನ್ನಾಗಿ ಸ್ವೀಕರಿಸಿ ಪರಮಾತ್ಮ ಭಾವಕ್ಕೆ ಏರುವ ಏಣಿಯನ್ನಾಗಿ ಮಾಡಿಕೋ."ಎಂದು ಮಹಾತ್ಮರು ಉಪದೇಶ ಮಾಡಿರುವುದು ಇದೇ ಅರ್ಥದಲ್ಲಿ.

### ಇನ್ನು ಉಪಾಸನೆ ಕುರಿತು

ಉಪಾಸನೆಯೆಂದರೆ ಶಾಸ್ತ್ರವು ತಿಳಿಸಿಕೊಟ್ಟಿರುವ ಯಾವುದಾದರೊಂದು ಆಲಂಬನವನ್ನು ತೆಗೆದುಕೊಂಡು ಅದರಲ್ಲಿ ಒಂದು ಬಗೆಯ ಚಿತ್ತವೃತ್ತಿಯನ್ನು (ಅದಕ್ಕಿಂತ ಬೇರೆಯಾದ ಯಾವ ಚಿಂತನೆಗಳು ಬಾರದಂತೆ)ಸತತವಾಗಿ ನಡೆಸಿಕೊಂಡು ಬರುವುದು. ಉಪಾಸನೆಯು ಕರ್ತೃತಂತ್ರ ಮತ್ತು ಆವೃತ್ಯಪೇಕ್ಷ್ಯ ಉಪಾಸನೆಗೆ ಆಕಾರಯುಕ್ತವಾದದ್ದೇ ವಿಷಯವಾದ್ದರಿಂದ ಸಾಲಂಬನವು ದೇವತೆಯ ಗುಣಗಳಲ್ಲಿ ಚಿತ್ತವೃತ್ತಿಯ ಸತತ ಪ್ರವಾಹವಿರಬೇಕು. ಇಂತಹ ಉಪಾಸನೆಯಿಂದ ಸತ್ತ್ವಶುದ್ಧಿಯುಂಟಾಗಿ ವಸ್ತು ತತ್ತ್ವದ ಅರಿವಾಗುವುದು ಇದು ಆತ್ಮಜ್ಞಾನಕ್ಕೆ ಉಪಕಾರಿ. ಉಪಾಸ್ಯವಾದ ದೇವತೆಯ ಗುಣಸ್ವರೂಪ, ಸ್ವಭಾವದ ವಿಚಾರದಲ್ಲಿ ಶೃತಿಗಳು ಏನೇನು ತಿಳಿಸುತ್ತದೆಯೋ ಅದನ್ನು ಚೆನ್ನಾಗಿ ಮನನ ಮಾಡಿಕೊಂಡು ಮನಸ್ಸಿನಿಂದ ಅದರ ಬಳಿಗೆ (ಉಪ) ಬಂದು ಕುಳಿತುಕೊಳ್ಳುವುದು (ಆಸನ) ಎಂದು ಉಪಾಸನವನ್ನು ವಿವರಿಸುತ್ತದೆ. ಲೌಕಿಕ ವಸ್ತು ವಿಚಾರಗಳ ಜ್ಞಾನ ಅಡ್ಡ ಬರದೆ ಕೇವಲ ಆ ದೇವತೆಯ ಸ್ವರೂಪ ಮಾತ್ರ ಕಣ್ಮನಗಳಲ್ಲಿ ಬರುತ್ತಾ ಆ ದೇವತಾ ಸ್ವರೂಪವೇ ನಾನು ಎಂಬ ಅಭಿಮಾನ ಮೂಡುವವರೆಗೆ ಅದೇ ತಾನಾಗುವವರೆಗೆ ಚಿಂತಿಸುವುದು ಉಪಾಸನೆ.

### ಇನ್ನು ಚಾತುರ್ಮಾಸ್ಯ ಕುರಿತು ಗಮನಹರಿಸೋಣ

ಇದು ಪ್ರತಿ ವರ್ಷದಲ್ಲಿ ನಿಯತವಾಗಿ ನಾಲ್ಕು ತಿಂಗಳುಗಳಲ್ಲಿ ಬರುವ ವ್ರತವಾದ್ದರಿಂದ ಇದನ್ನು ಚಾತುರ್ಮಾಸ್ಯ ಎಂಬ ಹೆಸರಿನಿಂದ ಕರೆಯುತ್ತಾರೆ. ಚಾತುರ್ಮಾಸ್ಯವು ಅನೇಕರಿಗೆ ವ್ರತ ಪರಂಪರೆಯಲ್ಲಿ ಪರಿಚಿತವಾಗಿದ್ದರೂ ಅದು ಸಂನ್ಯಾಸಿಗಳಿಗೆ ಒಂದು ಸಮುದಾಯಕ್ಕೆ ಸಂಬಂಧ ಪಟ್ಟಿದ್ದು ಅದನ್ನು ಪರಿಗಣಿಸಬೇಕಾಗಿಲ್ಲ ಎಂದು ಕೆಲವರು ಭಾವಿಸುತ್ತಾರೆ. ಇದು ಸಂಪೂರ್ಣ ತಪ್ಪುತಿಳುವಳಿಕೆಯ ಫಲ. ಶಾಸ್ತ್ರಗಳ ದೃಷ್ಟಿಯಿಂದ ಇದು ಸರ್ವರೂ ಆಚರಿಸಬೇಕಾದ ಪರ್ವ. ಇದು ನೈಮಿತ್ತಿಕವಲ್ಲದೆ ಕಾಮ್ಯಕರ್ಮವೂ ಅಲ್ಲದೇ ಆಯಾ ಕಾಲ ವಿಶೇಷ ಬಂದಾಗ ಆಚರಿಸಲೇಬೇಕಾದ,ಆಚರಿಸದಿದ್ದರೆ-ಪ್ರತ್ಯವಾಯ ದೋಷವುಂಟು ಎಂಬ ವರ್ಗಕ್ಕೆ ಸೇರಿದ ಪರ್ವವಾದುದರಿಂದ ಇದು ನಿತ್ಯವ್ರತ ಕರ್ಮ. ಇದು ಸಂನ್ಯಾಸಿಗಳ ಸಹಿತ-ಎಲ್ಲಾ ವರ್ಣದವರು ಎಲ್ಲಾ ಆಶ್ರಮದವರು ಯಥಾಶಕ್ತಿಯಾಗಿ ಆಚರಿಸುವುದು ಕರ್ತವ್ಯ ವೆಂದು ಶಾಸ್ತ್ರಗಳ ಅಪ್ಪಣೆ -

ಚತ್ವಾರ್ಯೇತಾನಿ ನಿತ್ಯಾನಿ ಚತುರಾಶ್ರಮ ವರ್ಣಿನಾಂ
ನಿತ್ಯಾನ್ಯೇತಾನಿ ವಿಪ್ರೇಂದ್ರ ವ್ರತಾನ್ಯಾಹುರ್ಮನೀಷಿಣಃ
(ಸ್ಕಾಂದ ಪುರಾಣ)

ಈ ವ್ರತವನ್ನಾಚರಿಸದಿದ್ದರೆ ಇಡೀ ವರ್ಷದ ಪಾಪಲೇಪವುಂಟಾಗುತ್ತದೆ ಎಂದು ಮಹಾಭಾರತವು ಸಾರುತ್ತದೆ. ಇಲ್ಲಿ ಅನ್ಯ ಸಮುದಾಯದ-ಉಪವಾಸ-ಆಚರಣೆ (ಬೇರೆ ಬೇರೆ ಹಬ್ಬಗಳಲ್ಲಿ)ಮಾಡುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ.

### ವ್ರತದ ಆಚರಣೆಯ ಕಾಲ

ಈ ವ್ರತವನ್ನು ಆಷಾಢ ಮಾಸದ ಶುಕ್ಲ ಏಕಾದಶೀಯಂದು ದ್ವಾದಶೀ ಅಥವಾ ಪೌರ್ಣಿಮೆಯೆಂದು ಪ್ರಾರಂಭಿಸಬೇಕು. ಕರ್ಕಾಟಕ ಸಂಕ್ರಮಣದಲ್ಲಿ ತೀರಾ ತೊಂದರೆಯಾಗಿದ್ದರೆ ತುಲಾಸಂಕ್ರಮಣದಲ್ಲಿ ಪ್ರಾರಂಭಿಸಲೇಬೇಕು. ಆದರೆ ಈ ಮೇಲ್ಕಂಡ ಯಾವುದೇ ದಿವಸದಲ್ಲಿ ಪ್ರಾರಂಭಿಸಿದರೂ ಕಾರ್ತಿಕ ಶುದ್ಧ ದ್ವಾದಶಿಯ ದಿವಸ ಎಂದರೇ ಉತ್ಥಾನದ್ವಾದಶಿಯ ದಿನವೇ ಅದನ್ನು ಸಮಾಪ್ತಿಗೊಳಿಸಬೇಕು.

ವಿಷ್ಣುವು ಪ್ರಥಮ ಏಕಾದಶೀಯಂದು ಯೋಗನಿದ್ರೆಗೆ ಹೋಗುವ ನೆಂದೂ ಅವನು ಯೋಗನಿದ್ರೆಯಿಂದ ಎಚ್ಚರಗೊಳ್ಳುವುದು ಕಾರ್ತಿಕ ಶುದ್ಧ ಏಕಾದಶೀಯಂದು ಎಂದೂ ಪಾರಂಪರಿಕ ವಾಗಿ ಬಂದ ಬಲವಾದ ನಂಬಿಕೆ. ವಿಷ್ಣು ಪರಮಾತ್ಮನು ನಾಲ್ಕು ತಿಂಗಳ ಕಾಲ ಯೋಗನಿದ್ರೆಯಲ್ಲಿರುವುದನ್ನೇ ಚಾತುರ್ಮಾಸ್ಯ ವ್ರತವ ನ್ನಾಗಿ ಆಚರಿಸಲಾಗುತ್ತದೆ. ಇನ್ನು ಏಕಾದಶೀಗಳಂದು ಉಪ ವಾಸವಿರಬೇಕೆಂಬುದು ಸರ್ವರಿಗೂ ತಿಳಿದಿರುವ ಸಂಗತಿ. ಅಂದು ಸ್ನಾನಾದಿ ಪೂರೈಸಿ ಉಪವಾಸ ಮಾಡಿ ತಪ್ತಧಾರಣೆ ಗೈದು ಚಾತುರ್ಮಾಸ್ಯದ ಮುಖ್ಯ ಸಂಕಲ್ಪ ಕೈ ಗೊಂಡು ಹೇ ಭಗವಂತನೇ ನೀನು ಅನುಗ್ರಹಿಸಿದರೆ ಇದು ನಿರ್ವಿಘ್ನವಾಗಿ ನೆರವೆರುತ್ತದೆ.

ವ್ರತವು ಪೂರ್ಣವಾಗದೆ ಇರುವಾಗ ಮಧ್ಯದಲ್ಲಿ ಪ್ರಾಣ ವಿಯೋಗವೇನಾದರೂ ಆಗಿಬಿಟ್ಟರೆ ಆಗಲೂ ನಿನ್ನ ಅನುಗ್ರಹ ದಿಂದ ನನಗೆ ವ್ರತ ಸಮಾಪ್ತಿವುಂಟಾಗಲಿ ಎಂದು ಪ್ರಾರ್ಥಿಸಿ ಸಂಕಲ್ಪಸಿ ಲೌಕಿಕ ವಿಷಯವನ್ನು ನಿರ್ಲಕ್ಷಿಸಿ, ನಾರಾಯಣ ನನ್ನು ಧ್ಯಾನ, ಸ್ತೋತ್ರ ಪೂಜಾದಿಗಳಿಂದ ಆರಾಧಿಸಬೇಕು. ಬ್ರಹ್ಮಚರ್ಯನಿಯಮದಲ್ಲಿದ್ದು ಅನೃತಭಾಷಿಸದೆ ಶಾಸ್ತ್ರ ನಿಷಿದ್ಧವಾದ ಮತ್ತು ಸಂಯಮಕ್ಕೆ ಭಂಗ ತರುವ ಆಹಾರ ಪದಾರ್ಥಗಳನ್ನು ಸೇವಿಸಬಾರದು ಮಧು, ಮಾಂಸಗಳನ್ನು ನಾಲ್ಕು ಮಾಸಗಳ ಲ್ಲಿಯೂ ತೊರೆಯಬೇಕು.

ಈ ನಾಲ್ಕು ಮಾಸಗಳಲ್ಲಿ ಕೆಲ ಕೆಲವು ಆಹಾರ ಬಿಡುವುದು ಒಳ್ಳೆಯದು. ಶ್ರಾವಣದಲ್ಲಿ ತರಕಾರಿಗಳನ್ನು, ಭಾದ್ರಪದದಲ್ಲಿ ಮೊಸರನ್ನು, ಆಶ್ವಯುಜಮಾಸದಲ್ಲಿ ಹಾಲನ್ನೂ, ಕಾರ್ತಿಕ ದಲ್ಲಿ ದ್ವಿದಳಧಾನ್ಯಗಳನ್ನು ಉಪಯೋಗಿಸಬಾರದು. (ಇವು ಗಳಿಗೆ ಕ್ರಮವಾಗಿ ಶಾಕವ್ರತ, ದಧಿವ್ರತ, ಕ್ಷೀರ ವ್ರತ, ಧಾನ್ಯವ್ರತ ಎಂದು ಹೆಸರು.) ಯಾವ ಹಣ್ಣು ಕಾಯಿ ತರಕಾರಿ ತನಗೆ ಇಷ್ಟವಿಲ್ಲವೋ ಅದನ್ನು ಬಿಟ್ಟು ಬಿಡುತ್ತೇನೆ. ಯಾವುದು ಆಯಾ ಕಾಲದಲ್ಲಿ ಸಿಕ್ಕುವುದಿಲ್ಲವೋ ಆ ಹಣ್ಣು-ತರಕಾರಿಗಳನ್ನು ಬಿಡು ತ್ತೇನೆ ಎಂದು ಪ್ರತಿಜ್ಞೆ ಮಾಡಿದರೆ ಅದು ವ್ರತವಾಗುವುದಿಲ್ಲ. ಶಾಸ್ತ್ರ ನಿಷಿದ್ಧವಾದುದನ್ನು ತ್ಯಜಿಸಿ ತನಗೆ ಯಾವುದರಲ್ಲಿ ಜಿಹ್ವಾ ಚಾಪಲ್ಯ ಹೆಚ್ಚಾಗಿದೆಯೋ ತರಕಾರಿಗಳನ್ನು ಪ್ರಯತ್ನ ಪೂರ್ವಕ ವಾಗಿ ಬಿಡಬೇಕು.

ಈ ನಾಲ್ಕು ತಿಂಗಳಲ್ಲೂ ಹವಿಷ್ಯಾನ್ನವನ್ನು ಮಾತ್ರ ಭುಂಜಿ ಸುವುದು ಶ್ರೇಷ್ಠ. ಇದರಿಂದ ಪಾಪಪರಿಹಾರ ಸಂಯಮಕ್ಕೂ ಧ್ಯಾನ ಯೋಗಕ್ಕೂ ಸಹಾಯವಾಗುತ್ತದೆ. ವ್ರತವು ಮುಗಿದ ಮೇಲೆ ಶ್ರೋತೇತಿಯರನ್ನು ಆಹ್ವಾನಿಸಿ ತಾನು ಯಾವ ವ್ರತವನ್ನು ಕೈಗೊಂಡಿದ್ದೇನೆಂಬುದನ್ನು ಅವರಲ್ಲಿ ಅರಿಕೆ ಮಾಡಿ ಭೋಜನ ದಕ್ಷಿಣೆಗಳನ್ನು ಸಮರ್ಪಿಸಬೇಕು. ತಾನು ಆಚರಿಸಿದ್ದ ಏಕ ಭುಕ್ತ ರಾತ್ರಿಭೋಜನ, ಭೂಶಯನ, ಶಾಕವರ್ಜನ, ದಧಿ ಮಧು, ಘೃತ ವ್ರತ, ಬ್ರಹ್ಮಚರ್ಯ ಇವುಗಳಿಗೆ ಕ್ರಮವಾಗಿ ದಂಪತಿಗಳಿಗೆ ಗೋ ದಾನ, ವಸ್ತ್ರದಾನ, ಶಯ್ಯಾದಾನ, ಸುವರ್ಣಮೂರ್ತಿ ದಾನಗಳನ್ನು ಯಥಾಶಕ್ತಿಯಾಗಿ ದಾನ ಮಾಡಿ ವ್ರತಸಮಾಪ್ತಿ ಮಾಡುವುದು. ವಿಶೇಷ ವಿಷಯ-ಎಲ್ಲವೂ ಭಗವದರ್ಪಣೆಯ ಮೂಲಕ ಸಲ್ಲಿಸುವುದು. ಭಗವತ್‌ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ "ನಿಮಿತ್ತಮಾತ್ರಂ ಭವ ಸವ್ಯಸಾಚಿನ" ಎನ್ನು ತ್ತಾನೆ.

ನೀನಿಲ್ಲಿ ನಿಮಿತ್ತ ಮಾತ್ರ ಎನ್ನುತ್ತಾನೆ. ಶ್ರೀಕೃಷ್ಣ ಮುಂದು ವರಿದು "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷುಕದಾಚನ" ನಿನ್ನ ಕರ್ಮವನ್ನು ನೀನು ಮಾಡು ಫಲಾಫಲಗಳನ್ನು ನನಗೆ ಬಿಡು ಎನ್ನುತ್ತಾನೆ. ಅದರಂತೆ ನಾವು ಭಗವಂತನ ಪ್ರೇರೇಪಣೆ ಯಿಂದ ಸಮಸ್ತ ವ್ರತಕರ್ಮದ ಕ್ರಿಯೆಯಲ್ಲಿ ತೊಡಗಿದಾಗ ಕಾರ್ಯಸಿದ್ಧಿಯಾಗುತ್ತದೆ. ಸಮಚಿತ್ತದಿಂದ ಎಲ್ಲವನ್ನೂ ಸ್ವೀಕ ರಿಸಿ ಎಲ್ಲವೂ ಭಗವಂತನಿಗೆ ಅರ್ಪಣೆ ಇದನ್ನು ಕರ್ತವ್ಯ ವೆಂದು ನಿರ್ವಹಿಸಬೇಕು.

ನಮ್ಮನ್ನು ಉದ್ಧರಿಸಲು ಈಶ್ವರನೇ ಅನೇಕ ರೂಪನಾಮ ಧೇಯಗಳಿಂದ ತನ್ನ ಮಾಯಾಸಾಮರ್ಥದಿಂದ ಅವತರಿಸಿ ದ್ದಾನೆ. ಶಿವ, ವಿಷ್ಣು, ಗಣಪತಿ, ಲಕ್ಷ್ಮೀ ಇತ್ಯಾದಿ ನಾಮರೂಪ ಗಳಿಂದ ಅವತರಿಸಿದ್ದಾನೆ.

ಇಲ್ಲಿ ಹರಿಹರರ ಭೇದ ಎಣಿಸುವುದು ಸರ್ವಥಾ ತಪ್ಪು. ಮಾನವನ ಪೂರ್ವಜನ್ಮದ ವಾಸನೆಗಳಿಗೆ ಅನುಸಾರವಾಗಿ ಶ್ರದ್ಧೆ, ಭಕ್ತಿ ಮತ್ತು ಅರ್ಹತೆಗೆ ಅನುಸಾರವಾಗಿ ಭಗವಂತನು ಭಕ್ತನ ಇಷ್ಟದೇವತೆ ಅಥವಾ ಸಕಲ ದೇವತೆಗಳನ್ನು ಅರ್ಚಿ ಸುವ ಅವಕಾಶವನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಪರ ಮಾತ್ಮನು ಒಬ್ಬನೇ ಆದರೂ ಆತನ ರೂಪ ನಾಮಗಳು ಅನೇಕ ವಾಗಿವೆ. ಒಬ್ಬನೇ ಪರಮಾತ್ಮನನ್ನು ಅನೇಕ ರೂಪಗಳಲ್ಲಿ ಆರಾಧಿಸುತ್ತೇನೆ ಎಂಬುದು ಗಮನಾರ್ಹ! ಹೀಗೆ ಚಾತು ರ್ಮಾಸ್ಯದಲ್ಲಿ ಅನೇಕ ದೇವತೆಗಳ ವ್ರತವಿದ್ದರೂ ದೇವರು ಒಬ್ಬನೆ.

# ದಕ್ಷಿಣಾಯಣ ಪರ್ವ ಪುಣ್ಯಕಾಲ



– ಶ್ರೀಮತಿ. ಮಾಧುರಿ ದೇಶಪಾಂಡೆ

ಮನುಷ್ಯರ ದಿನಮಾನದಲ್ಲಿ ಒಂದು ವರ್ಷವು ದೇವತೆಗಳ ಒಂದು ದಿನವೆಂದು ಭಾವಿಸಲಾಗುತ್ತದೆ. ದಿನದ ಎರಡು ಭಾಗಗಳು ಇದ್ದಂತೆ ವರ್ಷದಲ್ಲಿ ಉತ್ತರಾಯಣ ಹಾಗೂ ದಕ್ಷಿಣಾಯಣ ಎಂಬ ಎರಡು ಭಾಗಗಳಿವೆ. ಜನವರಿ ತಿಂಗಳ 14 -15 ನೇ ತಾರೀಖಿನಿಂದ ಜುಲೈ ತಿಂಗಳ 15-17 ರವರೆಗೆ ಉತ್ತರಾಯಣ ಕಾಲವು ಹಾಗೂ ಜುಲೈನಿಂದ ಜನವರಿಯವರೆಗೂ ದಕ್ಷಿಣಾಯಣ ಎಂದು ಕರೆಯಲಾಗುತ್ತದೆ. ಉತ್ತರಾಯಣವನ್ನು ಪುಣ್ಯಕಾಲವೆಂದು ಭಾವಿಸಲಾಗುತ್ತದೆ. ಉತ್ತರಾಯಣದಲ್ಲಿ ಜನರು ಸೂರ್ಯನ ಸಂಪರ್ಕಕ್ಕೆ ಬರುತ್ತಾರೆ. ಭೂಮಿಯ ಮೇಲೆ ಬಿಸಿಲು ಕಾಲದ ಉತ್ತಮವಾತಾವರಣವಿದ್ದು ಈ ಪುಣ್ಯ ಸಮಯದಲ್ಲಿ ಹುಟ್ಟು ಸಾವುಗಳು ಮಹತ್ವವನ್ನು ಪಡೆಯುತ್ತವೆ. ಸೂರ್ಯ ಕರ್ಕ ರಾಶಿಗೆ ಪ್ರವೇಶಿಸುವ 30 ಘಳಿಗೆ ಮೊದಲಿನ ಸಮಯ ಮಿಥುನ ರಾಶಿಯಲ್ಲಿದ್ದಾಗ ಈ ಸಮಯವನ್ನು ದಕ್ಷಿಣಾಯಣ ಪುಣ್ಯಕಾಲ ಎನ್ನಲಾಗುತ್ತದೆ.

ಆರು ತಿಂಗಳು ಉತ್ತರ ದಿಕ್ಕಿನಲ್ಲಿ ಸಾಗಿದ ಸೂರ್ಯ ತನ್ನ ಕ್ರಮಣವನ್ನು ದಕ್ಷಿಣ ದಿಕ್ಕಿನತ್ತ ತಿರುಗಿಸಿದಾಗ ದಕ್ಷಿಣಾಯಣ ಕಾಲವು ಉಂಟಾಗುತ್ತದೆ ಪ್ರತಿ ತಿಂಗಳು ಒಂದು ರಾಶಿಯಲ್ಲಿ ಸಂಚರಿಸುವ ಸೂರ್ಯನು ಮಿಥುನ ರಾಶಿಯಿಂದ ಕರ್ಕರಾಶಿಗೆ ಹೋಗುವ ಕಾಲಕ್ಕೆ ದಕ್ಷಿಣಾಯಣವೆಂದು ಧನಸ್ಸು ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಸಮಯವನ್ನು ಉತ್ತರಾಯಣವೆಂದು ಕರೆಯಲಾಗುತ್ತದೆ. ಧಾರ್ಮಿಕವಾಗಿ ದೇವತೆಗಳ ರಾತ್ರಿಯೆಂದು ಪರಿಗಣಿಸಲಾಗುತ್ತದೆ.

ದಕ್ಷಿಣಾಯಣ ಪುಣ್ಯ ಕಾಲವು ಚಾತುರ್ಮಾಸದ ಸ್ವಲ್ಪ ಮೊದಲು ಬರುವ ಸಮಯ ಈ ಸಮಯದಲ್ಲಿ ದೇವತೆಗಳಿಗೆ ರಾತ್ರಿಯ ಸಮಯ ಭಗವಂತ ಯೋಗ ನಿದ್ರೆಗೆ ಜಾರುವುದರಿಂದ ದಕ್ಷಿಣಾಯಣ ಕಾಲದಲ್ಲಿ ದೇವತಾ ಪೂಜೆ ವ್ರತಗಳು ಹೆಚ್ಚಾಗಿ ನಡೆಯುತ್ತವೆ. ಪರ್ವಕಾಲದ ಸಮಯವು ವಿಶೇಷ ಹೇಗೆ ಉತ್ತರಾಯಣದಲ್ಲಿ ತಿಲತರ್ಪಣ, ಜಪ - ತಪಗಳನ್ನು ಹಾಗೆಯೇ ಉತ್ತರಾಯಣ ಪರ್ವಕಾಲದಂತೆಯೇ ಕೂಡ ತಿಲ ತರ್ಪಣ ವಿಶೇಷವಾಗಿದೆ.

ಪರ್ವಕಾಲದ ಸಮಯ ಮುಂಜಾನೆ ಬರಬಹುದು ಅಥವಾ ಮಧ್ಯಾಹ್ನ ಸಂಜೆಯೂ ಬರಬಹುದು ದಿನದ ಕೆಲವು ಸಮಯ ವಿಶೇಷ ಸಮಯವನ್ನು ಪರ್ವಕಾಲವೆಂದು ಗುರುತಿಸುತ್ತಾರೆ. ಆ ಸಮಯದಲ್ಲಿ ಪೂಜೆ ಜಪ ಹಾಗೂ ತಿಲ ತರ್ಪಣ ವಿಶೇಷ ಮಹತ್ವದ್ದು. ತಂದೆ ತಾಯಿ ಇರುವವರು ಕೇವಲ ಪೂಜೆ ಜಪಗಳನ್ನು ಮಾಡಿದರೆ ಪೋಷಕರು ತೀರಿಕೊಂಡವರು ಅಂದರೆ ತಂದೆ ಇಲ್ಲದವರು ತರ್ಪಣವನ್ನು ನೀಡುತ್ತಾರೆ. ಇಂತಹ ಪರ್ವಕಾಲಗಳಲ್ಲಿ ನದೀ ತೀರಕ್ಕೆ ಹೋಗಿ ನದೀ ಸ್ನಾನ ಹಾಗೂ ವಿಶೇಷ, ಜಪಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ವಿಶೇಷವಾಗಿ ಸನ್ಯಾಸಿಗಳು ಪರ್ವಕಾಲದ ಸಮಯದಲ್ಲಿ ನದಿ ಅಥವಾ ಸಮುದ್ರ ತೀರದಲ್ಲಿದ್ದು ಪೂಜೆ ಅನುಷ್ಠಾನ ಮಾಡುತ್ತಾರೆ. ಸನ್ಯಾಸಿಗಳು ಪರ್ವಕಾಲದಲ್ಲಿ ಪೂಜೆ ಜಪಗಳನ್ನು ಮಾಡಿದರೂ ಕೂಡ ಅವರು ಆಹಾರ ಸೇವಿಸುವುದಿಲ್ಲ. ವೃಂದಾವನಸ್ಥರಾದ ಯತಿಗಳಿಗೂ ಅಂದು ಹಸ್ತೋದಕವಿರುವುದಿಲ್ಲ. ಪಂಚಾಂಗದ ಲೆಕ್ಕಾಚಾರದಲ್ಲಿ ಪರ್ವಕಾಲ ಮುಗಿದು ಆಹಾರ ಸೇವನೆಗೆ ತಿಳಿಸಿದ ಸಮಯದ ನಂತರ ಊಟವನ್ನು ಮಾಡುತ್ತಾರೆ.

ಹೇಗೆ ಉತ್ತರಾಯಣದಲ್ಲಿ ಸೂರ್ಯನ ಪ್ರಖರತೆಯ ತಯಾರಿಯನ್ನು ಮಾಡಿಕೊಳ್ಳಲಾಗುತ್ತದೆಯೋ ಅದೇ ರೀತಿ ದಕ್ಷಿಣಾಯಣ ದಲ್ಲಿ ಮಳೆ

ಮತ್ತು ಸೂರ್ಯನ ಶಾಖದ ಪರಿಣಾಮ ಕಡಿಮೆಯಾಗುವ ವಾತಾವರಣಕ್ಕೆ ತಯಾರಿಯನ್ನು ಮಾಡಿಕೊಳ್ಳಲಾಗುತ್ತದೆ. ಚಾತುರ್ಮಾಸದಲ್ಲಿ ವ್ರತಗಳನ್ನು ಮಾಡುವ ಸಲುವಾಗಿ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಜ್ಯೇಷ್ಠ ಮಾಸದಲ್ಲಿ ಇಂಗು, ಬೆಲ್ಲವನ್ನು ಸೇವಿಸಿದಂತೆ ನಂತರದಲ್ಲಿ ಪರ್ವಕಾಲದಲ್ಲಿ ತಿಲ ತರ್ಪಣ ಮತ್ತು ಸ್ನಾನ ಜಪ ತಪಗಳು ಆ ಕಾಲದ ರೋಗಗಳನ್ನು ಎದುರಿಸಲು ಮನುಷ್ಯರಲ್ಲಿ ರೋಗ ನಿರೋಧಕ ಶಕ್ತಿಯನ್ನು ನೀಡುತ್ತದೆ. ಭಾರತೀಯ ಸನಾತನ ವೈದಿಕ ಪದ್ಧತಿಗಳು ವೈಜ್ಞಾನಿಕವಾಗಿ ಆರೋಗ್ಯದಾಯಕವಾಗಿರುವ ಪದ್ಧತಿಗಳಾಗಿವೆ.

ಉತ್ತರಾಯಣ ಪರ್ವಕಾಲದ ಆಚರಣೆಯನ್ನು ಭಾರತೀಯರೆಲ್ಲರೂ ಬೇರೆ ಬೇರೆ ವಿಧದಿಂದ ಮಾಡುತ್ತಾರೆ ಆದರೆ ದಕ್ಷಿಣಾಯಣ ಪರ್ವಕಾಲದ ಆಚರಣೆ ಕೆಲವೇ ವರ್ಗದ ಜನರಲ್ಲಿ ಪ್ರಸಿದ್ಧವಾಗಿದೆ. ಸನ್ಯಾಸಿಗಳು, ಬ್ರಾಹ್ಮಣರು ಮತ್ತು ಸನಾತನ ವೈದಿಕ ಧರ್ಮದ ಬಗೆಗೆ ನಂಬಿಕೆ ಇರುವವರು ಮಾತ್ರ ದಕ್ಷಿಣಾಯಣ ಪರ್ವಕಾಲವನ್ನು ಆಚರಿಸುತ್ತಾರೆ.

ಭಾರತೀಯ ಮೌಲ್ಯಗಳು ಋತುಮಾನಕ್ಕೆ ತಕ್ಕ ಆಚರಣೆ ಪ್ರಕೃತಿಯ ಸಂರಕ್ಷಣೆ ಮತ್ತು ಉತ್ತಮ ಆಚರಣೆಯ ಆಗರವಾಗಿದೆ. ನಾವು ಯಾವುದೇ ಇಂತಹ ಧಾರ್ಮಿಕ ಆಚರಣೆಯನ್ನು ಗಮನಿಸಿದಾಗ ಅದರ



ಹಿಂದೆ ದೊಡ್ಡ ವೈಜ್ಞಾನಿಕ ಕಾರಣವೂ ಇರುವುದರಿಂದ ಅವಶ್ಯವಾಗಿ ಇಂತಹ ಆಚರಣೆಗಳನ್ನು ಮುಂದುವರೆಸಬೇಕು.

ಈ ಬಾರಿಯ ದಕ್ಷಿಣಾಯಣ ಪರ್ವಕಾಲ 16 ನೇ ಜುಲೈ 2024 ರಂದು ಇದ್ದು ಆಷಾಢ ಮಾಸ ಶುಕ್ಲ ಪಕ್ಷ ದಶಮಿಯಂದು ಬಂದಿರುತ್ತದೆ. ಇಂದಿನಿಂದ ಚಾತುರ್ಮಾಸ ಆರಂಭವಾಗುತ್ತದೆ. ಮಧ್ಯಾಹ್ನ 12.28 ನಿಮಿಷ ಇರುತ್ತದೆ. ಈ ಬಾರಿ ಪರ್ವಕಾಲದ ನಂತರ ಅಂದೇ ಯತಿಗಳಿಗೆ ಹಸ್ತೋದಕ ಇರುತ್ತದೆ.

## ಒಂದು ಕ್ಲಿಕ್ ಮಾಡಿ ಸ್ವಾಮಿ ದರ್ಶನ ಮಾಡಿ

## ತಿ.ತಿ.ದೇವಸ್ಥಾನಗಳು ಮೊಬೈಲ್ ಆ್ಯಪ್




**ತಿ.ತಿ.ದೇವಸ್ಥಾನಗಳು ಎಂಬ ಹೆಸರಿನಿಂದ ರಚಿಸಲಾದ ಮೊಬೈಲ್ ಆ್ಯಪ್ ಅನ್ನು ತಿ.ತಿ.ದೇ ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಪ್ರಾರಂಭಿಸಿದರು. ಇದುವರೆಗೆ ಭಕ್ತರಿಗಾಗಿ ಗೋವಿಂದ ಮೊಬೈಲ್ ಆ್ಯಪ್ ಅನ್ನು ಪ್ರಾರಂಭಿಸಿದರು. ಈಗ ಅದನ್ನು ಆಧುನೀಕರಿಸಲಾಗಿದೆ ಮತ್ತು ಹೆಚ್ಚಿನ ಅಪ್ಲಿಕೇಶನ್‌ಗಳನ್ನು ಅಳವಡಿಸಲು ಹೊಸ ಅಪ್ಲಿಕೇಶನ್ ಅನ್ನು ರಚಿಸಲಾಗಿದೆ.ಈ ಮೊಬೈಲ್ ಆ್ಯಪ್ ಮೂಲಕ ಭಕ್ತರು ತಿರುಮಲೆ ಸ್ವಾಮಿಯವರ ದರ್ಶನ, ಸೇವೆಗಳು, ವಸತಿ,ಅಂಗಪ್ರದಕ್ಷಿಣೆ,ಸರ್ವದರ್ಶನವನ್ನು ಈ ಅಪ್ಲಿಕೇಶನ್ ಮುಖಾಂತರ ಬುಕ್ ಮಾಡಿಕೊಳ್ಳಬಹುದು. ಅದೇ ಆ್ಯಪ್ ಮುಖಾಂತರ ದೇಣಿಗೆಯನ್ನು ನೀಡಬಹುದು. ಭಕ್ತರು ಲಾಗಿನ್ ಆಗಲು ಓ.ಟಿ.ಪಿ. ಜೊತೆಗೆ ಬಳಕೆದಾರರ ಹೆಸರನ್ನು ನಮೂದಿಸಬೇಕು,ಯಾವುದೇ ಪಾಸ್‌ವರ್ಡ್‌ನ ಅಗತ್ಯವಿಲ್ಲ.**



# ಭೀಮನ ಅಮಾವಾಸ್ಯೆ

**- ಶ್ರೀಮತಿ. ವೀಣಾ ರವಿಕುಮಾರ್**

ಚಾತುರ್ಮಾಸ್ಯ ಅಂದರೆ (ಆಷಾಢ, ಶ್ರಾವಣ, ಭಾದ್ರಪದ, ಆಶ್ವೀಜ, ಕಾರ್ತೀಕ) ನಾಲ್ಕು ತಿಂಗಳು ಎಂಬುದು ಸಾಮಾನ್ಯ ಅರ್ಥ. ಈ ಮಾಸವು ಆಷಾಢ ಶುಕ್ಲ ಏಕಾದಶಿಯಿಂದ ಕಾರ್ತಿಕ ಶುಕ್ಲ ಏಕಾದಶಿ ಯವರಿಗೆ ಇರುತ್ತದೆ. ಹಬ್ಬಗಳ ಸಾಲು ಆರಂಭವಾಗುವುದು ಭೀಮನ ಅಮಾವಾಸ್ಯೆ "ಆಷಾಢ ಬಹುಳ ಅಮಾವಾಸ್ಯೆ" ದಿನದಿಂದ, ಇಂದು ಆಚರಿಸುವ ಶ್ರೀ ಜ್ಯೋತಿರ್ಭೀಮೇಶ್ವರ ವ್ರತವನ್ನು, ಪತಿ ಸಂಜೀವನಿ ವ್ರತ, ಭೀಮನ ಅಮಾವಾಸ್ಯೆ ವ್ರತ, ಗಂಡನ ಪೂಜೆ, ಜ್ಯೋತಿಸ್ತಂಭ ವ್ರತ ಎಂದು ಕರೆಯುವುದುಂಟು. ಹೆಚ್ಚು ಜನಪ್ರಿಯವಾಗಿರುವುದು ಭೀಮನ ಅಮಾವಾಸ್ಯೆ ಎಂದು. ಈ ವ್ರತಾಚರಣೆ ಮಾಡುವುದರಿಂದ ಕನ್ಯೆಯರು ಭೀಮನಂತ ಗಂಡ ಅಥವಾ ಉತ್ತಮ ಗುಣವುಳ್ಳ ಪತಿ ಸಿಗುವನು, ಸಹೋದರರ ಕ್ಷೇಮವೂ ಮತ್ತು ವಿವಾಹಿತ ಸ್ತ್ರೀಯರು ಆಚರಿಸುವುದರಿಂದ ಸೌಭಾಗ್ಯವನ್ನು ಪಡೆಯುವರು. ಈ ವ್ರತವನ್ನು ಮಾತಿಗೆ ಅಭಿಮಾನಿ ದೇವತೆ ಪಾರ್ವತಿ ಮತ್ತು ಮನಸ್ಸಿಗೆ ಅಭಿಮಾನಿಯಾದ ರುದ್ರದೇವರ ಅಥವಾ ಶಿವನ ಅನುಗ್ರಹ ಪ್ರಾಪ್ತಿಗಾಗಿ ಈ ಪೂಜೆಯನ್ನು ವಿಶೇಷವಾಗಿ ಹೆಣ್ಣು ಮಕ್ಕಳು ಆಚರಿಸುತ್ತಾರೆ.

ಮದುವೆಯಾದ ಮೊದಲ ವರ್ಷದಿಂದ ಹಿಡಿದು ಒಂಬತ್ತು ವರ್ಷ ಈ ವ್ರತವನ್ನು ಹೆಣ್ಣುಮಕ್ಕಳು ಮತ್ತು ಕನ್ಯೆಯರು ಆಚರಿಸುವರು. ಹೆಣ್ಣು ಮಕ್ಕಳು ಅವರವರ ವಂಶದ ಪದ್ಧತಿಯಂತೆ ಆಚರಿಸಿದರೆ, ಕನ್ಯೆಯರು ಮಣ್ಣಿನಿಂದ ತಯಾರಿಸಿದ ಲಿಂಗಾಕಾರದ ಜೋಡಿ ಗೊಂಬೆಯನ್ನು ಅಥವಾ ವಿಗ್ರಹದಲ್ಲಿ ಪಾರ್ವತಿ ಪರಮೇಶ್ವರನನ್ನು ಆಹ್ವಾನಿಸಿ, ಹರಿದ್ರಾ, ಕುಂಕುಮ , ಅಕ್ಷತೆ, ಪತ್ರೆ, ಪುಷ್ಪಗಳಿಂದ ಹಣ್ಣು, ಕಾಯಿ ವೀಳ್ಯದೆಲೆ, ಅಡಿಕೆ ಇವುಗಳಿಂದ ಪೂಜಿಸಿ, ನೈವೇದ್ಯಕ್ಕೆ ಕಡುಬು, ಇಡ್ಲಿ ಸಿದ್ಧಪಡಿಸಿ, ಈ ಕಡುಬಿನಲ್ಲಿ ಚಿಲ್ಲರೆಯನ್ನು ಇಟ್ಟು ಹೊಸ್ತಿಲ ಎರಡೂ ಬದಿಯಲ್ಲಿ ವೀಳ್ಯದೆಲೆ ಮೇಲಿಟ್ಟು ಹರಿದ್ರಾ,ಕುಂಕುಮದಿಂದ ಪೂಜಿಸಿ ಮನೆಯ ಗಂಡು ಮಕ್ಕಳ ಕೈಲಿ ಆ ಕಡುಬನ್ನು ಅವರ ಮಂಡಿಯೂರಿ ಮೊಣಕೈನಿಂದ ಒಡೆಯಬೇಕು, ಆ ಸಮಯದಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳ ಬೆನ್ನಿಗೆ ಹೊಡೆಯುತ್ತಾರೆ. ಇದನ್ನು ಭಂಡಾರ ಹೊಡೆಯುವುದು ಎನ್ನುತ್ತಾರೆ. ಅಕ್ಕ-ತಮ್ಮ, ಅಣ್ಣ-ತಂಗಿ ಬಾಂಧವ್ಯ ಸಂತೋಷದಿಂದ ಚಿರವಾಗಿರಲಿ ಎಂಬ ವಿಶೇಷ ಪದ್ಧತಿ. ಈ ದಿನ ಯಾವುದೇ ರೀತಿಯ ಕರಿದ ಪದಾರ್ಥಗಳನ್ನು ಮಾಡುವುದಿಲ್ಲ.

"ಭೀಮ" ಕೂಡ ಶಿವನ ಅಥವಾ ರುದ್ರದೇವರ ಹಲವಾರು ಹೆಸರುಗಳಲ್ಲಿ ಒಂದು ಹಾಗಾಗಿ ಭೀಮನಂತಹ ಗಂಡ ಸಿಗಲಿ ಎಂಬ ವಾಡಿಕೆ ಮಾತಿದೆ. ಹಾಗಾಗಿ ಭೀಮನೆಂಬ ಹೆಸರಿನಿಂದ ರುದ್ರದೇವರನ್ನು ಪೂಜಿಸುತ್ತಾರೆ.

### ಈ ವ್ರತದ ಮಹಿಮೆಯನ್ನು ಸಾಕ್ಷಾತ್ ರುದ್ರದೇವರೆ ತಿಳಿಸಿದ್ದಾರೆ

ಹಿಂದೆ ಸೌರಾಷ್ಟ್ರ ದೇಶದಲ್ಲಿ "ವಜ್ರಬಾಹು"ಎಂಬ ಉತ್ತಮ ಆಡಳಿತಗಾರ ರಾಜನಿದ್ದನು. ಅವನಿಗೆ ಉತ್ತಮ ಗುಣವಂತನೂ, ಸುಂದರನೂ ಆದ ಜಯಶೀಲನೆಂಬ ಮಗನಿದ್ದನು. ಆದರೆ ಇನ್ನೂ ವಿವಾಹವಾಗದ ಪುತ್ರನು ಮೃತನಾದನು, ರಾಜನು ತನ್ನ ಪಿತೃಗಳಿಗೆ ತಿಲೋದಕವನ್ನು ಕೊಡುವರೆಂದು ಎಂದು ಆಘಾತದಿಂದ ತನ್ನ ಮಗನಿಗೆ ವಿವಾಹ ಮಾಡಿದರೆ ಆ ಹೆಣ್ಣಿನ ಮೂಲಕ ಪಿತೃಗಳಿಗೆ ಸದ್ಗತಿ ನೀಡಬಹುದೆಂದು ಯೋಚಿಸಿದನು. ಯಾರು ತನ್ನ ಮೃತ ಪುತ್ರನ ವಿವಾಹಕ್ಕೆ ಹೆಣ್ಣು ಕೊಡುತ್ತಾರೋ ಅವರಿಗೆ ಯಥೇಷ್ಟ ದಾನ ಕೊಡುವುದಾಗಿ ಘೋಷಿಸುತ್ತಾನೆ. ಅದೇ ಊರಿನಲ್ಲಿದ್ದ ಒಬ್ಬ ಬಡವ ಸುಸಂಸ್ಕೃತ ಬ್ರಾಹ್ಮಣನು ತನ್ನ ಬಡತನದಿಂದ ದೂರಬರಲು ನಿರ್ಧರಿಸಿ, ತನ್ನ ಮಗಳನ್ನು ಆ ಮೃತ ರಾಜಕುಮಾರನಿಗೆ ಕೊಟ್ಟು ವಿವಾಹ ಮಾಡಿದನು.

ತನಗೆ ಬರಬೇಕಾದ ಧನಧಾನ್ಯಾದಿಗಳನ್ನು ಆ ಬ್ರಾಹ್ಮಣ ಪಡೆದುಕೊಳ್ಳುತ್ತಾನೆ. ವಿವಾಹದ ನಂತರ ರಾಜ್ಯ ವಧು ಮತ್ತು ಸೈನಿಕರು ರಾಜಕುಮಾರನ ಹೆಣವನ್ನು ಸುಡಲು ಸ್ಮಶಾನಕ್ಕೆ ಕರೆದುಕೊಂಡು ಬರುತ್ತಾರೆ. ಕನ್ಯೆಯಾದರೋ ಸಕಲಾಭರಣಗಳಿಂದ ಅಲಂಕೃತಳಾಗಿ ಹರಿದ್ರಾ, ಕುಂಕುಮ ಶೋಭಿತಳಾಗಿ ಪಾರ್ವತಿ ಪರಮೇಶ್ವರನನ್ನು ಧ್ಯಾನಿಸುತ್ತಾ ಚಿತೆಗೆ ಅಗ್ನಿ ಸ್ಪರ್ಶ ಮಾಡಿದಳು. ಆದರೆ ದೈವಲೀಲೆಯಿಂದ ಆ ಸಂದರ್ಭದಲ್ಲಿ ಭಾರಿ ಮಳೆಯಾಗಿ, ಅಗ್ನಿ ಆರಿಹೋಯಿತು. ಸೂರ್ಯಾಸ್ತವಾಗಿ ಗಾಢ ಕತ್ತಲೆ ಆವರಿಸಿತ್ತು ಮಳೆ ಮಾತ್ರ ನಿಲ್ಲಲಿಲ್ಲ.

ಹುಡುಗಿಯು ಈಗ ರಾಜಕುಮಾರಿ ಯಾಗಿದ್ದರಿಂದ ರಾಜಕುಮಾರನ ತಂದೆಯು ಆಕೆಗೆ ಹಣವನ್ನು ಬಿಟ್ಟು ಬರುವಂತೆ ತಿಳಿಸುತ್ತಾನೆ. ಆದರೆ ಪತಿಯ ಹೆಣವನ್ನು ಬಿಟ್ಟು ತಾನು ಬರುವುದಿಲ್ಲವೆಂದು ಹುಡುಗಿ ಹೇಳುತ್ತಾಳೆ. ರಾಜ ಮತ್ತವನ ಪರಿವಾರದವರು ಮಳೆಯಿಂದ ತಪ್ಪಿಸಿಕೊಳ್ಳಲು ಹುಡುಗಿಯನ್ನು ಬಿಟ್ಟು ಓಡುತ್ತಾರೆ. ರಾಜಕುಮಾರನ ಶವವನ್ನು ನೋಡುತ್ತಾ ಆಕೆ ಮನಸ್ಸಿನಲ್ಲಿಯೇ ನೊಂದು, ಗಾಢ ಕತ್ತಲೆಗೆ ಹೆದರಿ, ಪಾರ್ವತಿ ಪರಮೇಶ್ವರನನ್ನು ಪ್ರಾರ್ಥಿಸುತ್ತಾಳೆ."ಪರಮೇಶ್ವರ ಹಿಂದೆ ಮಾರ್ಕಂಡೇಯನಿಗೆ ಚಿರಂಜೀವಿತ್ವ, ಅಗ್ನಿ, ಮನ್ಮಥರಿಗೂ ಮರುಜನ್ಮ ಶ್ವೇತವಾಹನರಿಗೂ ಚ್ಯವನ ಋಷಿಗಳಿಗೂ ದೀರ್ಘಾಯುಷ್ಯ ನೀಡಿರುವೆ. ನಾನು ಏನು ತಪ್ಪು ಮಾಡಿದ್ದೇನೆ? ನನಗ್ಯಾಕೆ ಈ ಘೋರ ಶಿಕ್ಷೆ? ಕಾಪಾಡು ಎಂದು ಪ್ರಾರ್ಥಿಸಿದಳು. ಭಕ್ತವತ್ಸಲನಾದ ಶಿವನು ಪಾರ್ವತಿಯೊಂದಿಗೆ ಅಲ್ಲಿ ಪ್ರತ್ಯಕ್ಷನಾದಾಗ "ನನಗೆ ಸೌಭಾಗ್ಯ ಸಂಪತ್ತು ನೀಡು" ಎಂದು ಪ್ರಾರ್ಥಿಸುತ್ತಾಳೆ.

ಆಗ ಶಿವನು "ನಿನಗೆ ಸೌಭಾಗ್ಯ ಸಂಪತ್ತು ನೀಡ ಬಲ್ಲ ಅತ್ಯಂತ ಶುಭಪ್ರದವಾದ ವ್ರತವೊಂದಿದೆ. ಆಷಾಢ ಮಾಸದ ಅಮಾವಾಸ್ಯೆಯ ದಿನ ಮಂಗಳ ಸ್ನಾನ ಮಾಡಿ ಮನೆಯನ್ನು ಶುದ್ಧಮಾಡಿ ಭಕ್ತಿಯಿಂದ ಉಮಾಮಹೇಶ್ವರನನ್ನು ಪೂಜಿಸಬೇಕು ತುಪ್ಪದ ದೀಪವನ್ನು ಹಚ್ಚಿಟ್ಟು ನನ್ನನ್ನು ಆರಾಧಿಸಬೇಕು. ಜ್ಯೋತಿರ್ಮಯನಾದ ನನಗೆ "ಭೀಮೇಶ್ವರ" ಎನ್ನುತ್ತಾರೆ. ಆದ್ದರಿಂದ ನೀನು ಒಂಬತ್ತು ವರ್ಷ ತಪ್ಪದೆ ಈ ವ್ರತವನ್ನು ಆಚರಿಸುವ ನಿನ್ನ ಪತಿ ದೀರ್ಘಾಯುಷ್ಯ ಹೊಂದುತ್ತಾನೆ ಎಂದುತಿಳಿಸಿ ಕೊಟ್ಟ ವ್ರತವನ್ನು ತಪ್ಪದೆ ಆಚರಿಸಿ ಈಶ್ವರನ ಕೃಪೆಗೆ ಪಾತ್ರಳಾಗಿ ಗಂಡನಿಗೆ ದೀರ್ಘಾಯುಷಿ ಪಡೆಯುತ್ತಾಳೆ. ಅಂದಿನಿಂದ ಸ್ತ್ರೀಯರು ಒಂಬತ್ತು ವರ್ಷ ತಪ್ಪದೆ ಆಚರಿಸಿ ಗಂಡನಿಗೆ ಒಳಿತನ್ನು, ಆಯುಷ್ಯವನ್ನು ಬೇಡುತ್ತಾರೆ. ಕನ್ಯೆಯರು ಸತ್ ಚಾರಿತ್ರ್ಯವರನನ್ನು ಬೇಡಿ ಮತ್ತು ಸಹೋದರರ ಶ್ರೇಯಸ್ಸನ್ನು ಭಂಡಾರ ಹೊಡೆಸುವ ಮೂಲಕ ಸಂಬಂಧ ಗಟ್ಟಿ ಗೊಳಿಸಿಕೊಳ್ಳುತ್ತಾರೆ.

# ಆಣಿವಾರ ಆಸ್ಥಾನಂ

**ಶ್ರೀ ವೇಂಕಟೇಶ್ವರ ಸ್ವಾಮಿಗೆ ವರ್ಷಕ್ಕೆ ಒಂದು ಬಾರಿ ತಮಿಳು ಕಾಲಮಾನದ ಪ್ರಕಾರ ಆಡಿಮಾಸದಲ್ಲಿ (ಆಷಾಢ) ನಡೆಯುತ್ತಾದರಿಂದ ಆಣಿವಾರ ಆಸ್ಥಾನ ಎಂದು ಹೆಸರು ಬಂದಿದೆ. ಈ ಉತ್ಸವದಂದು ಬೆಳಗ್ಗೆ ಬಂಗಾರದ ಬಾಗಿಲು ಮುಂದೆ ಇರುವ ಘಂಟಾಮಂಟಪದಲ್ಲಿ ಸರ್ವಭೂಪಾಲವಾಹನದಲ್ಲಿ ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿ ವಿರಾಜಮಾನವಾಗಿರುತ್ತಾರೆ, ಮತ್ತೊಂದು ಪಕ್ಕದಲ್ಲಿ ಶ್ರೀವಿಷ್ವಕ್ಸೇನರನ್ನು ಪೀಠದ ಮೇಲೆ ಕುಳ್ಳಿರಿಸುತ್ತಾರೆ. ಇವರೆಲ್ಲರನ್ನು ಗರುಡನ ಎದುರಿನಲ್ಲಿ ಆಸೀನರಾಗಿರಿಸುತ್ತಾರೆ. ಆಣಿವಾರ ಆಸ್ಥಾನವು ನಡೆಯುವ ಹಿಂದಿನ ದಿನ ಕೋಯಿಲ್ ಆಳ್ವಾರ್ ತಿರುಮಂಜನಂ ನಡೆಯುತ್ತದೆ. ಆಣಿವಾರ ಆಸ್ಥಾನದ ದಿನ ಆ ವರ್ಷದ ಪೂರ್ತಿ ದೇವಸ್ಥಾನದಲ್ಲಿ ನಡೆಯುವ ಹಳೆಯ ಲೆಕ್ಕಾಚಾರದ ವಿವರಣೆಯನ್ನು ಸ್ವಾಮಿಯವರಿಗೆ ಸಮರ್ಪಿಸುತ್ತಾರೆ, ಮತ್ತೆ ಹೊಸ ವರ್ಷದ ಲೆಕ್ಕಾಚಾರವು ಪ್ರಾರಂಭವಾಗುತ್ತದೆ. ಅಂದು ಉಭಯದೇವಿಯರೊಂದಿಗೆ ಮಲೆಯಪ್ಪಸ್ವಾಮಿ ಸುಗಂಧ ಪುಷ್ಪಗಳಿಂದ ಕೂಡಿದ ಪುಷ್ಪಪಲ್ಲಕ್ಕಿಯಲ್ಲಿ ಮಾಡ ಬೀದಿಯಲ್ಲಿ ಭಕ್ತರಿಗೆ ದರ್ಶನವನ್ನು ನೀಡುತ್ತಾರೆ. ವೇಂಕಟೇಶ್ವರ ಸ್ವಾಮಿಯವರಿಗೆ ಆ ದಿನ ಪ್ರತ್ಯೇಕ ಆಭರಣಗಳಿಂದ ಅಲಂಕರಿಸುತ್ತಾರೆ.**



**ಕರ್ನಾಟಕದ ವೈಷ್ಣವ ಕ್ಷೇತ್ರಗಳು**

**44**

# ನೀರ್ಥಡಿಯ ರಂಗನಾಥ ದೇವಾಲಯ



-ಕೆಂಗೇರಿ ಚಕ್ರಪಾಣಿ
94483 86886

ದಾವಣಗೆರೆ ಜಿಲ್ಲೆಯ ಅದೇ ತಾಲ್ಲೂಕಿನ ದಾವಣಗೆರೆಯಿಂದ 39 ಕಿ.ಮೀ. ದೂರದಲ್ಲಿರುವ ಹಾಗೂ ಚಿತ್ರದುರ್ಗ ಜಿಲ್ಲೆಯ ಗಡಿಯಂಚಿನಲ್ಲಿರುವ ಗ್ರಾಮ ನೀರ್ಥಡಿ. ಸುಂದರವಾದ ಬೆಟ್ಟಗುಡ್ಡಗಳ ನಡುವಿರುವ ಈ ಗ್ರಾಮದಲ್ಲಿ ಹಿಂದೆ ಗಾರ್ಗಿ ಮಹರ್ಷಿಗಳು ತಪಸ್ಸು ಮಾಡುತ್ತಿದ್ದರಂತೆ. ಆಗ ಬಿದ್ದ ಧಾರಾಕಾರ ಮಳೆ ಅವರ ಕಡೆ ಧಾವಿಸುತ್ತಿತ್ತು. ಆಗ ಮಹರ್ಷಿಗಳು ತಮ್ಮ ತಪಃಶಕ್ತಿಯಿಂದ ನೀರು-ತಡಿ ಎಂದರಂತೆ. ಮುನ್ನುಗ್ಗುತ್ತಿದ್ದ ನೀರು ಅಲ್ಲಿಯೇ ಮಡುವಾಗಿ ನಿಂತಿ ತಂತೆ. ಹೀಗೆ ನೀರಿನ ಪ್ರವಾಹವನ್ನು ಗಾರ್ಗಿ ಮಹರ್ಷಿಗಳು ತಡೆದ ಸ್ಥಳ ನೀರ್ಥಡಿಯಾಯಿತು ಎಂದು ಸ್ಥಳ ಪುರಾಣ ತಿಳಿಸುತ್ತದೆ.

ನೀರ್ಥಡಿಯ ಊರ ಮಧ್ಯೆಯಲ್ಲಿ ವಿಜಯನಗರ ಶೈಲಿಯ ಬೃಹತ್ ದೇವಾಲಯವಿದೆ. ದೇವಾಲಯವು ತನ್ನ ವಾಸ್ತುವಿನ ವಿನ್ಯಾಸದಿಂದ ಗಮನ ಸೆಳೆಯುತ್ತದೆ. ದೇವಾಲಯವು ಗರ್ಭಗೃಹ ಅಂತರಾಳ, ರಂಗಮಂಟಪ, ತೆರೆದ ಮುಖಮಂಟಪ, ಪ್ರವೇಶಮಂಟಪ ಮತ್ತು ಸುತ್ತಲೂ ಪೌಳಿ ಗೋಡೆಯನ್ನು ಸುತ್ತುವರೆದಿರುವ ಪ್ರಾಕಾರವನ್ನು ಹೊಂದಿದೆ.

ರಂಗನಾಥ ದೇವಾಲಯದ ಶಿಖರವು ಸಾಮಾನ್ಯವಾಗಿ ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗುವ ಗಾರೆ ಶಿಖರಗಳಂದಿರದೆ ಸಂಪೂರ್ಣ ಶಿಲೆಯಲ್ಲಿಯೇ ಮಾಡಿರುವ ಶಿಖರವಾಗಿದೆ. ಶಿಖರದ ತುದಿಯಲ್ಲಿ ಕಳಶವಿದೆ. ಶಿಖರದಲ್ಲಿ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಿವೆ. ದೇವಾಲಯದ ಸುತ್ತಲು ಕೆಳಪಟ್ಟಿಗೆಯಲ್ಲಿ ಕುದುರೆಗಳ ಸಾಲು ಕೋಲಾಟದ ಸಾಲುಗಳು ವಿಜಯನಗರ ಶೈಲಿಯಲ್ಲಿದ್ದು ಹಂಪಿಯ ದೇವಾಲಯಗಳನ್ನು ನೆನಪಿಸುತ್ತವೆ.ದೇವಾಲಯದ ಗರ್ಭಗುಡಿಯಲ್ಲಿ ಸುಮಾರು ಐದು ಅಡಿ ಎತ್ತರವಿರುವ ಶಂಖ,ಚಕ್ರ,ವರದ,ಅಭಯ ಹಸ್ತವನ್ನು ಹೊಂದಿರುವ ವಿಷ್ಣುವಿನ ಮೂರ್ತಿಯನ್ನು ರಂಗನಾಥನೆಂದು ಕರೆಯುವರು.

ಈ ದೇವಾಲಯದ ಉತ್ತರ ದಿಕ್ಕಿನಲ್ಲಿರುವ ಕ್ರಿ.ಶ.1697 ರ ಶಿಲಾಶಾಸನದಲ್ಲಿ ಅಹೋಬಿಲ ನರಸಿಂಹ ದೇವಾಲಯವೆಂದು ಕರೆದಿದ್ದು ದಿಲ್ಲಿಯ ಬಾದಷಹರ ದಂಡು ಬಂದು ಹಾಳುಮಾಡಿದ ಕಾರಣ ಚಿತ್ರದುರ್ಗ ವಂಶದ ಕಾಮಗೇತಿ ವಂಶದ ಭರಮಣ್ಣ ನಾಯಕನು ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಅಹೋಬಿಲ ನರಸಿಂಹ ದೇವರನ್ನು ಪುನಃ ಪ್ರತಿಷ್ಠೆ ಮಾಡಿದ ಎಂದು ತಿಳಿಸಿದೆ.

ಅಂತರಾಳದ ಇಕ್ಕೆಲಗಳಲ್ಲಿರುವ ಒಂದು ಗರ್ಭಗುಡಿಯಲ್ಲಿ ಮಹಾಲಕ್ಷ್ಮಿ ದೇವಿಯ ಮೂರ್ತಿಯಿದ್ದರೆ, ಮತ್ತೊಂದು ಕಡೆ ಆಳ್ವಾರರ ಮೂರ್ತಿಗಳಿವೆ. ರಂಗಮಂಟಪದಲ್ಲಿ ನಾಲ್ಕು ಕಂಬಗಳಿದ್ದು ಆಳವಾಗಿ ಕೊರೆಯಲಾಗಿರುವ ಉಬ್ಬು ಶಿಲ್ಪಗಳಿವೆ. ಲಕ್ಷ್ಮೀನರಸಿಂಹ, ಭೈರವ, ಬೆಣ್ಣೆ ಕೃಷ್ಣ, ಬೇಡರ ಕಣ್ಣಪ್ಪ ಮಾರುತಿ ಅನಂತಪದ್ಮನಾಭರ ಮೂರ್ತಿಗಳನ್ನು ಕಂಬಗಳಲ್ಲಿ ಮೂಡಿಸಿರುತ್ತಾರೆ. ರಂಗಮಂಟಪಕ್ಕೆ ಮೂರು ಕಡೆ ಪ್ರವೇಶದ್ವಾರವನ್ನು ನಿರ್ಮಿಸಲಾಗಿದೆ.

ಈ ದೇವಾಲಯದ ಮುಖಮಂಟಪದಲ್ಲಿ ಯಾಳಿ ಸ್ತಂಭಗಳು, ಸಂಯುಕ್ತ ಸ್ತಂಭಗಳು ವಿಜಯನಗರ ಶೈಲಿಯಲ್ಲಿವೆ. ಮುಖಮಂಟಪದ ಪ್ರವೇಶದಲ್ಲಿ ಶಿಲಾತೋರಣ ಸ್ತಂಭ ಮತ್ತು ನಾಲ್ಕು ಕುಬ್ಜರು ಎತ್ತಿ ಹಿಡಿದಂತಿರುವ ದೀಪ ಸ್ತಂಭಗಳು ಬಹಳ ವಿಶೇಷವಾಗಿವೆ. ಈ ದೇವಾಲಯದ ಮುಂದಿರುವ ಧ್ವಜಸ್ತಂಭದಲ್ಲಿ ಕೈಮುಗಿದು ನಿಂತಿರುವ ಹದಿನೈದು ರಾಜ ದಂಪತಿಗಳ ಮೂರ್ತಿಗಳಿವೆ.

**ಹೀಗೆ ಬನ್ನಿ:**

ದಾವಣಗೆರೆ-ಚಿತ್ರದುರ್ಗ ರಸ್ತೆಯಲ್ಲಿ ಸುಮಾರು 37 ಕಿ.ಮೀ. ಪ್ರಯಾಣಿಸಿ ಭರಮಸಾಗರ ಸಮೀಪವಿರುವ ಲಕ್ಕಿಮುತ್ತೇನಹಳ್ಳಿಯಿಂದ ಬಲಕ್ಕೆ ತಿರುಗಿ ಸುಮಾರು ಎರಡು ಕಿ.ಮೀ. ಕ್ರಮಿಸಿ ನೀರ್ಥಡಿಯನ್ನು ಸೇರಬಹುದು.



# ಕೋಟಿ ಗೋವಿಂದನಾಮ ಲಿಖಿತಕ್ಕೆ ಪಾಲಿಸಬೇಕಾದ ಸಾಧಾರಣ ನಿಯಮಗಳು




1. ಕೋಟಿ ಗೋವಿಂದ ನಾಮವನ್ನು ಬರೆಯುವುದಕ್ಕೆ ಪ್ರತಿದಿನವೂ ಒಂದು ಪ್ರತ್ಯೇಕವಾದ ಸಮಯದಲ್ಲಿ ಪೂರ್ವದಿಕ್ಕಿಗೆ ಕುಳಿತು ಪ್ರಾರಂಭಿಸಬೇಕು.

2. ಪ್ರತಿದಿನವೂ ಕೋಟಿ ಗೋವಿಂದ ನಾಮವನ್ನು ಬರೆಯುವ ಮೊದಲು ಮನಸ್ಸಿನಲ್ಲೇ ಶ್ರೀವೆಂಕಟೇಶ್ವರನಿಗೆ ನಮಸ್ಕರಿಸಬೇಕು.

3. ಗೋವಿಂದನಾಮವನ್ನು ಬರೆಯಬೇಕೆಂದು ಕೊಂಡಾಗ ಶ್ರೀವೆಂಕಟೇಶ್ವರ ಸ್ವಾಮಿಯ ಪಟದ ಮುಂದೆ ಅಥವಾ ವಿಗ್ರಹದ ಮುಂದೆ ಮಾನಸಿಕವಾಗಿ ಸಂಕಲ್ಪವನ್ನು ಮಾಡಿಕೊಳ್ಳಬೇಕು.

4. ಒಳ್ಳೆಯ ದಿನವನ್ನು, ನೋಡಿಕೊಂಡು ಪುಸ್ತಕಕ್ಕೆ ಅರಿಶಿನ , ಕುಂಕುಮ ವನ್ನುಇಟ್ಟು ದೇವರ ಸನ್ನಿಧಿಯಲ್ಲಿ ಇರಿಸಿ. ಹೂಗಳೊಂದಿಗೆ ಶ್ರೀವೇಂಕ ಟೇಶ್ವರ ಸ್ವಾಮಿಯ ಅಷ್ಟೋತ್ತರ ಶತನಾಮಾವಳಿಯೊಂದಿಗೆ ಪೂಜಿಸ ಬೇಕು.

5. ಗೋವಿಂದ ನಾಮವನ್ನು ಬರೆಯುವಾಗ ಇತರ ಕೆಲಸಗಳನ್ನು ಯೋಚನೆ ಗಳನ್ನು ಮಾಡಬಾರದು. ಮನಸ್ಸು ಅಚಲವಾಗಿರಿಸಿಕೊಂಡು ಗೋವಿಂದಾ! ಎಂದು ಸ್ಮರಿಸುತ್ತಾ ಮನಸ್ಸನ್ನು ದೇವರಲ್ಲೇ ಕೇಂದ್ರೀಕರಿಸಿ ಕೊಂಡು ಬರೆಯಬೇಕು.

6. ಅಕಸ್ಮಾತ್ತಾಗಿ ಯಾವುದಾದರೂ ಕೆಲಸದ ಮೇಲೆ ಹೊರಗೆ ಹೋಗ ಬೇಕಾದಲ್ಲಿ ಒಂದು ಸರಿಸಂಖ್ಯೆಯಲ್ಲಿ ಗೋವಿಂದನಾಮವನ್ನು ಬರೆ ಯುವುದನ್ನು ನಿಲ್ಲಿಸಿ ಪುಸ್ತಕವನ್ನು ಮುಚ್ಚಿ ನಮಸ್ಕರಿಸಿ ಹೋಗಬೇಕು. ಕೆಲಸವಾದ ನಂತರ ಕೈಕಾಲುಗಳನ್ನು ತೊಳೆದುಕೊಂಡು ಶುಚಿಯಾಗಿ ಮತ್ತೆ ಬರೆಯುವುದನ್ನು ಪ್ರಾರಂಭಿಸಬೇಕು.

7. ಕೋಟಿ ಗೋವಿಂದ ನಾಮವನ್ನು ಬರೆಯುವ ಪುಸ್ತಕವನ್ನು ಭದ್ರವಾಗಿ ರಿಸಿಕೊಳ್ಳಬೇಕು. ಅದರಲ್ಲಿ ಇತರ ಯಾವುದೇ ವಿಷಯಗಳನ್ನು ಬರೆಯ ಬಾರದು.ಇದಕ್ಕೆ ಉಪಯೋಗಿಸುವ ಲೇಖನಿಯನ್ನೂ ಪ್ರತ್ಯೇಕವಾಗಿರಿಸಿ ಕೊಳ್ಳಬೇಕು.

8. ಕೋಟಿ ಗೋವಿಂದ ನಾಮವನ್ನು ಬರೆಯುವುದಕ್ಕೆ ಪ್ರತ್ಯೇಕವಾದ ಸಮಯವೆನ್ನುವುದು ಇರುವುದಿಲ್ಲ. ಆದರೆ ಶುಚಿ, ಶುಭ್ರತೆ, ಪವಿತ್ರತೆ ಯನ್ನು,ಪ್ರಶಾಂತತೆಯನ್ನು ಪಾಲಿಸಬೇಕು. ಒಂದು ವೇಳೆ ನಿದ್ದೆ ಬರುತ್ತಿ ದ್ದರೆ, ನಿದ್ದೆಯನ್ನು ತಡೆದುಕೊಂಡು ಬರೆಯಬಾರದು.

9. ಪ್ರತಿ ಲಕ್ಷ ನಾಮಗಳಿಗೆ ಪ್ರತ್ಯೇಕವಾದ ಪೂಜೆ, ನೈವೇದ್ಯವನ್ನು ಮಾಡಿ ಪ್ರಸಾದವನ್ನು ಹಂಚಬೇಕು. ಕೋಟಿಗೋವಿಂದ ನಾಮ ವನ್ನು ಬರೆದ ನಂತರ ಶಕ್ತ್ಯಾನುಸಾರ ಪೂಜೆ, ನೈವೇದ್ಯವನ್ನು ಸಮ ರ್ಪಿಸಿ ಆರಾಧನೆಯನ್ನು ಮಾಡುವುದು ಒಳ್ಳೆಯದು .

10. ಕೋಟಿ ಗೋವಿಂದನಾಮವನ್ನು ಬರೆದು ಮುಗಿಸಿದ ನಂತರ ಆ ಪುಸ್ತಕವನ್ನು ಅರಿಸಿನದ ಬಟ್ಟೆಯಲ್ಲಿ ಸುತ್ತಿ ತಿರುಮಲೆಯ ಶ್ರೀವೆಂಕ ಟೇಶ್ವರನಿಗೆ ಸಮರ್ಪಿಸಬೇಕು.

11. ಈ ರೀತಿ ಗೋವಿಂದ ನಾಮಕೋಟಿಯನ್ನು ಭಕ್ತರು ನಿಷ್ಠೆಯಿಂದ ಬರೆದರೆ ಮನಸ್ಸಿನಲ್ಲಿ ಅಂದುಕೊಂಡ ಕೆಲಸಗಳನ್ನು ದಿಗ್ವಿಜಯ ವಾಗಿ ಪೂರ್ತಿಯಾಗುತ್ತವೆ.

12. ಯಾವುದಾದರೂ ಕೆಲಸವು ಪೂರ್ತಿಯಾಗಬೇಕೆಂದು ಸಂಕಲ್ಪಿಸಿ ಕೊಂಡು ಕೋಟಿ ಗೋವಿಂದನಾಮವನ್ನು ಬರೆಯಲು ಪ್ರಾರಂಭಿ ಸಿದರೆ ಅದು ಖಂಡಿತವಾಗಿಯೂ ನೆರವೇರುತ್ತದೆ.

13. ಅಶುಚಿಯಾಗಿದ್ದಾಗ, ಮೈಲಿಗೆಯ ಸಮಯದಲ್ಲಿ ಗೋವಿಂದ ನಾಮವನ್ನು ಬರೆಯಬಾರದು.

14. ಸ್ತ್ರೀ, ಪುರುಷರು, ವಯಸ್ಸು ತಾರತಮ್ಯಗಳಿಲ್ಲದಂತೆ ಕೋಟಿ ಗೋವಿಂದ ನಾಮವನ್ನು ಬರೆಯಬಹುದು.

# ಶ್ರೀದವಿಟ್ಠಲದಾಸರು

## (ಕ್ರಿ.ಶ. 1740 - 1820)

– ಡಾ॥ ಎನ್. ಜಿ. ವಿಜಯಲಕ್ಷ್ಮೀ ರಾಘವೇಂದ್ರಾಚಾರ್ಯ
9035185102

ಫಲಸ್ತುತಿ ಪ್ರವಕ್ತಾರಂ ಜಗನ್ನಾಥಾರ್ಯ ಸೇವಕಂ।
ಶ್ರೀ ಕೃಷ್ಣ ಸದ್ಭಕ್ತಂ ವಂದೇ ಶ್ರೀ ಶ್ರೀದವಿಟ್ಠಲಂ

ಮಾನವಿ ಜಗನ್ನಾಥದಾಸರು ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ 'ಶ್ರೀಮದ್ ಹರಿಕಥಾಮೃತಸಾರ' ಗ್ರಂಥವನ್ನು ರಚಿಸಿದರೆಂದು ಪ್ರತೀತಿ. ಅದು ಷಟ್ಪದಿಯಲ್ಲಿ, 32 ಸಂಧಿಗಳಲ್ಲಿ 988 ಪದ್ಯಗಳಿಂದ ಕೂಡಿದೆ. ಜಗನ್ನಾಥ ದಾಸರಿಗೆ ಬಲಗೈ ಬಂಟರೆನಿಸಿದ ಪ್ರಾಣೇಶದಾಸರಲ್ಲದೆ ಅನೇಕ ಶಿಷ್ಯರು ಗಳಿದ್ದರು. ಕೆಲವರಿಗೆ ತಾವು ಹರಿಕಥಾಮೃತಸಾರ ಗ್ರಂಥಕ್ಕೆ ಫಲಸ್ತುತಿ ಬರೆಯ ಬೇಕೆಂಬ ಆಸೆ. ಧೈರ್ಯ ಮಾಡಿ ಒಮ್ಮೆ ಪ್ರಾಣೇಶ ದಾಸರು ತಾನು ಫಲಸ್ತುತಿ ಬರೆಯಬಹುದಾ ಎಂದು ಗುರುಗಳನ್ನು ಕೇಳಿದರಂತೆ, ಬೇಡ, ಅದನ್ನು ಬರೆ ಯುವವರು ಬೇರೆ ಇದ್ದಾರೆ ಎಂದು ಹೇಳಿಬಿಟ್ಟರಂತೆ. ಆ ಫಲಸ್ತುತಿಯನ್ನು ಬರೆದ ಜಗನ್ನಾಥದಾಸರ ಶಿಷ್ಯರಾದ ಶ್ರೀದವಿಟ್ಠಲದಾಸರ ಜೀವನ, ಸಾಧನ ಹಾಗೂ ಬೋಧನೆಯ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸೋಣ.

ಜಗನ್ನಾಥದಾಸರು ಸಜ್ಜನರನ್ನು ಉದ್ಧರಿಸುವುದಕ್ಕಾಗಿ ಬೇರೆ ಬೇರೆ ಊರುಗಳಿಗೆ ಶಿಷ್ಯರ ಸಮೇತ ಹೋಗಿ ಹರಿಕಥೆ ಮಾಡಿ ಬರುತ್ತಿದ್ದರು. ಒಮ್ಮೆ ಧಾರವಾಡ ಜಿಲ್ಲೆಯ ಕರ್ಜಗಿ ಗ್ರಾಮದಲ್ಲಿ ಮುಖ್ಯಸ್ಥರೆಲ್ಲಾ ಸೇರಿ ಊರಿನ ಮಧ್ಯೆ ಇರುವ ವಿಟ್ಠಲನ ಮಂದಿರದಲ್ಲಿ ಎರಡು ದಿನ ಜಗನ್ನಾಥದಾಸರ ಹರಿಕಥೆಯ ವ್ಯವಸ್ಥೆ ಮಾಡಿದರು. ಅವರು ಹಾಗೂ ಅವರ ಶಿಷ್ಯರು ಇಳಿದು ಕೊಳ್ಳಲು ಊರಿಗೆ ದೊಡ್ಡ ಕುಳ ಎನಿಸಿದ್ದ ಗಲ್ಲಿ ಮೀಸೆ ದಾಸಪ್ಪನ ಅರಮನೆಯಂತಹ ಮನೆಯನ್ನು ಬಿಡಿಸಿಕೊಟ್ಟಿದ್ದರು.ಅಲ್ಲೇ ಅವರೆಲ್ಲರ ಪೂಜೆ ಹಾಗೂ ಭೋಜ ನದ ವ್ಯವಸ್ಥೆ ಮಾಡಲಾಗಿತ್ತು.

ದಾಸಪ್ಪ ವೇದ ಶಾಸ್ತ್ರಾದಿಗಳ ಅಧ್ಯಯನ ಚೆನ್ನಾಗಿ ಮಾಡಿಕೊಂಡಿದ್ದರು. ಆದರೆ ತಂದೆತಾಯಿಗಳಿಗೆ ಒಬ್ಬನೇ ಮಗನಾಗಿದ್ದುದರಿಂದ ಸ್ವಲ್ಪ ಸ್ವೇಚ್ಛಾಚಾರಿಯಾಗಿದ್ದರು ಸಾಕಷ್ಟು ಆಸ್ತಿ ಅಂತಸ್ತು ಕರಣಿಕ ವೃತ್ತಿ ಎಲ್ಲವೂ ಅತಿಶಯವಾಗಿ ಇದ್ದವು. ತಂದೆ ತಾಯಿ ಕಾಲವಶರಾದ ನಂತರ ಇವರ ಸ್ವೇಚ್ಛಾಚಾರ ಹದ್ದು ಮೀರಿತ್ತು. ಮನೆಯಲ್ಲಿ ಸಾಧ್ವಿ ಪತ್ನಿ ಗುಂಡಮ್ಮ ಭಯ ಭಕ್ತಿಯಿಂದ ಪತಿ ಸೇವೆ ಮಾಡುತ್ತಿದ್ದರೂ ದಾಸಪ್ಪ ಮತ್ತೊಬ್ಬ ಹೆಂಗಸಿನ ವ್ಯಾಮೋಹದಲ್ಲಿ ಬಿದ್ದಿದ್ದರು. ದಿನದ ಬಹು ಭಾಗವನ್ನು ಉಪಪತ್ನಿಯ ಮನೆ ಯಲ್ಲಿಯೇ ಕಳೆಯುತ್ತಿದ್ದರು. ಬೆಳಗ್ಗೆ ಎದ್ದು ಅಭ್ಯಾಸ ಬಲದಂತೆ ಸ್ನಾನಾಹ್ನೀಕ ಗಳನ್ನು ಮುಗಿಸಿ, ವೃತ್ತಿಯ ಕಡೆಗೆ ಗಮನ ಕೊಟ್ಟು ಗದ್ದೆ ತೋಟಗಳ ಕಡೆಗೆ ಹೋಗಿ ಬರುತ್ತಿದ್ದರು. ಮಧ್ಯಾಹ್ನ ಪತ್ನಿ ಮಾಡಿದ ರುಚಿಯಾದ ಊಟ ಮಾಡಿ ವಿಶ್ರಾಂತಿ ಪಡೆದು ಸಾಯಂಕಾಲ ಇಸ್ತ್ರಿ ಮಾಡಿದ ಗರಿಗರಿಯಾದ ಬಿಳಿ ಪಂಚೆ ಅಂಗಿ ಹಾಕಿಕೊಂಡು, ಶಿಸ್ತಾಗಿ ಅಲಂಕಾರ ಮಾಡಿಕೊಂಡು ತಾಂಬೂಲ ಮೆಲ್ಲುತ್ತಾ ಆ ಉಪ ಪತ್ನಿಯ ಮನೆಗೆ ನಡೆದು ಹೋಗುತ್ತಿದ್ದರು. ದಾರಿಯಲ್ಲಿ ಕಂಡ ಪರಿಚಿತರೆಲ್ಲಾ ಭಯ ಮಿಶ್ರಿತ ಗೌರವ ನೀಡುತ್ತಿದ್ದರು. ರಾತ್ರಿ ಯಾವಾಗಲೋ, ಇಲ್ಲವೋ ಬೆಳಗಿನ ಜಾವ ತನ್ನ ಮನೆಗೆ ಹಿಂದಿರುಗುತ್ತಿದ್ದನು. ಬಹು ಮೂಲ್ಯ ವಸ್ತುಗಳೆಲ್ಲಾ ಆ ಹೆಂಗಸಿನ ಕೈ ಸೇರಿತ್ತಿದ್ದವು. ಗುಂಡಮ್ಮನ ಕೈಲಿ ಬಹು ಅಂದವಾದ ರತ್ನ ಖಚಿತ ಬಂಗಾರದ ಕಡಗ ಇದ್ದವು. ಅವುಗಳನ್ನು ತನ್ನ ಪ್ರೇಯಸಿಗೆ ಕೊಡಬೇಕೆಂದು ದಾಸಪ್ಪ ಬಹಳ ಪ್ರಯತ್ನ ಪಟ್ಟಿದ್ದರು. ಆದರೆ ಆ ಕಡಗಗಳು ತನ್ನ ತವರು ಮನೆಯದೆಂಬ ವ್ಯಾಮೋಹದಿಂದ ಎಷ್ಟು ಕೇಳಿದರೂ ಗಂಡನಿಗೆ ಕೊಟ್ಟಿರಲಿಲ್ಲ. ಈ ವಿಷಯವಾಗಿ ಗಂಡ, ಹೆಂಡಿರ ಮಧ್ಯೆ ಆಗಾಗ ಮಾತಿನ ಚಕಮಕಿ ನಡೆಯುತ್ತಿದ್ದವು. ಪ್ರತಿಸಲವೂ ಗುಂಡಮ್ಮನೇ ಗೆಲ್ಲುತ್ತಿದ್ದಳು. ಇದೊಂದು ವಿಷಯದಲ್ಲಿ ಆಕೆ ಬಹಳ ನಿಷ್ಠೂರಳಾಗಿದ್ದಳು. ಬಾಕೀ ಏನೆಲ್ಲಾ ಕೇಳಿದರೂ ಕೊಟ್ಟು ಬಿಡುತ್ತಿದ್ದಳು. ಆ ಪ್ರೇಯಸಿ ಮನೆಯಿಂದ ರಾತ್ರಿ ಎಷ್ಟು ಹೊತ್ತಿಗೇ ಬರಲಿ ಕಾದಿದ್ದು ಆತನಿಗೆ ಊಟ ಬಡಿಸಿ ತಾನು ಊಟ ಮಾಡುತ್ತಿದ್ದಳು, ಸಹನೆಯ ಮೂರ್ತಿಯೇ ಆಗಿದ್ದಳು.

ಮಹಾ ಪುರುಷರಾದ ಜಗನ್ನಾಥದಾಸರು ತಮ್ಮ ಊರಿಗೆ ಹರಿಕಥೆ ಮಾಡಲು ಬರುತ್ತಾರೆ ಹಾಗೂ ತಮ್ಮ ಮನೆಯಲ್ಲಿಯೇ ಇರುವರು ಎಂಬ ಸುದ್ದಿ ಕೇಳಿ ಗುಂಡಮ್ಮನವರಿಗೆ ಬಹಳ ಸಂತೋಷವಾಯಿತು. "ಇದೊಂದು ದಿನ ಮನೆಯಲ್ಲಿ ಇರಿ. ದೊಡ್ಡವರು ಮನೆಗೆ ಬರುತ್ತಿದ್ದಾರೆ ಬೇಕಾದರೆ ಈ ಬಂಗಾರದ ಕಡಗ ನಿಮಗೆ ಕೊಡುತ್ತೇನೆ." ಎಂದು ಪರಿಪರಿಯಾಗಿ ಪತಿಯನ್ನು ಕೇಳಿಕೊಂಡಳು. ಆದರೆ "ಎಲ್ಲಾ ನೀನೇ ನೋಡಿಕೋ" ಎಂದು ಹೇಳಿ ದಾಸಪ್ಪ ಹೊರಟು ಹೋದರು. ಪೂಜೆ ನೈವೇದ್ಯ ಎಲ್ಲಾ ಮುಗಿದ ನಂತರ ದಾಸರು "ದಾಸಪ್ಪನನ್ನು ಸಂಜೆ ಹರಿಕಥೆಗೆ ಕರೆದುಕೊಂಡು ಬಾ" ಎಂದು ಗುಂಡಮ್ಮನಿಗೆ ಹೇಳಿದರು.

ಅದ್ಯಾವ ಜನ್ಮಾಂತರದ ಪುಣ್ಯ ಫಲವೋ ಅಥವಾ ಆ ಸಾಧ್ವಿ ಗುಂಡಮ್ಮನ ಪ್ರಾರ್ಥನೆಯ ಫಲವೋ ದಾಸಪ್ಪ ಬೇಗ ಮನೆಗೆ ಬಂದು ಸಂಜೆ ಮಡಿ ಉಟ್ಟುಕೊಂಡು ಪತ್ನಿ ಜೊತೆಗೆ ಹರಿಕಥೆ ಕೇಳಲು ಹೊರಟರು. ಅವರನ್ನು ಗೌರವಿಸಿ ಮುಂಭಾಗದಲ್ಲಿಯೇ ಅವರನ್ನು ಕೂಡಿಸಿದರು.

ಹರಿಕಥೆ ಪ್ರಾರಂಭ ಮಾಡುವುದಕ್ಕೆ ಮುಂಚೆ ಕೆಲವು ಆಧ್ಯಾತ್ಮಿಕ ಪ್ರಶ್ನೆಗಳನ್ನು ಶ್ರೋತೃಗಳಿಗೆ ಕೇಳುವ ಪದ್ಧತಿ. ಅದರಂತೆ ಜಗನ್ನಾಥ ದಾಸರು ಕೇಳಿದ ಪ್ರಶ್ನೆಗಳಿಗೆ ದಾಸಪ್ಪನವರೇ ಬಡ ಬಡಾ ಅಂತ ಉತ್ತರ ಗಳನ್ನು ಹೇಳಿದರು. ನಂತರ ಪೀಠಿಕೆ ಪ್ರಾರಂಭಿಸಲು ಪ್ರಾಣೇಶದಾಸ ರಿಗೆ ಆದೇಶ ನೀಡಿದರು. ಸರಿ, ಪ್ರಾಣೇಶದಾಸರು ದಾಸಪ್ಪನ ಮುಖ ವನ್ನೇ ನೋಡುತ್ತಾ ಪೀಠಿಕಾರೂಪವಾಗಿ ಒಂದು ಹಾಡು ಹಾಡ ಲಾರಂಭಿಸಿದರು.

ಆದದ್ದಾಯಿತು ಇನ್ನಾದರು ಒಳ್ಳೆ ಹಾದಿ ಹಿಡಿಯೋ ಪ್ರಾಣಿ!
ಈ ದುರ್ನಡತೆಂದ್ಹೋದರೆ ಇಹಪರದಿ ಮೋದವೆಂದಿಗೂ ಕಾಣೇ ಪ್ರಾಣಿ॥
ನೆಲಾ ಸತಿ ಧನದೊಳಾನವರತ ಹುಳಾಗಿ ಇರುವ್ಯಲ್ಲೋ।
ಹಲಾ ಪಿಡಿದು ವಿಧಿ ಕುಲಾಚರಣೆ ಬಿಡೆ ಪಲಾ ತರುವರಲ್ಲೋ॥
ಸ್ಥಳಾಸ್ಥಳರಿಯದೆ ಕಲಾಪ ಮಾಡಿಘಕೊಳಾಗುವುದು ಸಲ್ಲೋ।
ಎಲ್ಲಾ ಕೇಳುವಂತಿಲಾಮಾತ್ರನೀ ಗೆಲಾಹ ಬಗ್ಗಿಲ್ಲೋ॥
ಶಿಲಾದಿ ವಿಗ್ರಹಥಳಾಸೆ ಹರಿಯಂಬೆಲಾ ಕೇವಲ ಸುಳ್ಳೋ।
ಚಲಾ ಪ್ರತಿಮೆ ಪದಗಳಾರ್ಜಿಸದಲೆ ಮಲಾ ತಿನುತಿಹ್ಯಲ್ಲೋ॥
ಕಳಾ ಬಿಡದಿರೆ ಅನಿಳಾನ ಹರಿಮನಿ ಮೊಳಾಗಿಹುದ್ಯಲ್ಲೋ
ನಳಾ ಭರತ ಮುಖ ಇಳಾಣ್ಮರಂದದಿ ಭಲಾ ಎನಿಸಲಿಲ್ಲೋ॥
ಬಿಲಾ ಸೇರಿ ತಲಿ ಕೆಳಾಗೆ ತಪಿಸಲು ಫಲಾ ಲೇಸಿತಿಲ್ಲೋ।
ಖಿಳಾರಿ ದಿನ ಬಿಂಜಲಾ ಕೊಳ್ಳೆನೆಂ ಛಲಾ ಮಾಡಲಿಲ್ಲೋ॥
ಬಲಾದರದಲಿಂ ತುಲಾದಿ ಸ್ನಾನ ಮೊದಲಾದ ವ್ರತವಿಲ್ಲೋ।
ಬಲಾರಿ ನುತ ಪ್ರಾಣೇಶವಿಟ್ಠಲನ ಬಲಾ ಗಳಿಸಿಕೊಳ್ಳೋ॥

ಈ ದೇವರನಾಮ ಕೇಳುತ್ತಿದ್ದಂತೆ ದಾಸಪ್ಪನ ಮನಸ್ಸು ಅವರಿಗರಿವಿಲ್ಲದಂತೆ ಪರಿವರ್ತನೆಗೊಂಡಿತು. ಪಶ್ಚಾತ್ತಾಪದಿಂದ ಹೃದಯ ದ್ರವಿತಗೊಂಡಿತು. ಕಣ್ಣುಗಳಿಂದ ಧಾರಾಕಾರ ನೀರು ಸುರಿ ಯಿತು. ಇಷ್ಟು ದಿನ ಬೂದಿ ಮುಚ್ಚಿಕೊಂಡಿದ್ದ ಬೆಂಕಿ ಪ್ರಜ್ವಲವಾ ಯಿತು. ಪಕ್ಕದಲ್ಲಿದ್ದ ಪತ್ನಿ ತನ್ನ ಪತಿಯ ಮುಖದಲ್ಲಾಗುತ್ತಿದ್ದ ಬದಲಾ ವಣೆಗಳನ್ನು ಕಂಡು ಹರ್ಷಗೊಂಡಳು. ಹರಿಕಥೆ ಮುಗಿದ ಮೇಲೆ ದಾಸಪ್ಪ ದಿಗ್ಗನೆದ್ದು ಹೋಗಿ ಜಗನ್ನಾಥದಾಸರ ಪಾದ ಹಿಡಿದು ತನ್ನನ್ನು ಉದ್ಧರಿಸಬೇಕೆಂದು ಕೇಳಿಕೊಂಡರು. "ನನ್ನ ನಿಮಿತ್ತ ಶ್ರೀಹರಿ ಇಂದು ಈ ಸುಜೀವಿಯನ್ನು ಉದ್ಧರಿಸಿದ. ಮಣ್ಣಿನೊಳಗೆ ಬಿದ್ದು ಮಸುಕಾಗಿದ್ದ ಮಾಣಿಕ್ಯವನ್ನು ಶುದ್ಧಗೊಳಿಸಿದೆ" ಎಂದು ಶ್ರೀಹರಿಯನ್ನು ಕೊಂಡಾಡಿ ತಮ್ಮ ಅಮೃತ ಹಸ್ತವನ್ನು ದಾಸಪ್ಪನ ತಲೆ ಮೇಲೆ ಇಟ್ಟು ಆಶೀರ್ವದಿಸಿ ಬೆನ್ನು ಸವರಿದಾಗ ಎಂದೂ ಕಾಣದ ವಿಚಿತ್ರ ಅನುಭವವನ್ನು ಅವರು ಅನುಭವಿಸಿದರು.

ಮರುದಿನ ಬೆಳಗ್ಗೆ ದಾಸಪ್ಪ ಬೇಗನೇ ಎದ್ದು ತನ್ನ ಮೀಸೆ ಕೂದಲುಗಳನ್ನು ತೆಗೆಸಿ ಗೋಪಾದದಷ್ಟು ಶಿಖಿ ಬಿಟ್ಟು ಗೋಪಿ ಚಂದನ ದ್ವಾದಶ ಮುದ್ರಾಂಕಿತರಾಗಿ ತುಳಸಿಮಾಲೆ ಹಾಕಿ ಪತ್ನಿ ಸಮೇತ ಜಗನ್ನಾಥದಾಸರ ಬಳಿ ಬಂದು ನಮಸ್ಕರಿಸಿದರು. ಮಾನಸಿಕ ಹಾಗೂ ದೈಹಿಕವಾಗಿ ಪರಿಶುದ್ಧನಾದ ದಾಸಪ್ಪನಿಗೆ ವಿಧಿ ಪೂರ್ವಕ ವಾಗಿ ದಾಸ ದೀಕ್ಷೆ ನೀಡಿದರು. ಕೊರಳಿಗೆ ಪದ್ಮಾಕ್ಷಿ ಮಣಿ ಮಾಲೆ ಹಾಕಿ "ಸುರಶೃತ" ಎಂಬ ಭಂಗಿ ವೀಣೆ ಕೊಟ್ಟು ಮಂತ್ರೋಪದೇಶ ಮಾಡಿದರು. "ಶ್ರೀದ ವಿಟ್ಠಲ" ಎಂಬ ಅಂಕಿತ ನೀಡಿದರು.

ಶ್ರೀದವಿಟ್ಠಲ ಸರ್ವರಂತರಾತ್ಮ
ನೀ ದಯದಿ ಒಲಿದು ನಿತ್ಯದಲಿ ಪಾಲಿಪುದು ॥ಪ॥

ಮಾತರೀಶ್ವ ಪ್ರಿಯ ಸುರೇತರಾಂತಕನೇ ಪುರುಹೂತ ನಂದನ ಸಖ ನಿರಾತಂಕದಿ ನೀ ತೋರು ಮನದಲಿ ಸಂಪ್ರೀತಿಯಿಂದಲಿ ಒಲಿದು ಹೋತಾಪ್ಪ ಗುರು ಜಗನ್ನಾಥವಿಟ್ಠಲ ಬಂದು ಎಂದು ಮೂರು ನುಡಿಗಳಲ್ಲಿ ಅಂಕಿತ ನಾಮ ರಚಿಸಿ ಕೊಟ್ಟರು.

ಈ ಕಾರ್ಯಕ್ರಮಕ್ಕೆ ದಾಸಪ್ಪನ ಪ್ರೇಯಸಿಯೂ ಬಂದಿದ್ದಳು. ತಾನೂ ವಿರಾಗಿಣಿಯಾಗಿ ಹರಿದಾಸಿನಿಯಾಗಿ ಇವರಿಬ್ಬರ ಸೇವೆ ಮಾಡಿ ಕೊಂಡಿರುವುದ ರಲ್ಲಿಯೇ ತನ್ನ ಜೀವನ ಕಂಡುಕೊಂಡಳು.

ಶ್ರೀದವಿಟ್ಠಲದಾಸರು ಸದಾ ಅಂತರ್ಮುಖಿಗಳಾಗಿದ್ದು ವಿಟ್ಠಲನ ಗುಡಿ ಯಲ್ಲಿಯೇ ಹೆಚ್ಚು ಸಮಯ ಕಳೆಯುತ್ತಿದ್ದರು ಹರಿದಾಸ ಸಾಹಿತ್ಯ ರಚನೆಗೆ ಹಾಗೂ ಭಗವಂತನ ಧ್ಯಾನಕ್ಕೆ ತಮ್ಮ ಜೀವನವನ್ನೇ ಮಡುಪಾಗಿಟ್ಟರು.ಚಿಕ್ಕ ಪುಟ್ಟ 65 ದೇವರ ನಾಮಗಳಲ್ಲದೇ ಸುಳಾದಿಗಳನ್ನು ರಚಿಸಿದರು. ಕ್ಷೇತ್ರ ಯಾತ್ರೆ ಮಾಡಿದರು. ಆಯಾ ಕ್ಷೇತ್ರಕ್ಕೆ ಹೋದಾಗ ಅಲ್ಲಿಯ ಮೂರ್ತಿಯನ್ನು ಕೊಂಡಾಡಿದರು.



ಒಮ್ಮೆ ತಿರುಪತಿ ಕ್ಷೇತ್ರಕ್ಕೆ ಹೋದರು. ದಾರಿ ಉದ್ದಕ್ಕೂ ಅವನನ್ನೇ ಚಿಂತಿಸುತ್ತ ಬೆಟ್ಟ ಏರಲಾರಂಭಿಸಿದರು. “ಎಂದು ಕಾಂಬೆನೋ ನಿನ್ನಾ ಹೇ ಶ್ರೀನಿವಾಸ” ಎಂದು ಆರ್ತರಾಗಿ ಹಾಡತೊಡಗಿದರು. ನಗೆಮೊಗದ ಸುಪ್ರಸನ್ನ, ನತ ಜನ ಬಂಧು, ಎನ್ನ ಬಿಟ್ಟಗಲದಲೆ ಮನ ಮಂದಿರದಲಿ ನಿಲ್ಲು, ದುರ್ವಿಷಯದ ಅಂಧಕಾರದಲ್ಲಿ ಮುಳುಗಿರುವೆ ನಾನು. ನೀನಲ್ಲದೆ ಈ ಭೂ ವಲಯದಲ್ಲಿ ನನ್ನನ್ನು ಕಾಯುವರನು ಕಾಣೆ ಸುಲಭದಲಿ ಅತಿ ಶಯದ ದೇವ ನೀನು. ನಂಬಿದವರನ್ನು ಸಲಹುವವನು ನೀನು ಎಂದು ನಾನಾ ರೀತಿಯಾಗಿ ಸ್ತುತಿಸಿ ಶ್ರೀನಿವಾಸನ ಎದುರಿಗೆ ಬಂದು ನಿಂತರು. ಶ್ರೀನಿವಾಸನನ್ನು ಕಣ್ಣು ತುಂಬಾ ತುಂಬಿಕೊಂಡರು.

ಜಗನ್ನಾಥದಾಸರ ಹರಿಕಥಾಮೃತಸಾರಕ್ಕೆ ಫಲಸ್ತುತಿ ಬರೆದರು. ಭಾಮಿನಿಷಟ್ಪದಿಯಲ್ಲಿ 24 ಪದ್ಯಗಳಲ್ಲಿ ರಚಿಸಿದ ಈ ಫಲಸ್ತುತಿ 33 ನೇ ಸಂಧಿ ಎಂದು ಪ್ರಸಿದ್ಧವಾಗಿದೆ.

ಕರ್ಜಗಿ ದಾಸರೆಂದೆ ಪ್ರಸಿದ್ಧರಾದ ಶ್ರೀದವಿಟ್ಠಲದಾಸರು ಆಷಾಢ ಶುದ್ಧ ಏಕಾದಶಿಯಂದು ಕರ್ಜುಗಿಯಲ್ಲಿ ವಿಟ್ಠಲನ ಎದುರಿಗೆ ದರ್ಭಾಸನ ಹಾಕಿಕೊಂಡು ಕುಳಿತು ಲಯ ಚಿಂತನೆ ಮಾಡುತ್ತಾ ಊರ್ಧ್ವ ಲೋಕದತ್ತ ಪ್ರಯಾಣ ಬೆಳೆಸಿದರು.ವಿಷಯ ತಿಳಿದ ಶಿಷ್ಯರು ಹಾಗೂ ಪ್ರಶಿಷ್ಯರೆಲ್ಲಾ ಬಂದು ಭಜನೆ, ಪಾರಾಯಣ ಮಾಡಿದರು.

ದಾನ ಧರ್ಮಗಳನ್ನು ಮಾಡಿದರು. ದೇಹ ಸಂಬಂಧಿಗಳು ಎನಿಸಿಕೊಂಡವರು ಅವರಿಗೆ ಯಾರೂ ಇರಲಿಲ್ಲ. ಪತ್ನಿ ಮತ್ತು ಆ ಹೆಂಗಸು ಮೊದಲನೇ ಹರಿಪುರ ಸೇರಿ ಕೊಂಡಿದ್ದರು. ಆ ಸಮಯಕ್ಕೆ ಸರಿಯಾಗಿ ನಾಲ್ಕು ಜನ ಭೂ ದೇವತೆಗಳು ಬಂದು ತಾವು ದಾಸರ ಸಂಬಂಧಿಗಳು ಎಂದು ಹೇಳಿ ವೇದೋಕ್ತ ವಿಧಾನದಿಂದ ದಾಸರ ಭೌತಿಕ ಶರೀರಕ್ಕೆ ಯಜ್ಞದಂತೆ ಅಂತ್ಯ ಸಂಸ್ಕಾರ ನಡೆಸಿದರೆಂದು ಪ್ರತೀತಿ. ವರದಾ ನದಿ ತೀರದಲ್ಲಿ ದಾಸರ ಕಳೇಬರವನ್ನು ಅಗ್ನ್ಯಾಂತರ್ಗತ ಪರಶುರಾಮದೇವರಿಗೆ ಸಮರ್ಪಣೆ ಮಾಡಿದರು.




**Haridasaru Chitrisiruva Vinayaka - ondu Adhyayana.**

**Written by :** Dr. L. Sudha
# 10, "Mahathi"
13th 'C' Main,
18thCross,
Malleshwaram
Bangalore - 560055
Mob: 9845525259

**Published by :** National Institute of Vedic Sciences # 58, Raghavendra Colony, Chamarjpet, Bangalore- 560 018

**First Editioon** :2022
**(C)** :Author
**pages** :9+239=248
**Price** :250/-
**Size** :Demy 1/8

## ಹರಿದಾಸರು ಚಿತ್ರಿಸಿರುವ ವಿನಾಯಕ ಒಂದು ಅಧ್ಯಯನ

**ಲೇಖಕಿ : ಡಾ || ಸುಧಾ .ಎಲ್**
**ಪುಟಗಳು : 240**
**ಪ್ರಕಾಶಕರು : ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ**
**ಬೆಂಗಳೂರು - 560018**

ಮುಳುಬಾಗಿಲು ಶ್ರೀ ಪಾದಮಠದ ಶ್ರೀ ಶ್ರೀ ಕೇಶವನಿಧಿ ತೀರ್ಥರ ಅನುಗ್ರಹ ಸಂದೇಶ ಹಾಗೂ ಡಾ|| ಕೆ. ಗೋಕುಲನಾಥ್ ಅವರ ವಿದ್ವತ್ ಪೂರ್ಣ ಮುನ್ನುಡಿಯಿಂದ ಕೂಡಿರುವ ಈ ಕೃತಿ 6 ಅಧ್ಯಾಯಗಳನ್ನು ಹೊಂದಿದೆ.

ಪುರಾಣಗಳಲ್ಲಿ ವಿನಾಯಕನ ಚಿತ್ರ, ಗಣಪತಿಯ ಅವತಾರಗಳು ಮತ್ತು ರೂಪ ವೈವಿಧ್ಯ ಹರಿದಾಸರ ವಿನಾಯಕ ಕೀರ್ತನೆಗಳು, ಸಂಕಷ್ಟಹರ ಚತುರ್ಥಿ ಮೊದಲಾದ ವಿಷಯಗಳನ್ನೊಳಗೊಂಡಿರುವ ಈ ಕೃತಿಯಲ್ಲಿ ಆಸ್ತಕರಿಗೆ ಹೆಚ್ಚಿನ ಮಾಹಿತಿ ನೀಡುವ ಅನುಬಂಧವು ಇದೆ.

ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಈ ಸಂಪ್ರಬಂಧಕ್ಕೆ ಎಂಫಿಲ್ ಪದವಿ ನೀಡಿ ಪುರಸ್ಕರಿಸಿದೆ.

ಲೇಖಕಿ ಡಾ|| ಎಲ್. ಸುಧಾ ಅವರು ಈ ಕೃತಿಯಲ್ಲಿ ಗಣೇಶನ ಗಣಾ-ಶಕ್ತಿ ಸ್ಥಾನವನ್ನು ಮತ್ತು ವಿವಿಧ ಸಂಪ್ರದಾಯಸ್ಥರ ಪೂಜಾ ವಿಧಾನವನ್ನು ವಿವರಿಸಿದ್ದಾರೆ. ಹರಿದಾಸರು ವಿನಾಯಕನನ್ನು ಕುರಿತು ರಚಿಸಿರುವ ಕೀರ್ತನೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ವಿಷಯ ಸಂಗ್ರಹ, ವಿಷಯ ಮಂಡನೆ, ವಿಶ್ಲೇಷಣೆಯಿಂದ ಕೂಡಿರುವ ಈ ಕೃತಿ ಸಹೃದಯರನ್ನು ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ.

**ಕೆ.ಎಸ್. ರಾಮಮೂರ್ತಿ**
**9449750618**

ಕಳೆದ ಸಂಚಿಕೆಯಿಂದ





# ತಿರುಪತಿಯ ಶಾಸನಗಳಲ್ಲಿ ವಿಜಯನಗರ ಕಾಲದ ಜಲತಂತ್ರಜ್ಞಾನ ಒಂದು ಸಮೀಕ್ಷೆ

– ಡಾ।। ಹರಿಹರ ಶ್ರೀನಿವಾಸರಾವ್
91104 89871

ಕ್ರಿ.ಶ.1493 ರ ಒಂದು ತಮಿಳು ದಾಖಲೆಯಂತೆ, ಕುಮಾರ ತಾತಯ್ಯಂಗಾರರು ದೇವಸ್ಥಾನದ ಖಜಾನಿಯಲ್ಲಿ 5000 ನರಪಣಂ ಬಂಗಾರ ನಾಣ್ಯಗಳನ್ನು ದೇವಸ್ಥಾನದ ಭೂಮಿಗಳಿಗೆ ನೀರು ಹರಿಸುವ ಕಾಲುವೆ ಹಾಗೂ ಕೆರೆಗೆಂದೇ ಠೇವಣಿಯಾಗಿ ಇರಿಸಿದ್ದರು. ಇದಕ್ಕೆ ಪ್ರತಿಫಲವಾಗಿ ದಾನಿಗೆ ದೇವರ ಪ್ರಸಾದದ ಒಂದು ಭಾಗ ನೀಡಲಾಯಿತು. ಇದು ಅಂದಿನ ಸಂಪ್ರದಾಯಕ್ಕೆ ಅನುಗುಣವಾಗಿತ್ತು. ಕ್ರಿ.ಶ. 1507 ರ ಶಾಸನವು ತಿಪ್ಪೆಶೆಟ್ಟಿ ಎಂಬ ವ್ಯಾಪಾರಿಯು 8,305 ಪಣಂ ಅಂದರೆ ಬಂಗಾರದ ನಾಣ್ಯಗಳನ್ನು, ದೇವಸ್ಥಾನದ ಹಳ್ಳಿಗಳ ಅಭ್ಯುದಯಕ್ಕಾಗಿ, ಕೆರೆ ಹಾಗೂ ಕಾಲುವೆ ಗಳ ರಚನೆಗೆಂದೇ, ದೇವಸ್ಥಾನದ ಖಜಾನೆಯಲ್ಲಿ ಠೇವಣಿ ಇರಿಸಿದ್ದಾಗಿ ತಿಳಿಸುತ್ತದೆ. ಧರ್ಮಪುರದ ಸಿದ್ಧಂಸೆಟ್ಟಿ ಎನ್ನುವ ವ್ಯಾಪಾರಿ. ತಿರುಮನೇರಿ ಎಂಬ ಹಳ್ಳಿಯಲ್ಲಿ ಭೂಮಿ ಸಾಗುವಳಿಗೆಂದೇ ಒಂದು ಕೆರೆ ಮತ್ತು ಒಂದು ದೇವಾಲಯವನ್ನು ತನ್ನ ಸ್ವಂತ ಖರ್ಚಿನಿಂದಲೇ ನಿರ್ಮಿಸಿದ್ದಲ್ಲದೇ, ಕೆರೆಯ ಕೆಳಗಿನ ಭೂಮಿಯನ್ನು ಸಾಗುವಳಿಗೆಂದೇ ಪರಿವರ್ತಿಸಿದನು. ಇದಕ್ಕೆ ಪ್ರತಿಫಲವಾಗಿ, ದೇವಸ್ಥಾನದಿಂದ ಅವನಿಗೆ ಪ್ರಸಾದ ದೊರೆಯುತ್ತಿತ್ತು. ಅಂದಿನ ಕಾಲದ ಸಮಾಜದಲ್ಲಿ ಇದೊಂದು ಗೌರವ ಸೂಚಕವಾಗಿತ್ತು. ಕ್ರಿ.ಶ.1526ರ ಶಾಸನದಲ್ಲಿ ವಿವರಿಸಿದಂತೆ ಪೇವುಲ ಮನ್ನಪ್ಪ ಯಾರ್ ಎಂಬುವರು ತಿರುಪತಿ ಶ್ರೀಭಂಡಾರದಲ್ಲಿ ಅಂದರೆ ಖಜಾನೆಯಲ್ಲಿ 3,0000 ಪಣ (ಬಂಗಾರದ ನಾಣ್ಯ) ಠೇವಣಿ ಇರಿಸಿ, ಅದನ್ನು ದೇವಸ್ಥಾನದ ಹಳ್ಳಿಗಳ ನೀರಾವರಿ ಕಾರ್ಯಗಳಿಗೆ ಹಾಗೂ ಕೆರೆ ನಿರ್ಮಾಣಕ್ಕೆ ಉಪಯೋಗಿಸಬಹುದು ಎಂದು ಸೂಚಿಸಿದನಂತೆ ಇದಕ್ಕೆ ಪ್ರತಿಯಾಗಿ ಅಂದಿನ ಸಂಪ್ರದಾಯದಂತೆ, ಆತನಿಗೆ ದೇವರಿಗೆ ಅರ್ಪಿಸಿದ ನೈವೇದ್ಯದಲ್ಲಿ ಒಂದು ಭಾಗ ಪ್ರಸಾದ ರೂಪದಲ್ಲಿ ದೊರೆಯುತ್ತಿತ್ತು.

ಅರಸು ಕೃಷ್ಣದೇವರಾಯನ ಆಡಳಿತ ಅವಧಿಯ ಒಂದು ಶಾಸನವು ನಾಗುಲ-ಉಪ್ಪಾಲಪಾಡು ಹಳ್ಳಿಯಲ್ಲಿ ಒಂದು ನೂತನ ಕೆರೆ ನಿರ್ಮಾಣಕ್ಕೆಂದು ಎರಡು ಗೊರು ಭೂಮಿಯನ್ನು ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಇದೇ ಸ್ಥಳದಲ್ಲಿದ್ದ ಒಂದು ಹಳೆ ಕೆರೆಯ ಒಡ್ಡು ಒಡೆದು ಹೋದುದರಿಂದ ಹಾಗೂ ಕೆರೆಯಲ್ಲಿ ಹೂಳು ತುಂಬಿಕೊಂಡುದುದರಿಂದ ನೂತನ ಕೆರೆಯ ನಿರ್ಮಾಣಕ್ಕೆ ಸ್ಥಳೀಯ ಆಡಳಿತಾಧಿಕಾರಿ ತಿಮ್ಮರಸಯ್ಯನಿಂದ ಅಪ್ಪಣೆ ಪಡೆಯಲಾಯಿತು.

## ಸ್ವಾಮಿ ಪುಷ್ಕರಣಿಯ ಹಿನ್ನೆಲೆ, ಐತಿಹಾಸಿಕತೆ ಮತ್ತು ವಿಶೇಷ ತಂತ್ರಜ್ಞಾನ

ಕ್ರಿ.ಶ. 1532 ರ ತಿರುಮಲದ ಶಾಸನವು ಒಂದು ಕುತೂಹಲಕಾರಿ ಸಂಗತಿಯನ್ನು ನೀಡುತ್ತದೆ. ಅರಸು ಅಚ್ಯುತರಾಯನ ಆಜ್ಞೆಯಂತೆ ಶ್ರೀ ವೇಂಕಟೇಶ್ವರ ಸ್ವಾಮಿಯ ಭಕ್ತನಾಗಿದ್ದ ತಾಳ ಪಾಕಂ ತಿರುಮಲಾಚಾರ್ಯಲು ಎಂಬುವರು ಹಳೆಯ ಕೆರೆಯೊಂದಕ್ಕೆ ನಾಲ್ಕೂ ದಿಕ್ಕಿನಲ್ಲಿ ಪಾವಟಿಗೆ ಗಳನ್ನು ನಿರ್ಮಿಸಿ ಪುಷ್ಕರಣಿಯನ್ನಾಗಿ ಪರಿವರ್ತಿಸಿದರು. ಇದಲ್ಲದೇ ಒಂದು ಮಂಟಪ, ಪ್ರಾಕಾರವನ್ನು ನಿರ್ಮಿಸಿದರು. ಅದೇ ಇಂದಿನ "ಸ್ವಾಮಿ ಪುಷ್ಕರಣಿ" ! ತಿಮ್ಮಪ್ಪನ ದೇವಸ್ಥಾನದ ಎಡಪಕ್ಕದಲ್ಲಿ ಶ್ರೀ ವರಾಹಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಈಗಲೂ ಕಂಡು ಬರುವ ಈ ಜಲಾಕರಕ್ಕೆ ತನ್ನದೇ ಆದ "ಪೌರಾಣಿಕ ಮಹತ್ವ ಇದೆ". ವರಾಹಸ್ವಾಮಿಯು, ಶ್ರೀನಿವಾಸನಿಗೆ ಇದೇ ಕೆರೆಯ ಅಂದರೆ ಸ್ವಾಮಿ ಪುಷ್ಕರಣಿಯ ದಡದಲ್ಲಿ ನೆಲೆಸಲು ಜಾಗಕೊಟ್ಟಿದ್ದನು. ಶ್ರೀನಿವಾಸ ಎನ್ನುವುದು ತಿರುಪತಿ ತಿಮ್ಮಪ್ಪನಿಗೆ ಮದುವೆಗೆ ಮುಂಚೆ ಇದ್ದ ಹೆಸರು. ಈ ಹೆಸರು ಅಲ್ಲಿ ಕ್ಷೇತ್ರ ಮಹಾತ್ಮೆಯಲ್ಲಿ ಶ್ರೀ ಪುರಂದರದಾಸರು, ಅಣ್ಣಮಾಚಾರ್ಯರು. ಅಲ್ಲದೇ ಭಾರತದ ಅನೇಕ ದಾಸವರೇಣ್ಯರ ಸಂಗೀತ ರಚನೆಯಲ್ಲಿ ಈ ಹೆಸರು ಯಥೇಚ್ಚವಾಗಿ ಉಲ್ಲೇಖಗೊಂಡಿದೆ.



ಇಲ್ಲಿ ಉಲ್ಲೇಖಿಸಲೇಬೇಕಾದ ಎರಡು ಪ್ರಮುಖ ಸಂಗತಿಗಳಿವೆ. ಮೊದಲನೆಯದಾಗಿ ತಾಂತ್ರಿಕವಾಗಿ ಈ ಶಾಸನವು ಹೇಳುವಂತೆ ಅದು ಒಂದು ಕೆರೆಯಾಗಿರದೆ ಒಂದು ಸಣ್ಣ ಕುಂಟೆ ಅಥವಾ ದೊಡ್ಡ ಚಿಲುಮೆಯಾಗಿದ್ದಿರಬೇಕು. ಪ್ರಾಯಶಃ ಶಾಸನದ ಕಾಲಕ್ಕೆ ಅದು ಶಿಥಿಲವಾಗಿರಬೇಕು, ಅಥವಾ ವಿಜಯನಗರದ ಕೃಷ್ಣ ದೇವರಾಯ ಇತ್ಯಾದಿ ರಾಜರಿಂದ ಈ ಕ್ಷೇತ್ರವು ಹೆಚ್ಚು ಪ್ರಸಿದ್ಧಗೊಂಡು, ಅಭಿವೃದ್ಧಿ ಹೊಂದಿದ್ದರಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತ ಜನರನ್ನು ಆಕರ್ಷಿಸುತ್ತಿದ್ದಿರಬೇಕು. ಹೀಗಾಗಿ ಮೊದಲೇ ಸ್ವಾಮಿಪುಷ್ಕರಣಿ ಎಂಬ ಹೆಸರಿನಿಂದ ಇದ್ದ, ಈ ಜಲಾಕರವನ್ನು ಹೆಚ್ಚು ಜನೋಪಯೋಗಿಯನ್ನಾಗಿಸಲು ಸ್ನಾನ,ಪಾನ ಇತ್ಯಾದಿ ಅವಶ್ಯಕತೆಗಳಿಗೆ ಬೇಕಾಗುವಂತೆ ದೊಡ್ಡದಾಗಿ ವಿಸ್ತರಿಸಿರಬೇಕು. ಇದಲ್ಲದೇ ವಿಜಯನಗರ ಅರಸರ ಕಾಲಕ್ಕೂ ಮುನ್ನ ಇದ್ದ ಸ್ಕಾಂದ ಪುರಾಣ (ಕ್ರಿ.ಶ. 10 ನೇ ಶತಮಾನ) ಇತ್ಯಾದಿ ಗ್ರಂಥಗಳಲ್ಲಿ ಈ ನೀರಾಕರವನ್ನು "ಸ್ವಾಮಿಪುಷ್ಕರಣಿ" ಎಂದೇ ಹೆಸರಿಸಲಾಗಿದೆ.

ಪುರಂದರದಾಸರು ಈ ಕೊಳವನ್ನು ತಮ್ಮ ಹಾಡುಗಳಲ್ಲಿ ಕೋನೇರಿ ಶಬ್ದವನ್ನು ಬಳಸಿದ್ದಾರೆ.

"ಕೋನೇರಿ" ಶರಣು ವೇಂಕಟರಮಣ ನಿನ್ನ ಚರಣವ
ನಂಬಿದೆ ನಾನು ।।ಪ।।
(ಪುರಂದರ ಸಾಹಿತ್ಯ ದರ್ಶನ ಸಂ. 1 ಪು.323)
'ಪಾಪವಿನಾಶಿನಿತೀರ್ಥ' ನಮ್ಮ ಪಾತಕವ ಪರಿಹರಿಸೇ।
ಶ್ರೀವೇಂಕಟಗಿರಿ ಶ್ರೀನಿವಾಸ।
"ಕೋನೇರಿ" ತೀರ್ಥಾದಿವಾಸ ನಿವಾಸ ।।2।।

**ಕೋನೇರಿ :**

ಸ್ವಾಮಿ ಪುಷ್ಕರಿಣಿ ತೀರ್ಥವನ್ನೇ ಇಲ್ಲಿ ಕೋನೇರಿ (ಕೋನೇರು) ಎಂದು ಕರೆಯಲಾಗಿದೆ. ಕೋಣ+ಏರು>ಕೋಣೇರು>ಕೋನೇರು. ಪ್ರತಿ ಮೂಲೆಯಲ್ಲಿಯೂ ಇರುವ ಕಲ್ಲುಗಳ ಕೋಣಗಳನ್ನು ಸುವ್ಯವಸ್ಥಿತವಾಗಿ, ಓರಣವಾಗಿ ಜೋಡಿಸಿ, ಒಪ್ಪವಾಗಿ ಕಾಣುವಂತೆ ಈ ಪುಷ್ಕರಣಿಯನ್ನು ರಚಿಸುತ್ತಾರೆ. ಈ ಕೊಳದ ಹೆಸರನ್ನು ಮರಾಠಿಭಾಷೆಯಲ್ಲಿ ಕೋನೇರಿ ಎಂದೇ ಕರೆಯುತ್ತಾರೆ. (ಅದೇ. ಪು. 274) ಈ ಕೊಳದ ದಂಡೆಯ ಮೇಲೆಯೇ ವೇಂಕಟೇಶ್ವರನ ದೇವಸ್ಥಾನವಿದೆ.

ಎರಡನೆಯ ಪ್ರಮುಖ ಅಂಶವೆಂದರೆ ಶಾಸನದಲ್ಲಿ ಉಲ್ಲೇಖಿತವಾಗಿರುವ ತಾಳ್ಳಪಾಕಂ ತಿರುಮಲಾಚಾರ್ಯರು ಎಂಬುವರು, ತೆಲುಗು ಸಾಹಿತ್ಯದಲ್ಲಿ ತಿರುಪತಿಯ ವೇಂಕಟೇಶನ ಭಕ್ತಿ ಸಂಗೀತದಲ್ಲಿ ಮೇರುವೆ ನಿಲ್ಲಿಸಿ, ಶ್ರೀ ಪುರಂದರದಾಸರ ಸಮಕಾಲೀನರಾಗಿದ್ದ ತಾಳ್ಳಪಾಕಂ ಅಣ್ಣಮಾಚಾರ್ಯರ ಸುಪುತ್ರರು. ಹೀಗೆ ಈ ಶಾಸನವು ಐತಿಹಾಸಿಕ, ಜಲ ತಂತ್ರಜ್ಞಾನ, ಭಕ್ತಿ ಸಂಗೀತ ಹಾಗೂ ಸಾಹಿತ್ಯ 4 ದೃಷ್ಟಿಯಿಂದ ಪ್ರಮುಖ ಆಕರವನ್ನು ಒಳಗೊಂಡಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಸಾಮಾನ್ಯವಾಗಿ ನಮ್ಮೆಲ್ಲರಿಗೂ ರೂಢಿಗತವಾಗಿ ತಿಳಿದಿರುವ ಸಂಗತಿ ಎಂದರೆ ತಿರುಪತಿಗೆ ಇನ್ನೊಂದು ಪರ್ಯಾಯ ಪದ ಎಂದರೆ ಲಡ್ಡು ಪ್ರಸಾದವೆಂಬುದು ಎನ್ನುವಷ್ಟರ ಮಟ್ಟಿಗೆ ಪ್ರಸಿದ್ಧವಾಗಿದೆ. ಇತ್ತೀಚೆಗೆ ಇದನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ISO ಗುಣಮಟ್ಟವನ್ನು ಹೊಂದಿರುವ ವಿಶೇಷ ಪ್ರಸಾದವೆಂದು ಪರಿಗಣಿಸಲಾಗಿದೆ. ಇದಕ್ಕೆ ಮುಖ್ಯಕಾರಣ ಅಲ್ಲಿ ದೊರೆಯುವ ನೀರು ಎಂದರೆ ತಪ್ಪಾಗಲಾರದು. ನೀರಿನ ರುಚಿಗೆ ಪ್ರಮುಖ ಕಾರಣ ಅದರಲ್ಲಿ ಕರಗಿರುವ ಆಮ್ಲಜನಕದ ಅಂಶ, ಪಿ.ಎಚ್. ವಾಲ್ಯೂ, ಇತ್ಯಾದಿ. ಬೆಟ್ಟದಲ್ಲಿ ದೊರೆಯುವ ಬಸಿ ಮಳೆ ನೀರನ್ನು ಸಂಗ್ರಹಿಸಿ ಉಪಯೋಗಿಸುವುದರಿಂದಾಗಿ ಆಮ್ಲಜನಕದ ಅಂಶವು ಸಾಮಾನ್ಯ ನೀರಿನಲ್ಲಿ ದೊರೆಯುವುದಕ್ಕಿಂತ (4 ಮಿ.ಗ್ರಾಂ/ಲೀ) ಎರಡು ಪಟ್ಟು (8 ಮಿ.ಗ್ರಾಂ/ಲೀ) ಹೆಚ್ಚಾಗಿರುವುದು. ಪಿ.ಹೆಚ್. ವ್ಯಾಲ್ಯೂ 6.8 ನಿಂದ 7.5 ಒಳಗೇ ಇರುತ್ತದೆ. ಇಂತಹ ನೀರಿನ ಗುಣಮಟ್ಟವು ಇಲ್ಲಿಯ ಸ್ವಾಮಿ ಪುಷ್ಕರಣೆ, ಆಕಾಶಗಂಗೆ ಇತ್ಯಾದಿ ಜಲಾಕರಗಳಲ್ಲಿ ಇಂದಿಗೂ ಕಂಡು ಬರುತ್ತದೆ.

**ಸಾರಾಂಶ :**

ತಿರುಪತಿ ತಿರುಮಲೆ ದೇವಸ್ಥಾನದ ಗ್ರಂಥ ಭಂಡಾರದಲ್ಲಿ ನಮ್ಮ "ಪ್ರಾಚೀನ ಭಾರತೀಯ ಪರಂಪರೆಯ" ಜಲ ವಿಜ್ಞಾನ ತಂತ್ರಜ್ಞಾನವನ್ನೊಳಗೊಂಡ ಅನೇಕ ಅಪರೂಪದ ಶಾಸನಗಳು ವಿವಿಧ ಭಾಷೆಯ ಹಾಗೂ ಶಾಸ್ತ್ರ ಗ್ರಂಥಗಳು ಲಭ್ಯವಿದೆ.

ಶಾಸನಗಳಲ್ಲಿ ಉಲ್ಲೇಖಿತವಾಗಿರುವ "ಏರಿವಾರಿಯಮ್" ನಂತಹ ಗ್ರಾಮ ಮಟ್ಟದ ಸಂಸ್ಥೆಗಳನ್ನು ವಿಜಯನಗರದ ಅರಸರು ಅಧಿಕಾರದ ವಿಕೇಂದ್ರೀಕರಣದ ಮೂಲಕ ಸಾಧಿಸಿ ತೋರಿಸುತ್ತಲೇ ಅವುಗಳ ಮೂಲಕ ಸುಸ್ಥಿರ ಬೇಸಾಯ ಮಾರ್ಗವನ್ನು ಅಳವಡಿಸಿ ಸಾಮ್ರಾಜ್ಯದ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಯನ್ನು ಪಡೆದಿದ್ದರು ಎಂದು ತಿಳಿದು ಬರುತ್ತದೆ

ಹೀಗೆ ತಿರುಪತಿಯ ವಿಜಯನಗರ ಕಾಲದ ಶಾಸನಗಳು ತಮ್ಮದೇ ಆದ ವಿಶೇಷ ಕೊಡುಗೆಯನ್ನು ಜಲವಿಜ್ಞಾನ ತಂತ್ರಜ್ಞಾನಕ್ಕೆ ನೀಡಿ ಜ್ಞಾನ ಭಂಡಾರವನ್ನು ವಿಸ್ತರಿಸುತ್ತದೆ.

ತಿರುಮಲೆ ತಿರುಪತಿ ದೇವಸ್ಥಾನಗಳು

# ಶ್ರೀ ವೆಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್

## (ಒಂದು ದಿನದ ದೇಣಿಗೆ ಕೊಡುವ ಯೋಜನೆ)

ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರಿಗೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರು ಸ್ಪಂದಿಸಿ ! ಮತ್ತೊಬ್ಬರ ಹಸಿವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ದೇಣಿಗೆಯನ್ನು ವ್ಯಕ್ತಿಗಳು ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಸಂಯುಕ್ತವಾಗಿಯೂ ಸಹ ವಿರಾಳವನ್ನು ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 38 ಲಕ್ಷಗಳು ) ಅಲ್ಪಾಹಾರ - (ರೂ. 8 ಲಕ್ಷಗಳು) ಮಧ್ಯಾಹ್ನ ಭೋಜನ (ರೂ. 15 ಲಕ್ಷಗಳು ) ಅಥವಾ ರಾತ್ರಿ ಭೋಜನ (ರೂ. 15 ಲಕ್ಷಗಳು) ವಿತರಿಸಲು ಆಯ್ಕೆ ಮಾಡಬಹುದು. ದಾತರಿಗೆ ತಿ.ತಿ.ದೇ., ದೇವಸ್ಥಾನದವರು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ. ಈ ಒಂದು ದಿನದ ವಿರಾಳ ಪಥಕವು ಸೆಪ್ಟೆಂಬರ್, 2024 ರ ವರೆಗೆ ಅನ್ವಯಿಸುತ್ತದೆ.

**ಹೆಚ್ಚಿನ ವಿವರಗಳಿಗಾಗಿ :**

ಉಪಕಾರ್ಯನಿರ್ವಹಣಾಧಿಕಾರಿ (ಡೋನಾರ್‌ಸೆಲ್) ಎಫ್.ಎ.ಸಿ.,

ತಿ.ತಿ.ದೇ., ತಿರುಮಲೆ. ಫೋನ್ : -

0877 - 2263001, 2263472.

ಈ ಮೇಲ್ ಐ.ಡಿ. :-

cdmc.ttd@tirumala.org

ಇದರಲ್ಲಿ ಪಾಲ್ಗೊಂಡ ಭಕ್ತದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.

### ದೈನಂದಿನ ವೆಚ್ಚಗಳು

| | |
|---|---|
| 1. ಅಲ್ಪಹಾರ (ಟಿಫಿನ್ ) | - 08 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 15 ಲಕ್ಷಗಳು |
| 3. ರಾತ್ರಿ ಭೋಜನ | - 15 ಲಕ್ಷಗಳು |
| ಒಟ್ಟು ಮೊತ್ತ | - 38 ಲಕ್ಷಗಳು |





**ಈ ಮೊತ್ತವನ್ನು ದಾನಿಗಳು ತಿ.ತಿ.ದೇ., ಅನ್ನಪ್ರಸಾದ ಟ್ರಸ್ಟ್‌ನಲ್ಲಿ ನೀಡಬಹುದು.**

ಧಾರಾವಾಹಿ



# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ತಿರುಮಲೆಯ ಆಲಯ ವಿವರ

**ಕಳೆದ ಸಂಚಿಕೆಯಿಂದ**

ಶಕ 1320 ರಿಂದ ಕ್ರಿ.ಶ,1360 ರ ಒಳಗೆ ಯಾದವರಾಜ ಶ್ರೀ ರಂಗನಾಥ ಯಾದವ ರಾಯನಿಂದ ಈ ಮಂಟಪವು ನಿರ್ಮಾಣವಾಗಿರಬೇಕು. ಆದರೆ ಈ ಅಂಶವನ್ನು ಸಮರ್ಥಿಸುವ ಯಾವ ಶಾಸನವೂ ದೊರೆಯದು. ಏನೇ ಆದರೂ ಶೈಲಿಯ ಆಧಾರದಿಂದ ನೋಡಿದಲ್ಲಿ ಈ ಮಂಟಪವು ಕ್ರಿ.ಶ.14 ನೇ ಶತಮಾನಕ್ಕೆ ಸೇರಿದ್ದಾಗಿರದೆ,ವಿಜಯನಗರದ ಕಾಲದ ಖಚಿತ ಗುರುತುಗಳನ್ನು ಪಡೆದ ನಂತರದ ಕಾಲದ್ದಾಗಿರಬೇಕು. ವ್ಯಾಳಿ, ಸಿಂಹ, ಓಡುವ ಕುದುರೆಗಳು, ಬೋದಿಗೆಗಳು, ಸುಂದರ ಸಂಯುಕ್ತ ಕಂಬಗಳು, ಸ್ಪಷ್ಟವಾಗಿ ವಿಜಯನಗರದ ಕಾಲದ ಕೆತ್ತನೆಯನ್ನು ಸೂಚಿಸುತ್ತವೆ. ಜೊತೆಗೇ ಕಂಭಗಳ ಮೇಲೆ ಕೆತ್ತಲಾಗಿರುವ ವಿಜಯನಗರದ ಅರಸರ ರಾಜ ಲಾಂಛನ ವರಾಹಮುದ್ರೆ ಈ ವಿಷಯದಲ್ಲಿ ಯಾವ ಸಂದೇಹವನ್ನೂ ಉಳಿಯಗೊಡದು, ಮೇಲ್ಛಾವಣಿಯಲ್ಲಿ ರಾಮ,ರಾವಣ ಯುದ್ಧ, ಮಹಾಬಲಿ,ವಾಮನ,ರಾಮಲಕ್ಷ್ಮಣರ ಕಿರು ವಿಗ್ರಹಗಳೂ ಕಂಡುಬರುವಂತಿವೆ. ಹೀಗಾಗಿ ಕ್ರಿ.ಶ.15,16ನೇ ಶತಮಾನದ ವಿಜಯನಗರದ ಪ್ರೌಢಕಲಾವಂತಿಕೆಯನ್ನು ಈ ಮಂಟಪ ಎತ್ತಿ ತೋರುವುದು.

ಕಂಬಗಳ ಮೇಲಿನ ಅಡ್ಡ ತೊಲೆಗಳು ಅಲ್ಲಲ್ಲಿ ಎರಡನೆಯ ಹಂತವನ್ನೂ ಹೊಂದಿದ್ದು, ಮಧ್ಯದ ಸ್ಥಳದಲ್ಲಿನ ಕಪೋತಗಳಲ್ಲಿ ವೈಷ್ಣವ ಪುರಾಣಗಳ ದೃಶ್ಯಗಳು ಹಾಗೂ ನೃತ್ಯಗಳನ್ನು ಚಿತ್ರಿಸುವ ಶಿಲ್ಪಗಳಿವೆ.

ಮಂಟಪದ ದಕ್ಷಿಣದ ಕೊನೆಯಲ್ಲಿ ಒಂದು ಗುಡಿಯೂ ಒಂದು ಆವರಣವೂ ಇವೆ. ಈ ಆವರಣವು ಕಪ್ಪು ಗ್ರಾನೈಟ್ ಶಿಲೆಯಾಗಿದ್ದು ಈಗ ವಾಹನವನ್ನಿಡುವ ಸ್ಥಳವಾಗಿದೆ. ಇಲ್ಲಿನ ಗುಡಿಯು ಗರ್ಭಗುಡಿ,ಅಂತರಾಳಗಳಿಂದ ಕೂಡಿದ್ದು,ಕುಂಭಪಂಜರ,ಗೋಡೆಗಂಬ, ಸಾಲ ಕೋಷ್ಟಗಳಿಂದಾದ ಗೋಡೆಗಳನ್ನು ಹೊಂದಿದೆ. ಮಂದಿರದ ಮುಂಭಾಗದಲ್ಲಿ ಎರಡೂ ಕಡೆಗೆ ಸಾಲಕೋಷ್ಟವಿರುವ ದ್ವಾರವಿದೆ. ಇಡೀ ಮುಂಭಾಗವು ಸಿಂಹಲಲಾಟದ ಮೇಲಿರುವ ನಾಸಿಕಾಲಂಕೃತ ಕಪೋತದಿಂದ ಕೂಡಿದೆ.

**ತಿರುಮಲರಾಯ ಮಂಟಪ**

ರಂಗಮಂಟಪದ ಪಕ್ಕದಲ್ಲಿ,ಒಳಪ್ರಾಕಾರದ ಗೋಡೆಯ ಪೂರ್ವಕ್ಕೆ 12 ಅಡಿ ದೂರದಲ್ಲಿ ಪೂರ್ವಪಶ್ಚಿಮ 40 ಅಡಿ ಹಾಗೂ ಉತ್ತರ ದಕ್ಷಿಣ 80 ಅಳತೆಯ ಮತ್ತೊಂದು ಮಂಟಪವಿದೆ. ಇದನ್ನು ತಿರುಮಲರಾಯ ಮಂಟಪ ಅಥವಾ ಅನ್ನಾ ಊಂಜಲ್ ಮಂಟಪವೆನ್ನುತ್ತಾರೆ. ಇದರ ಮುಂಭಾಗ ತಗ್ಗಿನಲ್ಲಿದ್ದು ಹಿಂಭಾಗ ಎತ್ತರದಲ್ಲಿದೆ.ಬೇರೆ ಬೇರೆ ಕಾಲದಲ್ಲಿ ನಿರ್ಮಾಣವಾಗಿರಬೇಕು. ಹಿಂದಿನ ಭಾಗವೆಂದರೆ ದಕ್ಷಿಣ ಭಾಗವು 4510 ಅಡಿಗಳಾಗಿದ್ದು ಸ್ವಲ್ಪ ಎತ್ತರದ ತಳಹದಿಯಲ್ಲಿ ನಿಂತಿದ್ದು,ಪರಂಪರೆಯ ಪ್ರಕಾರ ಸಾಳುವ ನರಸಿಂಹರಾಯನು ತಾನು ಆರಂಭಿಸಿದ ಅನ್ನಾ ಊಂಜಲ್ ಸೇವೆಯನ್ನು ನಡೆಸಲು ಕ್ರಿ.ಶ.1473ರಲ್ಲಿ ಇದನ್ನು ನಿರ್ಮಿಸಿದನು. ಇದನ್ನು 16 ನೇ ಶತಮಾನದಲ್ಲಿ ಅರವೀಡು ಬುಕ್ಕರಾಯ ರಾಮರಾಜ, ಶ್ರೀರಂಗರಾಜ ತಿರುಮಲರಾಜನು ಜೀರ್ಣೋದ್ಧಾರ ಮಾಡಿ ಈ ಗಣ ಸ್ಥಿತಿಗೆ ಹಿಗ್ಗಲಿಸಿದನು. ತಿರುಮಲರಾಜನ ಕಾಲದಲ್ಲಿ ಈ ಮಂಟಪದಲ್ಲಿ ವಸಂತೋತ್ಸವವೇ

ಮೊದಲಾದ ಉತ್ಸವಗಳೂ ನಡೆಯುತ್ತಿದ್ದವು. ಬ್ರಹ್ಮೋತ್ಸವದ ಆರಂಭವನ್ನು ಸೂಚಿಸುವ ಧ್ವಜಾರೋಹಣದ ಸಮಯದಲ್ಲಿ ಗರುಡಧ್ವಜ ಹಾರಾಟವಾದಾಗ ಮಲೆಯಪ್ಪ ಸ್ವಾಮಿಯು ಈ ಮಂಟಪದಲ್ಲಿಯೇ ಓಲಗ ನಡೆಸುವುದು. ನಿಜವೆಂದರೆ ಈ ಸಂದರ್ಭದಲ್ಲಿ ಹಂಚಲಾಗುವ ಪ್ರಸಾದ ತಿರುಮಲರಾಯ ಪೊಂಗಲ್ ಎಂದೇ ಈಗಲೂ ಆ ದೊರೆಯು ದೇಣಿಗೆ ಕೊಟ್ಟ ಪ್ರಸಾದ ವಿತರಣೆ ಬಹು ಹಿಂದೆಯೇ ಕೊನೆಗೊಂಡಿದ್ದರೂ-ಅವನ ಹೆಸರಿನಲ್ಲೇ ವಿತರಣೆ ಆಗುವುದು. ಈ ಮಂಟಪವು ಧ್ವಜಸ್ತಂಭ ಮಂಟಪವನ್ನು ಮುಟ್ಟುವಂತಿದೆ.

ಈ ಮಂಟಪದ ದಕ್ಷಿಣ ಭಾಗವನ್ನು ನಿರ್ಮಿಸಿದ ಸಾಳುವ ನರಸಿಂಹನು, ಎರಡನೇ ವಿರುಪಾಕ್ಷನು ಕೊಲೆಯಾದ ನಂತರ ಸಾಮ್ರಾಜ್ಯವನ್ನು ಅರಾಜಕತೆಯಿಂದ ರಕ್ಷಿಸಿ ನಲವತ್ತು ವರ್ಷಕಾಲ ಸುಸ್ಥಿರ ಪ್ರಭುತ್ವವನ್ನು ನೀಡಿದ ಖ್ಯಾತ ಸೇನಾನಿ ಯಾಗಿದ್ದ. ಇವನು ವೈಷ್ಣವ ಭಕ್ತನಾಗಿ ಆಲಯಕ್ಕೆ ಅನೇಕ ಕಾಣಿಕೆಗಳನ್ನು ನೀಡಿದ. ಹಲವಾರು ಶಾಸನಗಳಲ್ಲಿ ಹೆಸರಿಸಲ್ಪಟ್ಟನಾದ,ಕಂದಾಡೈ ರಾಮಾನುಜ ಅಯ್ಯಂಗಾರ್ಯನು ಸಾಮ್ರಾಟನಿಗೆ ಸ್ವಾಮಿಯ ಸೇವೆಯಲ್ಲಿ ಬಹುಮುಖವಾದ ನೆರವು ನೀಡಿದನೆಂದು ಹೇಳಬಹುದು. ಸಾಳುವ ನರಸಿಂಹನ ರಾಣಿ ಶ್ರೀ ರಂಗ ದೇವಿ, ಮತ್ತಿತರ ರಾಜ ಪರಿವಾರದವರೂ ಆಲಯಕ್ಕೆ ಹತ್ತು ಹಲವು ಕಾಣಿಕೆಗಳನ್ನು ನೀಡಿದ್ದಾರೆ. ಕ್ರಿ.ಶ.1485ರಲ್ಲಿ ಈತನು ಶೇಷಾದ್ರಿ ಶಿಖರಕ್ಕೆ ಹೋಗುವ ಕಾಲುದಾರಿಯಲ್ಲಿ ಲಕ್ಷ್ಮೀ ನರಸಿಂಹಸ್ವಾಮಿ ಆಲಯವನ್ನು ನಿರ್ಮಿಸಿದ. (ಜ.ಟಿ. 273)

ಈ ಮಂಟಪವು ವಿಜಯನಗರದ ಕಾಲದ ಮಾದರಿ ಕಂಬಗಳನ್ನು ಒಳಗೊಂಡಿದೆ. ಒಂದೇ ಕಲ್ಲಿನಲ್ಲಿ ಕೇಂದ್ರಸ್ತಂಭದ ಸುತ್ತ ನಾಲ್ಕು ಸಣ್ಣ ಗಾತ್ರದ ಕಂಬಗಳಿದ್ದು ಕಲ್ಲಿನಲ್ಲಿ ಬಡಿಯುವುದರಿಂದ ಸಪ್ತಸ್ವರಗಳನ್ನುಂಟು ಮಾಡುವಂತಹವುಗಳು. ಮುಖ್ಯ ಸ್ತಂಭಗಳು, ರಾವುತರನ್ನು ಹೊಂದಿ ಓಡುತ್ತಿರುವ ಕುದುರೆಗಳನ್ನು ಹೊಂದಿವೆ. ಈ ಮಂಟಪದಲ್ಲಿನ ಉಬ್ಬುಶಿಲ್ಪಗಳು ಇಡೀ ಆಲಯದಲ್ಲಿಯೇ ಅತ್ಯುತ್ತಮವಾದವು.

ಹೊರಗಡೆಯ ಎರಡು ಸಾಲಿನ ಕಂಬಗಳು ಶಿಲ್ಪಶೂನ್ಯವಾದವುಗಳಾದರೆ ಒಳಗಡೆಯ ಕಂಬಗಳಲ್ಲಿ ಪ್ರಾಣಿ ಶಿಲ್ಪಗಳಿವೆ. ಮಂಟಪದ ಹಿಂಭಾಗದಲ್ಲಿಯೂ ಎರಡೂ ಕಡೆ ನಾಲ್ಕು ಕಂಬಗಳ ಎರಡು ಸಾಲುಗಳಿವೆ. ಮಂಟಪದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳಿದ್ದು ಪ್ರತಿಕಂಬವೂ ಮೂರು ಕಿರುಕಂಬಗಳನ್ನು ಹೊಂದಿದೆ.

ತಿರುಮಲರಾಯ ಮಂಟಪದ ಒಂದು ಮೂಲೆಯಲ್ಲಿ ತೋದರಮಲ್, ಈತನ ಹೆಸರು ಲಾಲಾಖೇಮರಾಮ. ಅವನ ತಾಯಿ ಮಾತಾ ಮೋಹನದೇವಿ ಹಾಗೂ ಪತ್ನಿ ಪಿತಾಬೀಬಿ ಯವರುಗಳ ವಿಗ್ರಹಗಳನ್ನಿಡಲಾಗಿದೆ. ಕೃಷ್ಣದೇವರಾಯನ ಕಂಚಿನ ವಿಗ್ರಹಗಳಂತೆಯೇ ಈ ವಿಗ್ರಹಗಳ ಭುಜಗಳ ಮೇಲೂ ಹೆಸರುಗಳನ್ನು ಕೆತ್ತಲಾಗಿದೆ.ಕ್ರಿ.ಶ.18ನೇ ಶತಮಾನದ ಆರಂಭದ ವರ್ಷಗಳಲ್ಲಿ ಗೋಲ್ಕೊಂಡದ ನವಾಬರ ಪರವಾಗಿ ಕರ್ನಾಟಕ ಪ್ರಾಂತ್ಯವನ್ನು ತೋದರಮಲ್ಲನು ನೋಡಿಕೊಳ್ಳುತ್ತಿದ್ದ. ಈತ ಕರ್ನಾಟಕದ ನವಾಬರ ಒಬ್ಬ ಸೇನಾನಿ.

## ಅಯಿನಾ ಮಹಲ್

ತಿರುಮಲರಾಯ ಮಂಟಪದ ಉತ್ತರದಲ್ಲಿ 42 ಅಡಿ ಚಚ್ಚೌಕದ ಒಂದು ಮಂಟಪವೂ ಅಷ್ಟೇ ವಿಸ್ತಾರವಾದ ಒಂದು ಮುಚ್ಚಿದ ಕೋಣೆಯೂ ಇವೆ. ಈ ಕೋಣೆಯನ್ನು ಅಯಿನಾಮಹಲ್ ಎಂದು ಕರೆಯುವರು,ಇದು ನಿಸ್ಸಂದೇಹವಾಗಿ ಈಚಿನ ಕಟ್ಟಡ. ಇದು ಎರಡು ಭಾಗವಾಗಿದ್ದು ಮುಂದುಗಡೆ ಆರು ಕಂಬಗಳ ಆರು ಸಾಲಿನ ವಿಶಾಲ ಸ್ಥಳ ಇದ್ದು,ಇದರ ಹಿಂದೆ ಒಂದು ಅಂತರಾಳದ ಹಿಂದಿನ ಗರ್ಭಗೃಹ ಹೊಂದಿದ ಗುಡಿ ಇದೆ. ಈ ಗುಡಿಯಲ್ಲಿನ ಗೋಡೆಗಳಲ್ಲಿ ಕನ್ನಡಿಗಳಿದ್ದು ಮಧ್ಯದಲ್ಲಿ ಒಂದು ಉಯ್ಯಾಲೆಯನ್ನು ಹೊಂದಿದ್ದು ಸ್ವಾಮಿಯನ್ನು ಇದರಲ್ಲಿ ಕೂಡಿಸಿ ಉತ್ಸವ ಮಾಡುತ್ತಾರೆ. ತಿರುಮಲೆಯ ಇಡೀ ಆಲಯದಲ್ಲಿ ಈ ಭಾಗದ ಹೆಸರು ಮಾತ್ರವೇ ಯಾವ ಶಾಸನದಲ್ಲೂ ಇಲ್ಲ. ಜಿಲ್ಲೆಯ ಅತ್ಯುನ್ನತ ಕಂದಾಯ ಶಾಖಾಧಿಕಾರಿಯು 1831 ರಲ್ಲಿ ಏಷಿಯಾ ಟಿಕ್ ಜರ್ನಲ್‌ನಲ್ಲಿ ಬರೆಯುತ್ತ ದೊಡ್ಡ ದೊಡ್ಡ ಕನ್ನಡಿಗಳನ್ನು ಹೊಂದಿದ ಈ ಮಂಟಪದಲ್ಲಿ ಬಹುಶಃ ಮುಕುರ ಉತ್ಸವವು ನಡೆಯುತ್ತಿರಬಹುದೆಂದು ಹೇಳಿದ್ದಾನೆ.

## ಸಂಪಂಗಿ ಪ್ರದಕ್ಷಿಣೆಯ ಆವರಣ

ಸಂಪಂಗಿ ಪ್ರದಕ್ಷಿಣೆಯ ಸುತ್ತು ಆವರಣದಲ್ಲಿ ವಿಜಯ ನಗರದ ಕಾಲದ ಮಾದರಿ ಕಂಬಗಳು-ದೇವತೆಗಳು ಹನುಮಂತ, ಗರುಡ ಮೊದಲಾದ ಶಿಲ್ಪಗಳೊಂದಿಗೆ ಕೂಡಿದ್ದು - ಇವು ಉತ್ತಮ ದರ್ಜೆಯ ಶಿಲ್ಪಕೃತಿಗಳಾಗಿಲ್ಲ.

ಸಂಪಂಗಿ ಪ್ರದಕ್ಷಿಣೆಯ ನಾಲ್ಕು ಮೂಲೆಗಳಲ್ಲೂ ಮೆರವಣಿಗೆ ಬರುವ ಉತ್ಸವ ಮೂರ್ತಿಯನ್ನು ನಿಲ್ಲಿಸಲು ಸ್ಥಳಾವಕಾಶ ನೀಡುವ ನೀಡುವ ನಾಲ್ಕು ಸುಂದರವಾದ ಮಂಟಪಗಳಿವೆ. ಕ್ರಿ.ಶ.1470 ರಲ್ಲಿ ಸಾಳುವ ನರಸಿಂಹನಿಂದ ತನ್ನ ಹೆಸರಿನಲ್ಲಿಯೂ ತನ್ನ ಪತ್ನಿ ಹಾಗೂ ಇಬ್ಬರ ಪುತ್ರರ ಹೆಸರಿನಲ್ಲಿಯೂ ನಿರ್ಮಿಸಲ್ಪಟ್ಟವು. (ತನ್ನ ಹಾಗೂ ತನ್ನ ಮೂವರು ಪುತ್ರರ ಹೆಸರಿನಲ್ಲಿಯೂ ನಿರ್ಮಿಸಿದ ನಾಲ್ಕು ಮಂಟಪ-ಪು-98 ಸಂ- 51 - 197 ಎ.ತಿ.ತಿ.ಸಂಪುಟ-2-ಅನುವಾದಕ) ಈ ನಾಲ್ಕು ಮಂಟಪಗಳಲ್ಲಿ ಉತ್ಸವ ಮೂರ್ತಿಯನ್ನು ವಿಶ್ರಾಂತಿಗೆಂದು ಇಳಿಸಿ ಪ್ರಸಾದವನ್ನು ಭಕ್ತರಲ್ಲಿ ವಿತರಣೆ ಮಾಡಬೇಕೆಂದು ನಿಯಮ ಹಾಕಿದ. ನಂತರ ಯುಗಾದಿಯ ನಂತರದ ದಿನಗಳ ವಸಂತೋತ್ಸವದಲ್ಲಿ ಮಾತ್ರವೇ ಈ ಉದ್ದೇಶದಲ್ಲಿ ಕೆಲಸಕ್ಕೆ ಬರುತ್ತಿದ್ದವು. ಶಾಸನಗಳಲ್ಲಿ ಈ ಪ್ರದಕ್ಷಿಣಾಪಥವನ್ನು ಸಂಬಗಚ್ಚುರ್ರ ಎಂದು ಕರೆಯಲಾಗಿದೆ. ತಮಿಳುನಲ್ಲಿ ಸಂಬಗವೆಂದರೆ ಸಂಪಂಗಿ ಅಥವಾ ಚಂಪಕ ಪ್ರಾಯಶಃ ಈ ದಾರಿಯಲ್ಲಿ ದೇವರಿಗೆ ನಿತ್ಯ ಪೂಜೆಯಲ್ಲಿ ಸಲ್ಲಿಸುವ ಸುವಾಸನೆಗೆ ಹೆಸರಾದ ಹಲವಾರು ಸಂಪಿಗೆ ಗಿಡಗಳಿದ್ದಿರಬೇಕು.

ಈಗ ಈ ನಾಲ್ಕು ಮಂಟಪಗಳೂ ಅವುಗಳ ನಿರ್ಮಾಣದ ಉದ್ದೇಶಕ್ಕೆ ಬಳಿಕೆಯಾಗುತ್ತಿಲ್ಲ. ಇವುಗಳು ತಮ್ಮ ಶಿಲ್ಪ ಕೌಶಲ್ಯದಿಂದ ಸಾಮಾನ್ಯವೇ ಆದರೂ ವಾಸ್ತುಶಿಲ್ಪದ ಹಾಗೂ ಸುಂದರ ಮುಕ್ತಾಯದ ದೃಷ್ಟಿಯಿಂದ ಗಮನಾರ್ಹ.

ಸಂಪಂಗಿ ಪ್ರದಕ್ಷಿಣೆಯ ಉದ್ದುದ್ದ ಮಂಟಪಗಳನ್ನು ಈಗ ಕಬ್ಬಿಣದ ಸರಳುಗಳಿಂದ ವಿಭಾಗಿಸಿಕೊಂಡು ಉಗ್ರಾಣಗಳನ್ನಾಗಿ ಮಾಡಿಕೊಂಡು ಬೆಲ್ಲ,ಅಕ್ಕಿ ಇತ್ಯಾದಿಗಳನ್ನು ಸಂಗ್ರಹಿಸಲು ಬಳಸಲಾಗುತ್ತದೆ. ಪಟ್ಟಾಡೈಯೂ ಆಗಿದೆ. (ದೇವರ ರೇಷ್ಮೆ ವಸ್ತ್ರಾಗಾರ) ಪಡಿಪೋಟ್ಟು (ದೇವರ ಪ್ರಸಾದಗಳನ್ನು-ಲಾಡು-ಮಾಡುವ ಅಡುಗೆ ಮನೆ) ಯಾಮುನತುರೈ (ದೇವರ ಪೂಜೆಗೆಂದು ಹೂವಿನ ಹಾರಗಳನ್ನು ಮಾಡುವ ಸ್ಥಳ)ಗಳೂ ಇಲ್ಲಿಯೇ ಇವೆ. ಯಾಮುನ ತುರೈ ಎಂಬುದಕ್ಕೆ ಮೂಲ ಆಳವಂದಾರ್ ಎಂದು ಪ್ರಸಿದ್ಧರಾಗಿ, ತಿರುಮಲೆಯಲ್ಲಿ ಪುಷ್ಪ ಕೈಂಕರ್ಯವನ್ನು ಆರಂಭಿಸಿರಬಹುದಾದ ಯಾಮುನಾಚಾರ್ಯರು. ತೆಪ್ಪೋತ್ಸವಕ್ಕೆ ಬೇಕಾಗುವ ವಸ್ತುಗಳನ್ನು ಸಂಗ್ರಹಿಸಿಡುವ ಮತ್ತೊಂದು ಕೋಣೆಯೂ ಇಲ್ಲಿಯೇ ಇದೆ. ಮೊದಲಿಗೆ ಈ ಜಗಲಿಯ ಆವರಣಗಳು ಮಳೆಗಾಲದಲ್ಲಿ ಉತ್ಸವ ಮೂರ್ತಿಗಳ ಮೆರವಣಿಗೆಗೆಂದು,ಯಾತ್ರಿಕರ ರಕ್ಷಣೆಗೆಂದು ಬಳಕೆಯಾಗುತ್ತಿದ್ದು ಈಗ ಉಗ್ರಾಣಗಳಾಗಿ ಬಳಕೆಗೆ ಬಂದಿವೆ.

### ಧ್ವಜಸ್ತಂಭ ಮಂಟಪ

ಈ ಪ್ರಾಕಾರದಲ್ಲಿರುವ ಮತ್ತೊಂದು ಮುಖ್ಯ ಮಂಟಪವೆಂದರೆ ಧ್ವಜಸ್ತಂಭದ ಸುತ್ತ ಇರುವ ಮಂಟಪ. ಈ ಪ್ರಾಕಾರದ ಪಶ್ಚಿಮದಲ್ಲಿ ಎರಡನೆಯ ಗೋಪುರವನ್ನು ತಾಗಿ ನಿಂತ ಈ ಮಂಟಪ ಕಿರಿದಾಗಿದೆ. ಉತ್ತರ ದಕ್ಷಿಣಗಳಲ್ಲಿ ಐದು ಕಂಬಗಳ ಎರಡೆರಡು ಸಾಲುಗಳಿದ್ದು ಒಳಕಂಬಸಾಲಿನ ಕಂಬಗಳು ಒಂದೊಂದು ಕಿರುಗಂಬಗಳನ್ನು ಹೊಂದಿವೆ. ಮಂಟಪದ ನಡುವೆ ಬಲಿಪೀಠ ಹಾಗೂ ಧ್ವಜಸ್ತಂಭಗಳಿವೆ.

ಇಲ್ಲಿನ ಪ್ರತಿ ಕಂಬದಲ್ಲೂ ಆಸಕ್ತಿದಾಯಕ ವಿಗ್ರಹ ಶಿಲ್ಪಗಳಿವೆ. ಯೋಗನರಸಿಂಹ,ಮತ್ಸ್ಯ,ಹನುಮಂತ, ಬಕಾಸುರ ವಧೆಯಲ್ಲಿ ಕೃಷ್ಣ, ಶ್ರೀನಿವಾಸ ಕಲ್ಯಾಣ ಮೊದಲಾದವು ಪ್ರಮುಖ. ಧ್ವಜಸ್ತಂಭದ ಮೇಲೆಯೇ ಕಿರುಗಾತ್ರದ ಕೃಷ್ಣ,ಕಾಳೀಯ ಮರ್ದನ ಮೊದಲಾದ ಉಬ್ಬು ಶಿಲ್ಪಗಳನ್ನು ಕಾಣಬಹುದು. ಟಿ.ಕೆ.ಟಿ.ವೀರರಾಘವಾಚಾರ್ಯರು ಈ ನಿರ್ಮಾಣದ ಬಗ್ಗೆ ಒಂದು ವಿಶಿಷ್ಟ ಲಕ್ಷಣವನ್ನು ಗಮನಿಸಿದ್ದಾರೆ. ಗರುಡ,ಧ್ವಜಸ್ತಂಭ ಬಲಿಪೀಠಗಳು ಮೊದಲ ಆವರಣದಲ್ಲಿರಬೇಕು ಎಂದರೆ ಇಲ್ಲಿ ಎರಡನೆ ಹಾಗೂ ಮೂರನೇ ಆವರಣಗಳ ನಡುವೆಯಿರಬೇಕು. ಆಗಮ ಶಾಸ್ತ್ರದಂತೆ ನಿಯಮವಾಗಿ ಗರುಡ, ಧ್ವಜಸ್ತಂಭ,ಬಲಿಪೀಠಗಳನ್ನು ಮೊದಲ ಆವರಣದಲ್ಲಿಯೇ ಸ್ಥಾಪಿಸಬೇಕು-ಗರುಡನು ವಿಮಾನಕ್ಕೆ ಅತಿಹತ್ತಿರವಾಗಿದ್ದು ನಂತರ ಧ್ವಜಸ್ಥಂಭವಿದ್ದು ನಂತರ ಬಲಿಪೀಠವಿರಬೇಕು.

ಆಲಯದಲ್ಲಿ ಎರಡನೇ ಆವರಣವಿದ್ದಲ್ಲಿ ಗರುಡನು ಆವರಣದ ಎರಡನೇ ಕಕ್ಷೆಯಲ್ಲಿಯೂ ಧ್ವಜಸ್ತಂಭ ಬಲಿ ಪೀಠಗಳು ಮೂರನೇ ಕಕ್ಷೆಗೂ ಹೋಗುತ್ತವೆ. ತಿರುಮಲೆಯ ಆಲಯದಲ್ಲಿ ಎರಡನೇ ಆವರಣವನ್ನು ಕ್ರಿ.ಶ.1190 ರ ಹೊತ್ತಿಗೆ ನಿರ್ಮಿಸಲಾಯಿತು. ಹೀಗಾಗಿ ಕ್ರಿ.ಶ.1417 ರಲ್ಲಿ ತಿರುಮಾಮಣಿ ಮಂಟಪ ನಿರ್ಮಾಣವಾಗುವವರೆಗೆ ಗರುಡ ಧ್ವಜಸ್ತಂಭ ಬಲಿ ಪೀಠಗಳು ಎರಡನೆ ಆವರಣದಲ್ಲಿ ಇದ್ದಿರಬೇಕು. ತಿರುಮಾಮಣಿ ಮಂಟಪ ನಿರ್ಮಾಣದನಂತರ ಸ್ಥಳ ಸಂಕೋಚವಾಗಿ ಧ್ವಜ ಸ್ತಂಭ ಬಲಿ ಪೀಠಗಳನ್ನು ಮೂರನೇ ಆವರಣಕ್ಕೆ ಸ್ಥಳಾಂತರಿಸಿರಬೇಕು. ಈ ವ್ಯವಸ್ಥೆಯನ್ನು ಕಡೆಯ ಅವಕಾಶವೆಂದು ವೈಖಾನಸ ಆಗಮ ಗುರುತಿಸಿದರೂ ಆಗಮ ನಿಯಮದಂತೆ ಇವು ಮೂರನೇ ಆವರಣದಲ್ಲಿಯೇ ಇರಬೇಕು. ಈಗಿರುವಂತೆ ಮೊದಲ ಆವರಣದಲ್ಲಿ ಅಲ್ಲ.

(ಈ ಧ್ವಜಸ್ತಂಭ ಮಂಟಪದ ಕಂಬಗಳೊಂದರಲ್ಲಿ ಗಂಟೆ ಕಟ್ಟಿದಬಾಲ ಇರುವ ಹನುಮಂತರಾಯನ ಉಬ್ಬುಚಿತ್ರ ಇದ್ದು, ಈ ಮಂಟಪವು ವ್ಯಾಸರಾಯ ನಿರ್ಮಾಣವೆಂದು ಪರೋಕ್ಷವಾಗಿ ಸೂಚಿಸುವಂತಿದೆ. ವ್ಯಾಸರಾಯರು ವೆಂಕಟೇಶ್ವರ ಸ್ವಾಮಿಯನ್ನು ಸಾಳುವನರಸಿಂಹನ ಕಾಲದಲ್ಲಿ ಹನ್ನೆರಡು ವರ್ಷ ಪೂಜಿಸಿ ಹಿಂದಿರುಗಿದರು. ಧ್ವಜಸ್ತಂಭ ಮಂಟಪ ನಿರ್ಮಾಣದ ಬಗ್ಗೆಯೂ ಯಾವುದೇ ಶಾಸನವೂ ವಿವರಣೆ ನೀಡುವುದಿಲ್ಲ ಎಂಬುದನ್ನೂ ಗಮನಿಸಬೇಕು - ಅನುವಾದಕ.)

### ಒಳಗೋಪುರ

ಒಳ ಆವರಣ ಅಥವಾ 2ನೇ ಆವರಣವನ್ನು ಎರಡನೇ ಗೋಪುರದಿಂದ ರಕ್ಷಿತವಾದ ದ್ವಾರದಿಂದ ಮಾತ್ರವೇ ಪ್ರವೇಶಿಸಬಹುದು. ಒಳಗೋಪುರವು ತಳದಲ್ಲಿ ಪೂರ್ವಪಶ್ಚಿಮ 24 ಅಡಿಗಳೂ ಉತ್ತರ ದಕ್ಷಿಣ 36 ಅಡಿಗಳಿದ್ದು,ದ್ವಾರದ ಅಗಲ 9 ಅಡಿಗಳಾಗಿವೆ. ಆಕೃತಿಯಲ್ಲಿ ಮಹದ್ವಾರ ಗೋಪುರದಂತೆ ಇದೆ. ಈ ಗೋಪುರದಿಂದಾದ ಆವರಣದ ಗೋಡೆಗಳು ಪೂರ್ವ ಪಶ್ಚಿಮದಲ್ಲಿ 235,ಉತ್ತರದಕ್ಷಿಣದಲ್ಲಿ 160 ಅಡಿಗಳೂ ಉದ್ದವಾಗಿವೆ.

ಈ ಆವರಣದ ಹೊರಗೋಡೆಗಳ ಮೇಲೆ ಅಸಂಖ್ಯ ಶಾಸನಗಳಿವೆ. ಮಿಕ್ಕಂತೆ ದ್ವಾರದ ಮೇಲಿರುವ ಶ್ರೀ ವೈಷ್ಣವ ಚಿಹ್ನೆಯ ಹೊರತು ಯಾವುದೇ ಶಿಲ್ಪಾಕೃತಿಗಳೂ ಇಲ್ಲ. ದ್ವಾರ ಬಂಧದಲ್ಲಿನ ಉಬ್ಬು ಶಿಲ್ಪಗಳು ಸುಂದರವಾಗಿವೆ. ಕ್ರಿ.ಶ.1345-55 ರಲ್ಲಿನ ಶ್ರೀ ರಂಗನಾಥ ಯಾದವರಾಯನ ಆಳ್ವಿಕೆಯ 16 ನೇ ವರ್ಷದಲ್ಲಿನ ಶಾಸನವೇ ಅತಿಪ್ರಾಚೀನವಾದದ್ದು. ಸಾಮಾನ್ಯವಾಗಿ ಪ್ರಾಚೀನಕಾಲದ ಶಾಸನಗಳು ಗೋಪುರಗಳ ತಳಗಟ್ಟಿನ ಗೋಡೆಗಳಲ್ಲಿದ್ದು,ಪ್ರಾಕಾರದ ಒಳಗೋಡೆಗಳಲ್ಲಿ ನಂತರದ ಕಾಲದ ಶಾಸನಗಳಿರುತ್ತವೆ. ಈ ಗೋಡೆಗಳ ಹೊರಮುಖದಲ್ಲಿ 15,16 ನೇ ಶತಕದ ಶಾಸನಗಳಿವೆ.

(ಈ ಒಳ ಗೋಪುರ ದ್ವಾರವನ್ನು ಬೆಳ್ಳಿಯ ಬಾಗಿಲು ಎಂದು ಕರೆಯುವರು. ಇಲ್ಲಿ ಎಡಗಡೆಗೆ ಹಥೀರಾಮಜಿ ಸ್ವಾಮಿಯೊಡನೆ ಪಗಡೆಯಾಡುವ, ಬಲಗಡೆಗೆ ಶ್ರೀ ರಾಮ ಪಟ್ಟಾಭಿಷೇಕದ ಉಬ್ಬು ಚಿತ್ರಗಳಿವೆ - ಅನುವಾದಕ)

- ಮುಂದುವರೆಯುತ್ತದೆ.





## ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಜ್ಯೇಷ್ಠಾಭಿಷೇಕ

**16-07-2024 ರಿಂದ 18-07-2024 ರ ವರೆಗೆ**

| | | |
|---|---|---|
| 16-07-2024 | ಮಂಗಳವಾರ | ಜ್ಯೇಷ್ಠಾಭಿಷೇಕ ಪ್ರಾರಂಭ |
| 17-07-2024 | ಬುಧವಾರ | ಕವಚಪ್ರತಿಷ್ಠೆ |
| 18-07-2024 | ಗುರುವಾರ | ಕವಚ ಸಮರ್ಪಣೆ |

# ಶ್ರೀ ಕಲ್ಯಾಣವೇಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವೋತ್ಸವ

- ತೆಲುಗು ಮೂಲ : ಜೆ. ಬಾಲಸುಬ್ರಹ್ಮಣ್ಯಂ
ಅನುವಾದ : ಬಿ. ಪದ್ಮಜ

ಶ್ರೀನಿವಾಸನು ತಿರುಮಲೆಯ ಬೆಟ್ಟದ ಮೇಲೆ ಅಲ್ಲದೇ, ಬೆಟ್ಟದ ಕೆಳಗೂ ನೆಲೆಸಿದ್ದಾನೆಂದು ನೂರಾರು ವರ್ಷಗಳಿಂದ ಕೇಳಿ ಬರುತ್ತಿರುವ ಮಾತು !

ತಿರುಪತಿಯ ಪಟ್ಟಣಕ್ಕೆ ಪಶ್ಚಿಮದಲ್ಲಿ ಹತ್ತು ಮೈಲಿಗಳ ದೂರದಲ್ಲಿ ಒಂದು ಹಳ್ಳಿ, ಆ ಊರಿನ ಹೊರಗೆ ಶಿಥಿಲವಾಗಿ ಹೋಗಿದ್ದ ಒಂದು ದೇವಾಲಯ ಮೊಂಡು ಗೋಪುರಗಳು,ಅಲ್ಲಲ್ಲಿ ಬಿದ್ದು ಹೋಗಿದ್ದ ಗೋಡೆಗಳನ್ನು ಒಳಗೊಂಡಿತ್ತು ಆ ಗುಡಿಯ ಸುತ್ತಲೂ ಕಟ್ಟಿದ್ದ ಗೋಡೆಯ ಕಲ್ಲುಗಳು, ಮುರಿದು ಬೀಳುತ್ತಿದ್ದರೂ, ಗೋಪುರದ ಶಿಖರ, ಬಲಿಪೀಠ, ಧ್ವಜಸ್ತಂಭ, ಎಲ್ಲವೂ ಮಳೆಗೆ ನೆನೆಯುತ್ತಾ ಬಿಸಿಲಿಗೆ ಒಣಗುತ್ತಾ, ಶಿಥಿಲವಾಗಿ, ನಿರ್ಜೀವವಾಗಿ ಕಂಡು ಬರುತ್ತಾ ಮನಸ್ಸನ್ನು ಕಲುಕುತ್ತಿತ್ತು ಆದರೂ ಆ ಆಲಯದ ಪ್ರಾಕಾರದ ಮಧ್ಯಭಾಗದಲ್ಲಿ ಶಿಲಾವೇದಿಕೆಯ ಮೇಲೆ ನಿರ್ಮಾಣ ಮಾಡಿರುವ ಮುಖ್ಯವಾದ ಗುಡಿ, ಗೋಡೆಗಳು ಅದರ ಮೇಲಿದ್ದ ಶಿಲ್ಪಗಳು ಬಿರುಕು ಬಿಟ್ಟಿದ್ದರೂ, ಸ್ವಲ್ಪ ಹೆಚ್ಚೂ ತಗ್ಗಾಗಿ ಕಾಣುತ್ತಿದ್ದರೂ, ಅದ್ಭುತವಾದ ಕಾಂತಿಯನ್ನು ಹೊರಸೂಸುತ್ತಿತ್ತು. ಬಾಗಿಲೇ ಇಲ್ಲದ ಆ ಗುಡಿಯ ಮಂಟಪದೊಳಗೆ ಹೋಗಬೇಕೆಂದೂ ಒಳಗೆ ಗರ್ಭಗುಡಿಯಲ್ಲಿ ಏನಿದೆಯೋ ಎಂಬ ಕುತೂಹಲ, ಆಸಕ್ತಿ ಎಲ್ಲರಲ್ಲೂ ಮನೆ ಮಾಡಿದ್ದರೂ, ಒಳಗೆ ಹೋಗುವ ಧೈರ್ಯ ಯಾರಿಗೂ ಇರಲಿಲ್ಲ. ಆಶ್ಚರ್ಯ! ಪರಮಾಶ್ಚರ್ಯ!! 1900 ಇಸವಿಯಲ್ಲಿ ಒಬ್ಬ ಅಮಾಯಕಳಾದ ಮಹಿಳೆ, ಆಕಾಶದಿಂದ ಉದುರಿ ಬಿದ್ದವಳಂತೆ ಆ ಗುಡಿಯ ಪ್ರಾಂಗಣದಲ್ಲಿ ಪ್ರತ್ಯಕ್ಷವಾದಳು. ಅಕೆ ಎಲ್ಲಿಂದ ಬಂದಳೋ ತಿಳಿಯಲಿಲ್ಲ. ಯಾವ ಊರಿನಿಂದ ಬಂದಳೋ ಗೊತ್ತಿಲ್ಲ. ಅವಳ ಹೆಸರು ಮೊದಲೇ ತಿಳಿದಿರಲಿಲ್ಲ. ಸದಾ ಮಾಸದ ನಗುವಿನೊಂದಿಗೆ ಐವತ್ತು ವರ್ಷ ತುಂಬಿದ ಯೋಗಿನಿ ಯಂತಹಾ ಸ್ತ್ರೀ ಅವಳು! ಹೆಸರೇ ಹೇಳದ ಆ ತಾಯಿಗೆ "ತಾಯಾರಮ್ಮಾ" ಎಂದು ಊರಿನವರೇ ಹೆಸರಿಟ್ಟು ಕರೆಯುತ್ತಿದ್ದರು. ಆ ದಿನದಿಂದ ಆಕೆ ಗುಡಿಯ ಆವರಣದಲ್ಲಿನ ಎಲೆಗಳು, ಕಸವನ್ನು ಗುಡಿಸಿ, ಶುಭ್ರಗೊಳಿಸುತ್ತಿದ್ದಳು. ಊರಿನಲ್ಲೆಲ್ಲಾ ತಿರುಗಾಡಿ ಮನೆಮನೆಗೂ ಹೋಗಿ ಭಿಕ್ಷೆಯನ್ನು ಬೇಡುತ್ತಿದ್ದಳು. ಗುಡಿಯೊಳಗೆ ಶ್ರೀನಿವಾಸನಿದ್ದಾನೆ, ನನ್ನನ್ನು ಪೂಜೆ ಮಾಡು ಎನ್ನುತ್ತಿದ್ದಾನೆ, ಏನಾದರೂ ಕೊಡಿ ಎಂದು ನಗುತ್ತಾ ಕೇಳುತ್ತಿದ್ದಳು. ಯಾರಾದರೂ ಹಣವನ್ನು ನೀಡಿದರೆ ಬೇಡವೆನ್ನುತ್ತಿದ್ದಳು. ಸ್ವಲ್ಪ ಎಣ್ಣೆ, ಸ್ವಲ್ಪ ಅಕ್ಕಿ, ಬೇಳೆ, ಉಪ್ಪು ನೀಡಿ ಎಂದು ಕೇಳಿ ಕೊಳ್ಳುತ್ತಿದ್ದಳು. ಅವರೇನೇ ಕೊಟ್ಟರೂ ಸಂತೋಷದಿಂದ ತೆಗೆದುಕೊಂಡು ಹೋಗಿ, ಆ ಗುಡಿಯ ಅಂಗಳದಲ್ಲಿ ಒಂದು ಕಡೆ ಮೂರು ಕಲ್ಲುಗಳನ್ನು ಜೋಡಿಸಿ, ಒಲೆಯನ್ನಾಗಿ ಮಾಡಿಕೊಂಡು, ಅದರ ಮೇಲೆ ಮಡಕೆಯನ್ನು ಇರಿಸಿ ಅದರಲ್ಲಿ ಮೇಲೆ ತಿಳಿಸಿದ ಪದಾರ್ಥಗಳನ್ನು ಬೇಯಿಸುತ್ತಿದ್ದಳು.



ಆಕೆ ಒಬ್ಬಳೇ ಒಂಟಿಯಾಗಿ ಗುಡಿಯಲ್ಲಿ ಅಡ್ಡಾದಿಡ್ಡಿಯಾಗಿ ಬೆಳೆದಿದ್ದ ಗಿಡಗಳನ್ನು ತೆಗೆದು ಹಾಕಿ, ಕಸವನ್ನು ಗುಡಿಸಿ,ಕಗ್ಗತ್ತಲೆಯಿಂದ ಕೂಡಿದ್ದ ಗರ್ಭಾಲಯದೊಳಗೆ ಹೋಗಿ, ಸಣ್ಣ ಬೆಳಕಿನಲ್ಲಿ ಒಳಗೆ ಪರೀಕ್ಷಿಸಿ ನೋಡಿದಳು. ಒಳಗೆ ಗರ್ಭಗುಡಿಯಲ್ಲಿ ಎತ್ತರವಾಗಿ ನಿಂತಿದ್ದ ಶ್ರೀ ವೇಂಕಟೇಶ್ವರನ ವಿಗ್ರಹ! ಕಣ್ಣಿವೆಯಿಕ್ಕದೇ ನೋಡಿದಳು. ಆನಂದ ಪರ ವಶತೆಯಿಂದ ಎರಡು ಕೈಗಳನ್ನು ಎತ್ತಿ ನಮಸ್ಕರಿಸಿ ಸಂಭ್ರಮಗೊಂಡಳು. "ಶ್ರೀನಿವಾಸಾ! ಗೋವಿಂದಾ!" ಎನ್ನುತ್ತಾ ಆ ಎತ್ತರದ ಸ್ವಾಮಿಯ ವಿಗ್ರಹವನ್ನು ಕೈಗೆಟುಕುವಷ್ಟು ಎತ್ತರದಿಂದ ಅಭಿಷೇಕ ಮಾಡಿದಳು. ಎಣ್ಣೆಯ ದೀಪವನ್ನು ಹಚ್ಚಿ ತಾನು ಬೇಯಿಸಿದ ಪದಾರ್ಥವನ್ನು ನೈವೇದ್ಯಮಾಡಿದಳು. ಅದರಲ್ಲಿ ಸ್ವಲ್ಪ ಭಾಗವನ್ನು ಅಲ್ಲಿದ್ದ ಪಶುಗಳನ್ನು ಕಾಯುವವರಿಗೆ ಪ್ರಸಾದವನ್ನಾಗಿ ನೀಡಿ, ತಾನೂ ಸೇವಿಸುತ್ತಿದ್ದಳು.

ಅಂದಿನಿಂದ ತಾಯಾರಮ್ಮನ ದಿನಚರಿ ಅದೇ ಆಗಿತ್ತು. ಸುಮಾರು 40 ವರ್ಷಗಳ ಕಾಲ ಆ ಗುಡಿಯೊಂದಿಗೆ, ಆ ಊರಿನೊಂದಿಗೆ ಅವಳಿಗೆ ಬಿಡಿಸಲಾಗದ ಬಂಧವೇರ್ಪಟ್ಟಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಮನೆಮನೆಗೂ ಹೋಗಿ "ನಾಳೆಯಿಂದ ನಾನು ಬರುವುದಿಲ್ಲ. ಬೇರೆ ಒಬ್ಬ ಪೂಜಾರಿ ಬರುತ್ತಾನಂತೆ! ಆತ ಶ್ರೀನಿವಾಸನನ್ನು ಮಂತ್ರಗಳಿಂದ ಪೂಜಿಸುತ್ತಾರಂತೆ! ಅಂದಿನಿಂದ ಆ ಗುಡಿ ವೈಭವದಿಂದ ಬೆಳಗುತ್ತಿದೆಯಂತೆ! ಇವೆಲ್ಲವನ್ನೂ ಆ ವೇಂಕಟೇಶ್ವರನೇ ನನಗೆ ಹೇಳಿ, ನನ್ನನ್ನು ತುಂಬುರು ತೀರ್ಥಕ್ಕೆ ಹೋಗಿ ತಪಸ್ಸು ಮಾಡು" ಎಂದು

ಹೇಳಿದ್ದಾನೆ. ಅದಕ್ಕೇ ನಾನು ನಾಳೆಯಿಂದ ಬರುವುದಿಲ್ಲ ಎನ್ನುತ್ತಾ ಎದುರಿಗೆ ಬಂದವರಿಗೆಲ್ಲಾ ಹೇಳಿದಳು. ವಿಚಿತ್ರವೆನ್ನುವಂತೆ ಮರುದಿನವೇ ಕಂಚಿಯಿಂದ ಒಬ್ಬ ಪುರೋಹಿತ ಬಂದು, "ನಾನು ಕಂಚಿಯಲ್ಲಿ ವಾಸಮಾಡುತ್ತಿದ್ದೆ. ನನ್ನ ಹೆಸರು ಸುಂದರರಾಜಸ್ವಾಮಿ ನಮ್ಮ ತಂದೆಯ ಹೆಸರು ರಾಘುವೇಂದ್ರಾಚಾರ್ಯ ಪ್ರತೀದಿನವೂ ಹಗಲೂ-ರಾತ್ರಿ ಎನ್ನದೇ ಕನಸಿನಲ್ಲಿ ಶ್ರೀನಿವಾಸನು ಕಾಣಿಸಿಕೊಂಡು, ಬಾ ನನ್ನನ್ನು ಪೂಜಿಸು ಕತ್ತಲೆಯಲ್ಲಿದ್ದೇನೆ. ಹುತ್ತಗಳು, ಮರಗಳ ನಡುವೆ ಇದ್ದೇನೆ ಕೂಡಲೇ ಬಂದು ನನಗೆ ಪೂಜೆ ಮಾಡು" ಎಂದು ಆದೇಶಿಸಿ ದ್ದಾನೆ. "ಸ್ವಾಮಿ! ಯಾವ ಊರಿನಲ್ಲಿದ್ದೀ ಹೇಳು, ಎಂದರೆ ಮಾತನಾಡುವುದಿಲ್ಲ. ಆದ್ದರಿಂದಲೇ ನಾನು ತಿರುಪತಿಯ ಯಾತ್ರೆಗೆ ಹೊರಟು, ಕಣ್ಣಿಗೆ ಕಾಣಿಸಿದ ಊರು, ಕೇರಿ, ಕೋಟೆಗಳನ್ನು ಹುಡು ಕುತ್ತಾ ಎಲ್ಲಾದರೂ ಪಾಳು ಬಿದ್ದಿರುವ ಶ್ರೀ ವೇಂಕಟೇಶ್ವರನ ದೇವಾಲಯ ಕಂಡು ಬರುತ್ತದೇನೋ" ಎಂದು ಹುಡುಕುತ್ತಾ ಬರುತ್ತಿದ್ದೇನೆ.



ಇವತ್ತು ಕನಸಿನಲ್ಲಿ "ಇದೇ ನಾನಿರುವ ಊರು, ಇದೇ ಈ ಗುಡಿಯಲ್ಲೇ ನೂರಾರು ವರ್ಷ ಗಳಿಂದ ಇದ್ದೇನೆ. ನನ್ನನ್ನು ಶುಭ್ರಗೊಳಿಸಿ,ಶಾಸ್ತ್ರೋಕ್ತವಾಗಿ ಪೂಜಿಸು" ಎಂದು ಗೋವಿಂದನು ಅಜ್ಞಾಪಿಸಿದ್ದಾನೆ ಎಂದು ಅರ್ಚಕರಾದ ಸುಂದರರಾಜಸ್ವಾಮಿ, ಆ ಗ್ರಾಮದ ಪ್ರಜೆಗಳಿಗೆ ತಿಳಿಸಿದ.ಆ ಹಳ್ಳಿಯಲ್ಲಿನ ಜನರು, ತಾಯಾರಮ್ಮನ ಮಾತುಗಳನ್ನು ನೆನೆಪಿಸಿಕೊಂಡು, ಸಂತೋಷಿಸಿ ದರು.ಕೂಡಲೇ ಎಲ್ಲರೂ ಗುಂಪು ಗುಂಪಾಗಿ ಬಂದು ಗುಡಿಯ ಆವರಣದಲ್ಲಿದ್ದ ಗಿಡಗಳನ್ನು ಹುತ್ತಗಳನ್ನು ತೆಗೆದು ಶುಭ್ರಗೊಳಿಸಿದರು.



ಆ ಸಂಭ್ರಮಾಚರಣೆ 1940 ನೆಯ ಇಸವಿಯಲ್ಲಿ ನಡೆಯಿತು. ವಿಕ್ರಮ ನಾಮಸಂವತ್ಸರ, ಆಷಾಢಮಾಸದ ಶುದ್ಧ ಸಪ್ತಮಿ, ಗುರುವಾರ, ಉತ್ತರಾಫಲ್ಗುಣಿ ನಕ್ಷತ್ರವಿದ್ದ ದಿನವಾಗಿತ್ತು. ಅರ್ಚಕರಾದ ಶ್ರೀಸುಂದರರಾಜಸ್ವಾಮಿಗೆ ದೇವರು ಕನಸಿನಲ್ಲಿ ಕಂಡು ಬಂದು ಹೇಳಿದಂತೆ, ಅಂದು, "ಶ್ರೀ ಕಲ್ಯಾಣ ವೇಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವೋತ್ಸವ" ಎಂಬ ಹೆಸರಿನಿಂದ ಉತ್ಸವವನ್ನು ಆಚರಿಸುತ್ತಿದ್ದಾರೆ. ಪುನಃ ನೂರಾರು ವರ್ಷಗಳ ನಂತರ ಶಾಸ್ತ್ರೋಕ್ತವಾಗಿ ಅರ್ಚಕರಾದ ಶ್ರೀಸುಂದರರಾಜ ಸ್ವಾಮಿಯವರ ಕೈಯಲ್ಲಿ ಶ್ರೀನಿವಾಸ ಮಂಗಾಪುರದಲ್ಲಿ ಶ್ರೀಕಲ್ಯಾಣ ವೇಂಕಟೇಶ್ವರ ಸ್ವಾಮಿಗೆ ಮೊದಲ ಪೂಜೆ ನಡೆದ ದಿನದಂದು, ದೇವಸ್ಥಾನದಲ್ಲಿ ಲಘು ಸಂಪ್ರೋಕ್ಷಣೆಯನ್ನು ಮಾಡಿದರು. ನಂತರ ಶ್ರೀನಿವಾಸನ ಗರ್ಭಗುಡಿಯ ಮುಂದೆ ಸುಪ್ರಭಾತವನ್ನು ಪಠಿಸುತ್ತಾ ನೂರಾರು ವರ್ಷಗಳ ಕಾಲ ಯೋಗ ಸಮಾಧಿಯಲ್ಲಿರುವ ಶ್ರೀನಿವಾಸನನ್ನು ಎಬ್ಬಿಸಿದರು. ನಂತರ ಪುರುಷಸೂಕ್ತ, ಶ್ರೀಸೂಕ್ತ, ಭೂನೀಲಾ ಸೂಕ್ತಗಳನ್ನು ಪಠಿಸುತ್ತಾ ಶ್ರೀ ಕಲ್ಯಾಣವೇಂಕಟೇಶ್ವರಸ್ವಾಮಿಯ ಮೂಲ ವಿಗ್ರಹಕ್ಕೆ ಅಭಿಷೇಕವನ್ನು ನಿರ್ವಹಿಸಿದರು. ನಂತರ ಸಣ್ಣಗಿನ ಬಂಗಾರದ ಜರಿಯನ್ನು ಹೊಂದಿದ್ದ ಬಿಳಿಯ ಪಂಚೆ, ಮೇಲು ಹೊದ್ದಿಕೆ ಯಿಂದ ಅಲಂಕರಿಸಿದರು. ಹಣೆಗೆ ಬಿಳಿಯ ಪಚ್ಚಕರ್ಪೂರದ ನಾಮವನ್ನು ತಿದ್ದಿದರು. ಹಲವಾರು ರೀತಿಯ ಹೂಮಾಲೆಗಳೊಂದಿಗೆ ಶ್ರೀನಿವಾಸನ ಎತ್ತರದ ಮೂರ್ತಿಯನ್ನು ಅಂದವಾಗಿ, ಸುಂದರವಾಗಿ ಅಲಂಕರಿಸಿದರು. ನಂತರ ಸಹಸ್ರನಾಮಾರ್ಚನೆ. ಧೂಪದೀಪನೈವೇದ್ಯ, ಕರ್ಪೂರದ ಆರತಿಯನ್ನು ವೈಭವದಿಂದ ಸಮರ್ಪಿಸಿದರು.



1940 ಜುಲೈ 11 ನೆಯ ತಾರೀಖಿನಿಂದ ಪ್ರಪ್ರಥಮವಾಗಿ ವಿಕ್ರಮನಾಮ ಸಂವತ್ಸರ, ಆಷಾಢ ಶುದ್ಧ ಸಪ್ತಮೀ ಗುರುವಾರ ಉತ್ತರ ಫಲ್ಗುಣಿ ನಕ್ಷತ್ರದಂದು ನಡೆದ ಶ್ರೀನಿವಾಸ ಮಂಗಾ ಪುರದಲ್ಲಿನ ಶ್ರೀ ಕಲ್ಯಾಣ ವೇಂಕಟೇಶ್ವರಸ್ವಾಮಿಯವರ ಸಾಕ್ಷಾತ್ಕಾರ ವೈಭವೋತ್ಸವದ ಸಂಭ್ರಮದಲ್ಲಿ ಆ ಗ್ರಾಮದ ಪ್ರಜೆಗಳೇ ಅಲ್ಲದೇ,ತಿರುಪತಿ, ಪೆರುಮಾಳ್ಳಪಲ್ಲೆ, ಪೇರೂರು, ತೊಂಡವಾಡ, ಚಂದ್ರಗಿರಿ, ನರಸಿಂಗಾಪುರ, ಮಿಟ್ಟಪಾಳೆಂ ಮೊದಲಾದ ಸುತ್ತಮುತ್ತಲಿನ ಗ್ರಾಮಗಳ ಪ್ರಜೆಗಳು, ಶ್ರದ್ಧಾ ಭಕ್ತಿಗಳಿಂದ ಭಾಗವಹಿಸಿದರು. ಎಲ್ಲರ ಮನೆಯಲ್ಲೂ ಹಬ್ಬವನ್ನು ಆಚರಿಸಿದರು. ಅಂದಿನಿಂದ ಈ ಆಲಯ ದಿನೇ ದಿನೇ ಅಭಿವೃದ್ಧಿಗೊಂಡು ಈ ದೇವಸ್ಥಾನದಲ್ಲಿ ಜುಲೈನಲ್ಲಿ ಮೂರುದಿನಗಳ ಕಾಲ ಶ್ರೀಕಲ್ಯಾಣ ವೇಂಕಟೇಶ್ವರನ ಸಾಕ್ಷಾತ್ಕಾರ ವೈಭವೋತ್ಸವಗಳು ನಡೆಯುತ್ತಿವೆ. ಅಂದಿನಿಂದ ನಿತ್ಯೋತ್ಸವ, ವಾರೋತ್ಸವ, ಮಾಸೋತ್ಸವ , ಸಂವತ್ಸರೋತ್ಸವಗಳಿಂದ ರಾರಾಜಿಸುತ್ತದೆ. ವಿವಾಹ ಆಗಬೇಕೆನ್ನುವವರು, ಇಲ್ಲಿ ನಡೆಯುವ ನಿತ್ಯ ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡು ಶ್ರೀನಿವಾಸನ ಕಲ್ಯಾಣ ಕಂಕಣವನ್ನು ಧರಿಸಿದರೆ ಶೀಘ್ರವಾಗಿ ವಿವಾಹವಾಗುತ್ತದೆಂಬ ಪ್ರತೀತಿ ಇದೆ. ಆಕಾಶರಾಜನ ಮಗಳಾದ ಪದ್ಮಾವತಿಯನ್ನು ವಿವಾಹವಾದ ಶ್ರೀನಿವಾಸನು ಈ ಪ್ರದೇಶದಲ್ಲಿರುವ ಅಗಸ್ತ್ಯ ಮಹರ್ಷಿಯನ್ನು ದರ್ಶಿಸಿದ್ದನಂತೆ! ಆ ಕಲ್ಯಾಣ ದಂಪತಿಗಳು, ಅಗಸ್ತ್ಯನ ಕೋರಿಕೆಯ ಮೇರೆಗೆ ಆರು ತಿಂಗಳುಗಳ ಕಾಲ ಇಲ್ಲೇ ಇದ್ದಿದ್ದರಿಂದ ಶ್ರೀನಿವಾಸನು ಇಲ್ಲಿ "ಶ್ರೀಕಲ್ಯಾಣ ವೇಂಕಟೇಶ್ವರ" ನೆಂಬ ಹೆಸರಿನಿಂದ ಪ್ರಸಿದ್ಧಿಯಾಗಿದ್ದಾನೆ.

ಗೋವಿಂದಾ। ಗೋವಿಂದಾ॥ ಗೋವಿಂದಾ ।।।





ತಿರುಮಲೆ ತಿರುಪತಿ ದೇವಸ್ಥಾನಗಳು

# ನೂತನ ಕಾರ್ಯನಿರ್ವಹಣಾಧಿಕಾರಿಯವರಿಗೆ ಸ್ವಾಗತ - ಸುಸ್ವಾಗತ





**16-06-2024** ರಂದು ತಿರುಮಲೆ ತಿರುಪತಿ ದೇವಸ್ಥಾನಗಳ ನೂತನ ಕಾರ್ಯನಿರ್ವಹಣಾಧಿಕಾರಿಯಾಗಿ ಶ್ರೀ ಜೆ.ಶ್ಯಾಮಲರಾವ್ ಐ.ಎ.ಎಸ್., ಅವರು ಸ್ವಾಮಿಯವರ ದರ್ಶನ ಪಡೆದು ನಂತರ ಪ್ರಮಾಣ ಸ್ವೀಕಾರ ಮಾಡಿದರು, ಇವರಿಗೆ ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ಮತ್ತು ಚಿತ್ರ ಪಟವನ್ನು ನೀಡಿದರು.

ನಂತರ ಇವರು ಕ್ಯೂಲೈನ್ ನಲ್ಲಿ ತನಿಖೆ ಮಾಡಿ ಭಕ್ತರೊಂದಿಗೆ ಮಾತನಾಡಿದರು. ಶ್ರೀ ತರಿಗೊಂಡ ವೆಂಗಮಾಂಬ ಅನ್ನಪ್ರಸಾದ ಭವನದಲ್ಲಿ ತನಿಖೆ ಮಾಡಿ ನಂತರ ಅನ್ನ ಪ್ರಸಾದವನ್ನು ಸ್ವೀಕರಿಸಿದರು.




ಇವರು ಆಂಧ್ರಪ್ರದೇಶದ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿದ್ದರು, ಇವರನ್ನು ತಿ.ತಿ.ದೇ., ಕಾರ್ಯ ನಿರ್ವಹಣಾಧಿಕಾರಿಯಾಗಿ ಆಂಧ್ರಪ್ರದೇಶದ ಸರ್ಕಾರದ ವತಿಯಿಂದ ನೇಮಕಾತಿ ಮಾಡಲಾಗಿದೆ.

ಇವರು ಸಪ್ತಗಿರಿ ಮಾಸ ಪತ್ರಿಕೆಗೆ ಗೌರವ ಸಂಪಾದಕರಾಗಿ ವ್ಯವಹರಿಸುತ್ತಾರೆ. ಇವರಿಗೆ ಸಪ್ತಗಿರಿ ಮಾಸ ಪತ್ರಿಕೆಯು ಹಾರ್ದಿಕ ಶುಭಾಷಯಗಳನ್ನು ತಿಳಿಸುತ್ತಿದೆ.





# ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ

## ವರ್ಣಪ್ರಕ್ರಿಯಾ ಸಂಧಿ

**ಪ್ರಿಯಾ ಪ್ರಾಣೇಶ ಹರಿದಾಸ**
**80504 36752**



"ವರ್ಣಪ್ರಕ್ರಿಯೆ ಸಂಧಿಯಲ್ಲಿ ಸ್ವರಗಳ ಮತ್ತು ಅಭಿಮಾನಿ ದೇವತೆಗಳ ಕಾರ್ಯದ ಬಗ್ಗೆ ಹೇಳಿದ್ದಾರೆ. ಇದಕ್ಕೆ ಇನ್ನೊಂದು ಹೆಸರು ಉದಾತ್ತನುದಾತ ಸಂಧಿ , ಜೀವ ಪ್ರಕರಣ ಸಂಧಿ ಎನ್ನುವರು ಅಕ್ಷರಗಳು ಇಲ್ಲದೇ ಯಾವ ವೇದ ಶಾಸ್ತ್ರಗಳು ಇಲ್ಲ. ಸರ್ವಶಬ್ದಗಳಿಗೂ ಪ್ರತಿಪಾದ್ಯ ನಾದ ಹಾಗೂ ಅಜಾದಿ ರೂಪಗಳಾದ ಶ್ರೀ ಹರಿಯನ್ನೇ ವರ್ಣಿಸುತ್ತದೆ.

ಹರಿಯು ಪಂಚಾಶದ್ವರಣ ಸು ಸ್ವರ ಉದಾತ್ತಾನುದಾತ್ತ
ಪ್ರಚಯ ಸ್ವರಿತ ಸಂಧಿವಿಸರ್ಗ ಬಿಂದೂಗಳೊಳಗೆ ತದ್ವಾಚ್ಯ
ಇರುವ ತತ್ತನ್ನಾಮರೂಪಗ ಳರಿತುಪಾಸನೆಗೈವರಿಳೆಯೊಳು
ಸುರರೆ ಸರಿ ನರರಲ್ಲ ಅವರಾಡುವುದೆ ವೇದಾರ್॥1॥

ಇಲ್ಲಿ ಐವತ್ತು ಅಕ್ಷರಗಳಲ್ಲಿ (ಅ ದಿಂದ ಅಃ ಸ್ವರ ಕ ದಿಂದ ಳ ವ್ಯಂಜನ) ಉದಾತ್ತ (ದೀರ್ಘಸ್ವರ), ಅನುದಾತ್ತ(ಹ್ರಸ್ವ ಸ್ವರ ) ಪ್ರಚಯ (ವಿಸ್ತಾರ ಸ್ವರ) ಸ್ವರಿತ (ಕಂಪನ) ಸಂಧಿ ವಿಸರ್ಗ ಬಿಂದು ಹೆಸರಿನಿಂದ ಇದ್ದು ಅಜಾದಿ ರೂಪ ಚಿಂತನೆ ಮಾಡಬೇಕು. ಭಗವಂತನ ಮೂರು ರೂಪಗಳಿಗೆ, ಭೂಮಿ, ನೀರು ಅಗ್ನಿ, ಈ ಮೂರಲ್ಲಿದ್ದು ಅಧ್ಯಕ್ಷನಾಗಿ ಬಾಲ್ಯ, ಕೌಮಾರ, ಯೌವ್ವನ ಈ ಮೂರು ಅವಸ್ಥೆ ಹೊಂದಿರುವ ದೇವತೆಗಳಲ್ಲಿದ್ದು ತ್ರಿದಶನಾಗಿದ್ದಾನೆ.

ಇನ್ನು ಮೂರು ಜೀವರಾದ ಸಾತ್ವಿಕ, ರಾಜಸ, ತಾಮಸರಲ್ಲಿ ತ್ರಿವಿಧ ಕರ್ಮಗಳಾದ

1.ದೈಹಿಕ (ಸ್ನಾನ, ಭೋಜನ , ಶಯನಾದಿಗಳು)

2.ದೈಶಿಕ (ತೀರ್ಥಯಾತ್ರಾ, ಕ್ಷೇತ್ರಶ್ರಾದ್ಧಾದಿ)

3.ಕಾಲಿಕ (ಸಂಧ್ಯಾವಂದನೆ, ವ್ರತೋಪವಾಸಾದಿಗಳು) ಕ್ರಮವಾಗಿ ಕೃಷ್ಣ, ಪರಶುರಾಮ,ಹಯಗ್ರೀವ ರೂಪಗಳಿಂದ ಪ್ರೇರ್ಯ ಪ್ರೇರಕನ್ನಾಗಿ ಕಾರ್ಯ ಮಾಡುತ್ತಾನೆ. ಸಕಲರ ಜೀವ ಸ್ವರೂಪವು ಕುದುರೆಯ ಒಂದು ಬಾಲದ ಕೊನೆಯನ್ನು ಅದರಲ್ಲಿ ನೂರು ಭಾಗ ಕತ್ತರಿಸಿದಾಗ ದೊರೆಯುವ ಸೂಕ್ಷ್ಮಕಣದಷ್ಟು ಬಹಳ ಸೂಕ್ಷ್ಮವಾಗಿ ಬ್ರಹ್ಮರಿಂದ ತೃಣ ಜೀವರತನ ಸಮನಾಗಿ ಇರುತ್ತದೆ.

ನಮ್ಮ ಹೃದಯ ಮಂಟಪದಲ್ಲಿ ಕಮಲಾರೂಢನಾದ ಭಗವಂತ ಅಷ್ಟ ದಿಕ್ಕುಗಳಲ್ಲಿ ನಿತ್ಯ ಚಲಿಸಿ ಆ ದಿಕ್ಕಿನ ಅನುಗುಣವಾಗಿ ನಮ್ಮಿಂದ ಕಾರ್ಯಗಳನ್ನು ಮಾಡಿಸುತ್ತಾನೆ.

ಜೀವನಿಗೆ ನಾಲ್ಕು ದೇಹಗಳಿರುತ್ತವೆ ಸೂಕ್ಷ್ಮ ದೇಹ, ಲಿಂಗದೇಹ, ಅನಿರುದ್ಧ ದೇಹ, ಸ್ಥೂಲದೇಹ ಇದೆ. ನಮ್ಮ ಹೊರಗಿನ ಸ್ಥೂಲ ದೇಹ ಮಾತ್ರ ಕಾಣುತ್ತದೆ. ಉಳಿದ ಮೂರು ದೇಹಗಳು ಕಾಣುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ತೆಂಗಿನಕಾಯಿ, ಗಿಡದಲ್ಲಿದ್ದಾಗ ಕಾಣುವ ಮೇಲಿನ ಹಸಿರು ಬಣ್ಣದ ತೋಗಟೆ ನಮ್ಮ ಮೇಲಿನ ಕಾಣುವ ಸ್ಥೂಲ ದೇಹವಿದ್ದಂತೆ ಮುಂದೆ ಆ ಹಸಿರು ತೋಗಟೆ ತೆಗೆದರೆ ಚಾಕಲೇಟ್ ಬಣ್ಣದ ಜುಬ್ರ ಇರುವ ತೆಂಗಿನ ಕಾಯಿ ಅದು ನಮ್ಮ ಅನಿರುದ್ಧ ದೇಹ ಇದು ಕಾಣುವುದಿಲ್ಲ. ಮುಂದೆ ಜುಬ್ರ ಸುಲಿದಾಗ ಒಡೆಯಲು ಯೋಗ್ಯ ಇರುವ ಕಾಯಿಯೇ ಇದು ನಮ್ಮ ಲಿಂಗ ದೇಹ ಅದಕ್ಕೆ ಹೊಂದಿ ಇರುವ ಒಳಗಿನ ಬಿಳಿ ಕೊಬ್ಬರಿಯೇ ಸೂಕ್ಷ್ಮದೇಹ. ಈ ಪ್ರಕಾರವಾಗಿ ಸ್ವರೂಪ ದೇಹದಲ್ಲಿ ಹೆಬ್ಬೆರಳಿನ ಅಂಗುಷ್ಠಾಗ್ರ ಪರಿಮಾಣದ

ಮೂಲೇಶ ಮೂರ್ತಿಯಾಗಿ ಅದರಲ್ಲಿ ಅಂಗುಷ್ಟ ಪರಿಮಾಣದ ಬಿಂಬ ಅಗ್ರೇಶನಾಗಿ ಮತ್ತು ಪ್ರಾದೇಶನಾಗಿ ಸ್ವರೂಪ ದೇಹ ವ್ಯಾಪಿಸಿರುತ್ತಾನೆ.

ಎಲ್ಲರ ದೇಹದಲ್ಲೂ ಭಗವಂತ ಪುರುಷ ರೂಪನಾಗಿದ್ದಾನೆ. ಸ್ವರೂಪ ದೇಹದಲ್ಲಿ ಲಕ್ಷ್ಮೀನರಸಿಂಹ ದೇವರು ಇದ್ದು ವಾಯು ದೇವರು ಸೇವೆ ಮಾಡುತ್ತಿರುತ್ತಾರೆ. ಹಾಗೇ ಬ್ರಹ್ಮ,ಸರಸ್ವತಿ,ಭಾರತಿ,ವಾಯು ದೇವರು ಲಿಂಗ ದೇಹದಲ್ಲಿದ್ದು ಸೇವೆ ಮಾಡುತ್ತಾರೆ.

ಸ್ವರೂಪ ದೇಹ ಮತ್ತು ಲಿಂಗ ದೇಹ ಹೇಗೆ ಇರುತ್ತದೆಂದರೆ ಉದಾಹರಣೆಗೆ ಹೇಳುವುದಾದರೆ ತಿನ್ನುವ ಕಾಳು ಇದ್ದಂತೆ. ಕಾಳು ಅಂದರೆ ಧಾನ್ಯಕ್ಕೆ ಮೇಲಿನ ಕಾಣುವ ಸೊಪ್ಪೆ ಇದ್ದಹಾಗೆ, ಮೋಕ್ಷಕ್ಕೆ ಹೋಗ ಬೇಕಾದರೆ ಭಗವಂತನ ಸುತ್ತ ಲಕ್ಷ್ಮೀದೇವಿಯು ಹರಿಯುತ್ತಿರುವ ವಿರಜಾ ನದಿಯ ರೂಪದಲ್ಲಿದ್ದಾಳೆ. ಇದರಲ್ಲಿ ಸ್ನಾನವಾದಾಗ ಜೀವನ ಸ್ವರೂಪ ದೇಹ ಲಿಂಗ ದೇಹ ಎರಡು ಭಗ್ನವಾಗುತ್ತದೆ. ಈ ಲಿಂಗಶರೀರವೇ ಜೀವನ ಹುಟ್ಟು ಸಾವುಗಳಿಗೆ ಕಾರಣವಾಗಿರುತ್ತದೆ.

ಆರಧಿಕ ದಶಕಲೆಗಳುಳ್ಳ ಶರೀವನಿರುದ್ಧಗಳ ಮಧ್ಯದಿ ಸೇಪ್ಪವು ಜೀವ ಪರಮಾಚ್ಛಾದಿಕದ್ವಯವು। ಬಾರದಂದದಿ ದಾನವರನತಿ ದೂರಗೈಸುತ ಶ್ರೀ ಜನಾರ್ದನ ಮೂರು ಗುಣದೊಳಗಿಪ್ಪನೆಂದಿಗೂ ತ್ರಿವೃತು ವೆಂದೆನಿಸಿ॥14॥

ಮೇಲೆ ಹೇಳಿದಂತೆ ಜೀವನಿಗೆ ನಾಲ್ಕು ದೇಹಗಳು

1.ಸ್ವರೂಪದೇಹ 2. ಲಿಂಗದೇಹ 3. ಅನಿರುದ್ಧ ದೇಹ, 4. ಸ್ಥೂಲ ದೇಹ

ಈ ಲಿಂಗದೇಹವು ಹದಿನಾರು ಕಳೆಗಳುಳ್ಳದ್ದಾಗಿದೆ. ಹದಿನಾರು ಕಲೆಗಳು ಯಾವುದೆಂದರೆ ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ, ಐದು ತನ್ಮಾತ್ರಾಗಳು ಮತ್ತು ಮನಸ್ಸು (16 ತತ್ವಗಳು) ಈ ಲಿಂಗದೇಹ ಹಾಗೂ ಅನಿರುದ್ಧದೇಹಗಳ ನಡುವೆ ಜೀವಾಚ್ಛಾಧಿಕಾ ಮತ್ತು ಪರಮಾಚ್ಛಾಧಿಕಾ ಎಂಬ ಎರಡು ತೆರೆಗಳು ಉಳ್ಳದ್ದಾಗಿದೆ. ಜೀವಾಚ್ಛಾದಿಕಾ- ಜೀವರ ಸ್ವರೂಪ ಗುಣಗಳನ್ನು ತಿಳಿಯದಂತೆ ಮಾಡುವ ತೆರೆ. ಇದು ಬ್ರಹ್ಮದರ್ಶನದಿಂದ ನಿವೃತ್ತಿಯಾಗುವುದು. ಇನ್ನು ಪರಮಾಚ್ಛಾದಿಕಾ ಪರದೆ ಭಗ ವಂತನ ಸ್ವರೂಪವನ್ನು ಕಾಣದಂತೆ ಮಾಡುವ ತೆರೆ ಇದು ನಿತ್ಯವಾದುದು. ಕಡೆಯಲ್ಲಿ ಶ್ರೀಹರಿಯೇ ದೂರಮಾಡುವ ಇನ್ನು ಜೀವರ ಅನಿರುದ್ಧ ದೇಹದಲ್ಲಿ ರುದ್ರಾದಿ ದೇವರು ಇದ್ದು ಸ್ಥೂಲದೇಹದ ಮುಖಾಂತರ ಹಲವಾರು ಅರಿಷಡ್ ವರ್ಗಗಳ ಮುಖಾಂತರ ಕಾರ್ಯಮಾಡಿಸಿ ಪುಣ್ಯ ಪಾಪಗಳನ್ನು ಕೊಡುವನು. ಇದ್ಯಾವುದು ಸ್ವರೂಪ ದೇಹದಲ್ಲಿರುವ ಶ್ರೀಹರಿಗೆ ಲೇಪವಿರುವುದಿಲ್ಲ. ಹಾಗೂ ಸ್ಥೂಲದೇಹದಲ್ಲಿ ದೇವತೆಗಳೊಂದಿಗೆ ಅಸುರರು ನೆಲೆಸಿರುವರು. ಸ್ಥೂಲ ದೇಹದಲ್ಲಿ ದೇವತೆಗಳು ಹಾಗೂ ದೈತ್ಯರು ನೆಲೆಸಿ ಸ್ಪರ್ಧೆಯಿಂದ ಪಾಪ ಪುಣ್ಯಗಳ ಕರ್ಮಗಳನ್ನು ಶ್ರೀಹರಿಯ ಮುಖ್ಯ ಪ್ರಾಣರ ಆದೇಶ ಆಜ್ಞೆಯಂತೆ ಮಾಡಿಸಿ ಕಾರ್ಯ ನಿರತರಾಗುವರು. ಎಲ್ಲವನ್ನೂ ಜೀವರ ಗುಣಗಳಿಗೆ ಅನುಸಾರವಾಗಿ ಮಾಡುವುದು ವಿಶೇಷವಾಗಿದೆ.

ದೇಹದ 72000 ನಾಡಿಗಳಲ್ಲಿ ಮುಖ್ಯವಾದುದ್ದು ಸುಷುಮ್ನ ನಾಡಿ ಒಂದು ಕೂದಲಿನ ಸಾವಿರ ಭಾಗ ಮಾಡಿದಾಗ ಕೊನೆಯ ಒಂದು ಭಾಗದಷ್ಟು ಇರುವ ಅಷ್ಟು ಸೂಕ್ಷ್ಮ ಈ ಸುಷಮ್ನ ನಾಡಿ ದೇಹದಲ್ಲಿ ಮಧ್ಯದಲ್ಲಿರುತ್ತದೆ.

ಇದಕ್ಕೆ ಬ್ರಹ್ಮ ದೇವರು ಅಭಿಮಾನಿ ದೇವರು ಪ್ರಧಾನವಾಗಿ ಸುಷಮ್ನನಾಡಿ, ಪ್ರಕಾಶನಿ ನಾಡಿ, ವೈದ್ಯತಾ ನಾಡಿ, ವಜ್ರಿಕಾ ನಾಡಿ, ಆರ್ಯ ನಾಡಿ ಈ ನಾಲ್ಕು ನಾಡಿಗಳು ನಾಲ್ಕು ದಿಕ್ಕುಗಳಿದ್ದು ಕೆಂಪು, ಬಿಳಿ, ಬೂದ, ಹಸಿರು, ನೀಲಿ, ಬಣ್ಣ ಹೊಂದಿರುತ್ತದೆ. ಸುಷಮ್ನ ನಾಡಿಯಲ್ಲಿ ತ್ರಿಕೋಣ ಚಿತ್ರವಿರುತ್ತದೆ. ಇಲ್ಲಿ ಅಗ್ನಿ ಮಂಡಲ ಇರುತ್ತದೆ. ಸಂಕರ್ಷಣ ನಾಮಕ ಭಗವಂತ ಪಾಪ ಪುರುಷನನ್ನು ದಹಿಸಿ ನಿತ್ಯದಲ್ಲಿ ಜೀವನನ್ನು ಕರುಣಿಸಿ ವಾಸುದೇವನಾಗಿ ಅನುಗ್ರಹಿಸುವನು. ಹೃದಯ ಮಂಡಲದಲ್ಲಿ ಜೀವನನು ಇದ್ದು,ಬ್ರಹ್ಮನಾಡಿಯ ಮಧ್ಯದಲ್ಲಿ ಹೃದಯ ಕಮಲದ ಬುಡದಲ್ಲಿ ಮೂಲೇಶ ನಾಮದಿ ಶ್ರೀ ಮನ್ನಾರಾಯಣನಿರುವನು.

ಅವನ ಪಾದದಡಿಯಲ್ಲಿ ವಾಯುದೇವರು, ಇವರ ಪಾದದ ಬುಡದಲ್ಲಿ ಜೀವನು ಲಿಂಗದೇಹ ಹಾಗೂ ಅನಿರುದ್ಧ ದೇಹಗಳಿಂದ ನೆಲೆಸಿರುವನು. ಅಲ್ಲಿಯ ಅಷ್ಟದಳ ಕಮಲದ ದಳಗಳಲ್ಲಿ ರುದ್ರಾದಿಗಳು ಇದ್ದು ದೇವನ ಸೇವಕಾರ್ಯ ಮಾಡುತ್ತಿರುವರು. ಈ ಹೃದಯಕಮಲದ ದಳಗಳ ಮಧ್ಯಗಳಲ್ಲಿ ಶ್ರೀಹರಿಯ ಅಷ್ಟ ದಿಕ್ಕುಗಳಿಂದ ಸೇವೆ ಸ್ವೀಕರಿಸುತ್ತ ಅವರ ಅಭೀಷ್ಟಗಳನ್ನು ಈಡೇರಿಸುತ್ತಾ ಹೃತ್ಕಮಲದಲ್ಲಿ ಬಿಂಬ ಮೂರುತಿಯಾಗಿರುವನು.

ಶ್ರೀಹರಿ ಹೃತ್ಕಮಲದ ಅಷ್ಟದಳಗಳಲ್ಲಿ ಸಂಚರಿಸುತ್ತಾ ಬಂದಾಗ ಜೀವಿಗೆ,

1. ಪೂರ್ವದ ಇಂದ್ರನಮನ ಜೀವಿಗೆ ಮನಸ್ಸು ಪುಣ್ಯಕಾರ್ಯ ಮಾಡುವನು.

2. ಆಗ್ನೇಯದ ಅಗ್ನಿಯ ಮನೆಗೆ ಬಂದಾಗ ಆಲಸ್ಯಾದಿಗಳು ನಿದ್ರೆ, ಬಾಯಾರಿಕೆ, ಹಸಿವು ಉಂಟಾಗುವುದು.

3. ದಕ್ಷಿಣದ ಯಮನ ಮನೆಗೆ ಬಂದಾಗ ಕೋಪ, ಅರಚಾಟ, ದುಷ್ಪತನ ಉಂಟಾಗುವುದು.

4. ನೈಋತ್ಯದ ನಿಋತಿ ಮನೆಗೆ ಬಂದಾಗ - ಮನಸ್ಸಿಗೆ ಹರ್ಷ ಉಂಟಾಗುವುದು.

5. ಪಶ್ಚಿಮದ ವರುಣನ ಮನೆಗೆ ಬಂದಾಗ - ಮನಸ್ಸಿಗೆ ಹರ್ಷ ಉಂಟಾಗುವುದು.

6. ವಾಯುವ್ಯದ ಪ್ರವಾಹವಾಯು ಮನೆಗೆ ಬಂದಾಗ - ಓಡಾಟಾದಿಗಳು ನಡೆಯುವುದು.

7. ಉತ್ತರದ ಕುಬೇರರ ಮನೆಗೆ ಬಂದಾಗ ಹುಟ್ಟುವುದು ಧರ್ಮ ಕಾರ್ಯಗಳಾಗುವುವು.

8. ಈಶಾನ್ಯದ ರುದ್ರದೇವರ ಮನೆಗೆ ಬಂದಾಗ - ಗೋ ಧನ, ಭೂಮಿ, ಕನ್ಯಾದಾನ ಮುಂತಾದವಲ್ಲಿ ಧರ್ಮಬುದ್ಧಿ ಉಂಟಾಗುವುದು. ಹೃದಯದ ಮಧ್ಯಭಾಗಕ್ಕೆ ಬಂದಾಗ - ವೈರಾಗ್ಯ ಹುಟ್ಟುವುದು,

ಹೃದಯದ ಮಧ್ಯಭಾಗಕ್ಕೆ ಬಂದಾಗ - ವೈರಾಗ್ಯ ಹುಟ್ಟುವುದು,

ಹೃದಯಕಮಲದ ಕೇಶರಕ್ಕೆ ಬಂದಾಗ - ಕನಸು ಬೀಳುವುದು, ಕಮಲದ ಬುಡಭಾಗಕ್ಕೆ ಬಂದಾಗ ಗಾಢನಿದ್ರೆ ಬರುವುದು.

ಕರ್ಣಿಕೆಯಲ್ಲಿ ಬಂದಾಗ-ಎಚ್ಚರಿಕೆ ಉಂಟಾಗುವುದು,ಹೀಗೆ ಹೃದಯ ಕಮಲದ ಮಧ್ಯ ವಿರಾಜಮಾನನಾದ ಭಗವಂತ ಆಯಾ ಸ್ಥಳಗಳಿಗೆ ಬಂದಾಗ ಆಯಾ ದೇವತೆಗಳಿಂದ ಪೂಜಿತನಾಗಿ ಆಯಾ ಪಾಪ ಕಾರ್ಯಗಳನ್ನು ಮಾಡಿಸುವನು.

ದೇಹದ ಸಪ್ತಧಾತುಗಳಾದ ತ್ವಕ್, ಚರ್ಮ, ರಕ್ತ ಮೇಧಸ್ಸು ಮಜ್ಜ ಅಸ್ಥಿ ಇವುಗಳಲ್ಲಿ ಶ್ರೀಹರಿ ವರಾಹ, ಉದ್ಗೀಥ, ಪ್ರಸ್ತಾವ, ಹೀಂಕಾರ, ಪ್ರತಿಹಾರ, ನಿರ್ಧ ಮತ್ತು ಉಪದ್ರವ ಸಾಮರೂಪಗಳನ್ನು ಹೊಂದಿರುವನು. ಹಾಗೂ ಈ ಸಪ್ತಧಾತುಗಳಲ್ಲಿ ನಲವತ್ತೊಂಬತ್ತು ರೂಪಗಳಿಂದ ಇರುವವನಾಗಿರುವನು.

ಈ ಸಪ್ತಧಾತುಗಳ ಒಳಹೊರಗೆ ಇದ್ದು ಶ್ರೀ ಹರಿ ಅನ್ನಮಯಾದಿ ಕೋಶಗಳಲೂ ನೆಲೆಸಿರುವನು. ಇದ್ದರೂ ನಿರ್ಲಿಪ್ತನಾಗಿ ಜೀವರಿಗೆ ಭೋಗಗಳನ್ನು ನೀಡುತ್ತ ತೈಜಸ ಪ್ರಾಜ್ಞ ಹಾಗೂ ವಿಶ್ವ ರೂಪಗಳಿಂದ ಸ್ವಪ್ನ ನಿದ್ರಾ ಹಾಗೂ ಜಾಗ್ರದವವಸ್ಥೆಗಳನ್ನು ಕೊಡುವವನಾಗಿರುವನು. ಹಾಗೇ ಅಸ್ಥಿ ಮಜ್ಜಾ ಹಾಗೂ ಅಂಗುಲಿ ಕೀಲುಗಳಲ್ಲಿ 360 ರೂಪಗಳಿಂದಿರುವನು.

ಈ ಪರಿಯ ದೇಹದೊಳು ಭಗವದ್ರೂಪಗಳ ಮರೆಯದಲೆ ಮನದಿ ಪದೇ ಪದೇ ಭುಕುತಿಯಲ್ಲಿ ಸ್ಮರಿಸುತಲ್ಪಿಪ ಭಕುತರನು

ಗೋಪತಿ ಜಗನ್ನಾಥವಿಠಲ ಸಮೀಪಗಳನು ತಾನಾಗಿ ಸಂತತ ಸಾಪರೋಕ್ಷಿಯ ಮಾಡಿ ಪೊರೆವನು ಎಲ್ಲ ಕಾಲದಲಿ ॥31॥

ಶ್ರೀ ಹರಿಯ ಸತತ ಚಿಂತನೆಯಿಂದ ಕೆಲ ಜೀವಿಗಳು ಸಂಸಾರದಿಂದ ಮುಕ್ತರಾಗಿ ಅವನು ಅನುಗ್ರಹದಿಂದ ಸಾರೂಪ್ಯವನ್ನು ಹೊಂದುವರೆಂದಿರುವರು.

ದೇಹದಲ್ಲಿನ ಭಗವದ್ರೂಪಗಳ ಸತತ ಚಿಂತನೆಯಿಂದ ಇದರ ಫಲವಾಗಿ ರೀತಿ ಗೋಪತಿ ಜಗನ್ನಾಥವಿಠ್ಠಲ ಅಪರೋಕ್ಷಜ್ಞಾನ ಪ್ರಾಪ್ತಿಯು ನೀಡಿ ಶಾಶ್ವತ ಸುಖಪ್ರಾಪ್ತಿ ಕೊಡುವನು.

- ಮುಂದುವರೆಯುತ್ತದೆ.



**ಮೇ 2024 ತಿಂಗಳ ರಸಪ್ರಶ್ನೆಯ ಉತ್ತರಗಳು**

1. ಶ್ರೀಲಕ್ಷ್ಮೀ
2. ವಿಠಲದೇವಾಲಯ
3. ಯಾಮುನಾಚಾರ್ಯರು
4. ನರಸಿಂಹಸ್ವಾಮಿ
5. 32 ನೇ ವಯಸ್ಸಿನಲ್ಲಿ
6. ವಿಂಧ್ಯ ಪರ್ವತ
7. ಹತಿರಾಮಜೀ ಮಠದವರಿಗೆ
8. ಏಳುದಿನಗಳು
9. 16 ವರ್ಷಗಳ ಕಾಲ
10. ಮೂರುವರೆ ಕೋಟಿ
11. 76 ನೇ ಪಾಶುರ
12. ವಿಷ್ವಕ್ಸೇನ ತೀರ್ಥ
13. ಕಲ್ಲು
14. ತುಂಬುರುತೀರ್ಥ
15. ಇಂಡಿಯನ್ ಬೇ ಲೀಫ್

# ಗೋಧಿಯಿಂದ ಆರೋಗ್ಯ ಸಂರಕ್ಷಣೆ



- ಮೂಲ : ಡಾ॥ ಮಧುಸೂದನ ಶರ್ಮ
ಅನುವಾದ : ಡಿ.ಎಸ್. ಬದ್ರಿನಾಥ್

ಗೋಧಿಯು ನವಗ್ರಹಗಳಲ್ಲಿ ಸೂರ್ಯನಿಗೆ ಪ್ರೀತಿಪಾತ್ರವಾದುದೆಂದು ನಮ್ಮ ವೇದ ವಾಙ್ಮಯವು ಹೇಳುತ್ತದೆ. ನಮಗೆ ಅತ್ಯಂತ ಪ್ರಧಾನವಾದ ಆಹಾರಗಳಲ್ಲಿ ಗೋಧಿಯ ಪಾತ್ರ ಅಗ್ರಗಣ್ಯವಾದುದು. ಆಂಗ್ಲದಲ್ಲಿ 'ವೀಟ್' ಎಂದೂ ಹಿಂದಿಯಲ್ಲಿ ಗೇಹು ಎಂದೂ ಕರೆಯಲ್ಪಡುವ ಈ ಗೋಧಿಯಲ್ಲಿ ಸ್ಥೂಲ ಪೋಷಕಾಂಶಗಳು, ವಿವಿಧ ಬಗೆಯ ಸೂಕ್ಷ್ಮ ಪೂರಕಗಳು ಹೇರಳವಾಗಿರುತ್ತದೆ. ಗೋಧಿಯಿಂದ ತಯಾರಾಗುವ ಗೋಧಿ ನುಚ್ಚು, ಗೋಧಿ ಹಿಟ್ಟು ವಂಥವುಗಳನ್ನು ಆಹಾರ ಪದಾರ್ಥ, ಅಡುಗೆ ಪದಾರ್ಥಗಳ ತಯಾರಿಕೆ ಯಲ್ಲಿ ಬಗೆ ಬಗೆಯಾಗಿ ಬಳಸುತ್ತಾರೆ. ಗೋಧಿ ಹಾಲು, ರಸ ಇಂತಹವುಗಳಿಂದ ಹಲ್ವ, ಪಾಯಸ, ಒಬ್ಬಟ್ಟು ಮುಂತಾದ ವಿವಿಧ ಬಗೆಯ ರುಚಿಕರವಾದ ಬಾಯಿಂದ ನೀರೂಡುವ ಸಿಹಿ ತಿಂಡಿಗಳನ್ನು ತಯಾರಿಸುತ್ತಾರೆ.

ಇವೆಲ್ಲವೂ ಒಂದು ಕಡೆ ತೂಗಿದರೆ, ಮತ್ತೊಂದೆಡೆ ವಿವಿಧ ಬಗೆಯ ವ್ಯಾಧಿಗಳಿಗೆ ಸೂಕ್ತವಾದ ಔಷಧಿಯಾಗಿ ಸಹಾ ಈ ಗೋಧಿಯನ್ನು ಉಪಯೋಗಿಸಲಾಗುತ್ತದೆ ಎಂಬ ವಿಷಯವನ್ನು ಗಮನಿಸತಕ್ಕದ್ದು. ದಿನನಿತ್ಯದ ಜೀವನದಲ್ಲಿ ನಾವು ಎದುರಿಸುವ ವಿವಿಧ ಅನಾರೋಗ್ಯ ಸಮಸ್ಯೆಗಳಿಂದ ಹೊರಬರಲು ಗೋಧಿಯನ್ನು ಹೇಗೆ ಸದ್ವಿನಿಯೋಗ ಮಾಡಿಕೊಳ್ಳಬಹುದೆಂಬುದನ್ನು ಪ್ರಸ್ತುತ ತಿಳಿದುಕೊಳ್ಳೋಣ.

**ಮುರಿದ ಎಲುಬುಗಳು ಶೀಘ್ರ ಹೊಂದಿಕೊಳ್ಳಲು :**

ತಕ್ಕಷ್ಟು ಗೋಧಿಯನ್ನು ಮಣ್ಣಿನ ಅಥವಾ ಕಬ್ಬಿಣದ ಬಾಣಲೆಯಲ್ಲಿ ಕರಿಯಾಗುವವರೆಗೂ ಹುರಿದು,ಬಿಸಿಯಾರಿದ ನಂತರ ಜರಡಿ ಹಿಡಿದು ದಿನವೂ ಬೆಳಗ್ಗೆ, ಸಾಯಂಕಾಲ ಬಾರಿಯೊಂದಕ್ಕೆ 2-3 ಗ್ರಾಂ ಔಷಧಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಶೀಘ್ರದಲ್ಲಿ ಫಲಿತಾಂಶ ಹೊರಬರುತ್ತದೆ. ಅದೇ ಪುಡಿಯಲ್ಲಿ ಸಮಗಾತ್ರದಲ್ಲಿ ಸ್ಪಟಿಕ ಬೆಲ್ಲ ಚೂರ್ಣ ಕಲಿಸಿ ಎರಡು ಬಾರಿ, ಬಾರಿಯೊಂದಕ್ಕೆ ಅರ್ಧ ಟೀ ಸ್ಪೂನ್ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಸ್ತ್ರೀಯರಲ್ಲಿ ಅಧಿಕ ಋತುಸ್ರಾವ ಕಡಿಮೆಯಾಗುತ್ತದೆ.

**ಉಬ್ಬಸಕ್ಕೆ:**

ಒಂದು ಮಣ್ಣಿನ ಅಥವಾ ಕಬ್ಬಿಣದ ಬಾಣಲೆಯಲ್ಲಿ 50 ಗ್ರಾಂ ನಷ್ಟು ಗೋಧಿ, ಅರಶಿನ ಕೊಂಬುಗಳನ್ನು ತೆಗೆದುಕೊಂಡು ಸಣ್ಣನೆ ಉರಿಯಲ್ಲಿ ಹಗುರಾಗಿ ಹುರಿದು ಪುಡಿಮಾಡಿ ದಿನವೂ ಬೆಳಗ್ಗೆ , ಸಂಜೆ ಬಾರಿಯೊಂದಕ್ಕೆ 2-3 ಗ್ರಾಂ ಪುಡಿಯನ್ನು ಚಪ್ಪರಿಸಿ, ಉಗುರು ಬೆಚ್ಚಗಿನ ನೀರನ್ನು ಕುಡಿಯುತ್ತಿದ್ದರೆ ಉಬ್ಬಸವು ನಿಯಂತ್ರಣದಲ್ಲಿ ಇರುತ್ತದೆ.

**ದಪ್ಪಗಾಗಲು :**

ಗೋಧಿ, ಬಾದಾಮಿಬೀಜ, ಕರಿಜಾಲಿ ಮರದ ಅಂಟು , ಸ್ಪಟಿಕ ಬೆಲ್ಲದ ಚೂರ್ಣಗಳನ್ನು ಸಮಾನವಾಗಿ ತೆಗೆದುಕೊಂಡು ಕಲಿಸಿ ದಿನವೂ ಎರಡು ಬಾರಿ ಬಾರಿಯೊಂದಕ್ಕೆ 5-10 ಗ್ರಾಂ ಚೂರ್ಣವನ್ನು 100 ಮಿ.ಲೀ. ಹಾಲಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಸಹಜವಾಗಿ ಮಾಂಸ ಖಂಡ ಬೆಳವಣಿಗೆ, ಮೂಳೆಗಳ ಬಲದಿಂದ ಪೂರಕವಾದ ಮೈತೂಕ ಹೆಚ್ಚುತ್ತದೆ. (ಜಾಲಿಯ ಅಂಟನ್ನು ಸ್ವಲ್ಪ ತುಪ್ಪದಲ್ಲಿ ಹುರಿದು ಪುಡಿ ಮಾಡಿಕೊಳ್ಳಬೇಕು)

**ಸ್ಥೂಲಕಾಯಕ್ಕೆ:**

ಹಳೆಯ ಗೋಧಿ, ಅಕ್ಕಿ, ಜೋಳ, ಹೆಸರು, ಹುರುಳಿ, ಬಾರ್ಲಿ, ಕಾಳುಗಳು ಒಂದೊಂದು ಕಾಲು ಕಿಲೋ ತೆಗೆದುಕೊಂಡು ರಾತ್ರಿಯೆಲ್ಲಾ ನೀರಿನಲ್ಲಿ ನೆನೆಸಿ, ಮರುದಿನ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಹುರಿದು, ಪುಡಿ ಮಾಡಿಕೊಂಡು ದಿನವೂ ರಾತ್ರಿ ಒಂದೆರಡು ರೊಟ್ಟಿಗಳನ್ನು ಮಾಡಿಕೊಂಡು ಅದನ್ನು ಕೇವಲ ನೀರಿನಲ್ಲಿ ಬೇಯಿಸಿದ ಪಲ್ಲೆಗಳೊಂದಿಗೆ ಮಾತ್ರವೇ ಸೇವಿಸುತ್ತಿದ್ದರೆ ದೇಹದಲ್ಲಿನ ಅಧಿಕವಾಗಿ ಸಂಗ್ರಹಗೊಂಡ ಕೊಬ್ಬು ಕರಗಿ ನೀಳವಾಗಿ ತಯಾರಾಗುವಿರಿ. ಇನ್ನು ಅವಶ್ಯವಿದ್ದಲ್ಲಿ ಪಲ್ಲೆಗಳನ್ನು ಇಳಿಸಿದ ನಂತರ, ಆ ಪಲ್ಲೆಯಲ್ಲಿ ಸ್ವಲ್ಪ ಉಪ್ಪು ಅಥವಾ ಸೈಂಧವ ಲವಣ ಪುಡಿ ಚಿಮುಕಿಸಿಕೊಳ್ಳಬಹುದು.

**ಜೀರ್ಣ ಪ್ರಕ್ರಿಯೆ ಸರಾಗವಾಗಿ ಆಗಲು :**

250 ಗ್ರಾಂ ಗೋಧಿಹಿಟ್ಟಿನಲ್ಲಿ 1-3 ಟೀ ಸ್ಪೂನ್ ಅಡುಗೆ ಹರಳೆಣ್ಣೆಯನ್ನು ಕಲಿಸಿ ತಕ್ಕಷ್ಟು ನೀರು ಕಲಿಸಿ ಮಾಡಿದ ಉಂಡೆಗಳನ್ನು ಒಂದೆರಡು ರೊಟ್ಟಿಗಳಲ್ಲಿ ಹಾಕಿ, ಸ್ವಲ್ಪ ತುಪ್ಪವನ್ನು ಕೆಂಡದ ಮೇಲೆ ಹಾಕಿ ಕಾಯಿಸಿ, ಸ್ವಲ್ಪ ಕಲ್ಲುಸಕ್ಕರೆ ಕಲಿಸಿ ದಿನವೂ ಒಂದು ಬಾರಿ ತಿನ್ನುತ್ತಿದ್ದರೆ ಸಲೀಸಾಗಿ ಜೀರ್ಣವಾಗುತ್ತದೆ. ಮಲಬದ್ಧತೆ ಸಮಸ್ಯೆ ಸಹಾ ಹೋಗುವುದು.

**ಸ್ತನದ ಗಡ್ಡೆ ಬಾವು ತಗ್ಗಲು :**

ದಿನವೂ ಒಂದು ಬಾರಿ 10 ಗ್ರಾಂ ಗೋಧಿಹಿಟ್ಟು, ಕಿರಾಣಿಯಂಗಡಿಯಲ್ಲಿ ಲಭಿಸುವ 5 ಗ್ರಾಂ ಮುಸಂಬರವನ್ನು, 5 ಗ್ರಾಂ ಗುಗ್ಗುಳವನ್ನು ಕಲಿಸಿ ತಕ್ಕಷ್ಟು ನೀರಿನಲ್ಲಿ ಕಲಿಸಿ ತಕ್ಕಷ್ಟು ನೀರಿನಲ್ಲಿ ನಾದಿ ಲೇಪಿಸುತ್ತಿದ್ದರೆ ಸ್ತನದ ಹುಣ್ಣು, ಬಾವು, ನೋವು, ಕಡಿಮೆ ಯಾಗುತ್ತವೆ.

**ಶಕ್ತಿ ವರ್ಧಕ ಪೇಯ :**

ಗೋಧಿ ಹಾಗೂ ಬಾರ್ಲಿ ಸಮಾನವಾಗಿ ತೆಗೆದುಕೊಂಡು ಬೇರೆ ಬೇರೆಯಾಗಿ ತುಪ್ಪದಲ್ಲಿ ಹುರಿದು, ಎರಡನ್ನು ಕಲಿಸಿ, ಪುಡಿ ಮಾಡಿ , ಸಂಗ್ರಹಿಸಿಟ್ಟುಕೊಂಡು ದಿನವೂ ಒಂದೆರಡು ಬಾರಿ ತಕ್ಕಷ್ಟು ಪುಡಿಯನ್ನು 100 ಮಿ.ಲೀ. ಹಾಲಿನಲ್ಲಿ ಹಾಕಿ,ಬೇಕಾದಷ್ಟು ಕಲ್ಲುಸಕ್ಕರೆ ಹಾಕಿ ಪೇಯದಂತೆ ಸೇವಿಸುತ್ತಿದ್ದರೆ ಮಕ್ಕಳಿನಿಂದ ಮುದುಕರವರೆಗೆ ಶಕ್ತಿವರ್ಧಕ ಆಹಾರವಾಗಿ ಪರಿಣಮಿಸುತ್ತದೆ.

**ಅನಗತ್ಯ ರೋಮಗಳಿಗೆ :**

ಗೋಧಿ ಹಿಟ್ಟು, ಉಮ್ಮತ್ತಿ ಬೀಜದ ಪುಡಿ ಕಲಿಸಿ ತಕ್ಕಷ್ಟು ನೀರು ಹಾಕಿ ಮೆತ್ತಗೆ ನಾದಿ ದಿನವೂ ಆಯಾ ಭಾಗಕ್ಕೆ ತಿಕ್ಕುತ್ತಿದ್ದರೆ ಅನಗತ್ಯ ರೋಮಗಳು ತೊಲಗಿ ಹೋಗುತ್ತದೆ.

**ಮೊಣಕೈ ಸುತ್ತ ಸುಕ್ಕಿರುವ ಚರ್ಮದ ಮೇಲಿನ ಕಪ್ಪು ಕಡಿಮೆಯಾಗಲು :**

ಗೋಧಿಯನ್ನು ಒಂದೆರಡು ತಾಸು ನೀರಿನಲ್ಲಿ ನೆನೆಸಿ, ಮಿಕ್ಸಿಯಲ್ಲಿ ಹಾಕಿ, ಪೇಸ್ಟು ಮಾಡಿ, ಬೇಕಾಗುವಷ್ಟು ಜೇನನ್ನು ಕಲಿಸಿ, ಹಚ್ಚಿ ಒಂದು ತಾಸಿನ ಬಳಿಕ ತೊಳೆದರೆ ಉತ್ತಮ ಫಲಿತಾಂಶ ದೊರಕುತ್ತದೆ.

**ಸೊಂಟ ನೋವು ಕಡಿಮೆಯಾಗಲು :**

ದಿನವೂ ರಾತ್ರಿ 60 ಗ್ರಾಂ ಗೋಧಿಯನ್ನು ತಕ್ಕಷ್ಟು ನೀರಿನಲ್ಲಿ ನೆನೆಸಿ ಬೆಳಗ್ಗೆ ಒಂದು ಟೀ ಸ್ಪೂನ್ ದನಿಯ ಪುಡಿ, ಅರ್ಧ ಟೀ ಸ್ಪೂನ್ ಗಸೆಗಸೆಯನ್ನು ಅದರಲ್ಲಿ ಕಲಿಸಿ, ಮೆತ್ತಗೆ ನಾದಿ, 200 ಗ್ರಾಂ ಮಿ.ಲೀ. ಹಾಲಿನಲ್ಲಿ ಕಲಿಸಿ ಮರಳಿಸಿ, ಕೆಳಗಿಳಿಸಿ ಉಗುರು



ಬೆಚ್ಚಗಿರುವಾಗಲೇ ಸೇವಿಸಿದರೆ ಸೊಂಟ ನೋವು ಸಮಸ್ಯೆಗೆ ತಕ್ಕುದಾದ ಪರಿಹಾರ ದೊರಕುತ್ತದೆ.



# ಪುರಿ ರಥಯಾತ್ರೆ











ಭಾರತದಲ್ಲಿ ಹಿಂದೂ ಧರ್ಮಾಚರಣೆಯಲ್ಲಿ ವರ್ಷ ಪೂರ್ತಿ ರಥೋತ್ಸವಗಳು ಒಂದಿಲ್ಲೊಂದು ಕಡೆ ನಡೆಯುತ್ತಲೇ ಇರುತ್ತದೆ. ಆದರೆ ಅಂಥಹ ರಥೋತ್ಸವದಲ್ಲಿ ಪ್ರಪಂಚದಲ್ಲೇ ಪ್ರಸಿದ್ಧಿ ಪಡೆದಿರುವ ರಥೋತ್ಸವ ಎಂದರೆ ಒರಿಸ್ಸಾದಲ್ಲಿ ಪುರಿ ನಗರಿಯಲ್ಲಿ ನಡೆಯುವ ಜಗನ್ನಾಥನ ರಥಯಾತ್ರೆ. ಈ ಯಾತ್ರೆಯನ್ನು ನೋಡಲು ಲಕ್ಷೋಪಾದಿಯಲ್ಲಿ ದೇಶ ವಿದೇಶಗಳಿಂದ ಭಕ್ತರು ಪುರಿಗೆ ಆಗಮಿಸುತ್ತಾರೆ. ಇದೊಂದು ಧಾರ್ಮಿಕ ರಥ ಯಾತ್ರೆಯಾಗಿದ್ದು ಇದನ್ನು ಪುರಿಯ ಪ್ರಮುಖ ದೇವರಾದ ಜಗನ್ನಾಥ, (ಕೃಷ್ಣ) ಆತನ ಸಹೋದರಿ ದೇವಿ ಸುಭದ್ರ ಹಾಗೂ ಸಹೋದರ ಬಲಭದ್ರ ದೇವರಿಗೆ ನಡೆಯುತ್ತದೆ. ಇದನ್ನು ದಶವತಾರ್ ಯಾತ್ರೆ, ನವದಿನ್ ಯಾತ್ರೆ, ಗುಂಡಿಚಾ ಯಾತ್ರೆ ಹಾಗೂ ಕಾರ್‌ಯೋತ್ಸವ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. 9 ದಿನಗಳ ಕಾಲ ನಡೆಯುವ ಸುದೀರ್ಘ ಉತ್ಸವ ಇದಾಗಿದೆ. ಈ ಬಾರಿ 2024 ರ ಜುಲೈ 7 ರಂದು ಪುರಿಯಲ್ಲಿ ರಥಯಾತ್ರೆ ನಡೆಯಲಿದೆ.

**ರಥಯಾತ್ರೆಯ ಇತಿಹಾಸ :**

ಪುರಿಯ ರಥಯಾತ್ರೆ ವಿಶ್ವದ ಅತಿ ಪುರಾತನ ಧಾರ್ಮಿಕ ಆಚರಣೆಯಾಗಿದೆ. ಹಿಂದೂ ಪುರಾಣಗಳಾದ ಪದ್ಮಪುರಾಣ, ಬ್ರಹ್ಮಪುರಾಣ ಹಾಗೂ ಸ್ಕಂದಪುರಾಣಗಳಲ್ಲಿ ರಥಯಾತ್ರೆಯ ಬಗ್ಗೆ ಉಲ್ಲೇಖವಿದೆ. ಪೌರಾಣಿಕ ಹಿನ್ನಲೆಯ ಪ್ರಕಾರ ಸುಭದ್ರೆ ಒಮ್ಮೆ ನಗರ ಪ್ರದಕ್ಷಿಣೆ ಮಾಡಬೇಕೆಂದು ಆಸೆ ವ್ಯಕ್ತ ಪಡಿಸಿದಾಗ ಸೋದರರಾದ ಕೃಷ್ಣ ಹಾಗೂ ಬಲರಾಮರು ಆಕೆಯನ್ನು ರಥದಲ್ಲಿ ಕೂಡಿಸಿ ನಗರ ಪ್ರದಕ್ಷಿಣೆ ಮಾಡಿಸಿ ಸನಿಹದಲ್ಲೇ ಗುಂಡಿಚಾ ಎಂಬಲ್ಲಿದ್ದ ಚಿಕ್ಕಮ್ಮನ ಮನೆಗೆ ಹೋಗಿ ಅಲ್ಲಿಯೇ ಏಳು ದಿನ ಇದ್ದು ವಾಪಸ್ಸು ಪುರಿಗೆ ಮರಳಿದರು. ಅಂದಿನಿಂದ ಇಲ್ಲಿ ರಥಯಾತ್ರೆ ಪ್ರಾರಂಭವಾಯಿತು ಎಂದು ಹೇಳಲಾಗುತ್ತದೆ. ಇನ್ನೊಂದು ಕಥೆಯ ಪ್ರಕಾರ ರಥಯಾತ್ರೆ ತನ್ನ ಮಾವ ದುಷ್ಟ ಕಂಸನನ್ನು ವಧಿಸಲು ಶ್ರೀಕೃಷ್ಣ ವೃಂದಾವನದಿಂದ ಮಥುರೆಗೆ ಪ್ರಯಾಣ ಬೆಳಸಿದ ಪ್ರತೀಕವಾಗಿ ಆಚರಿಸಲಾಗುತ್ತದೆ ಎನ್ನುತ್ತಾರೆ. ಮತ್ತೊಂದು ಕಥೆಯ ಪ್ರಕಾರ ಒಡಹುಟ್ಟಿದವರು ತೀವ್ರ ಜ್ವರದಿಂದ ಬಳಲಿದಾಗ ಅವರನ್ನು ಭೇಟಿಮಾಡಿ ಅರೈಕೆ ಮಾಡಲು ತನ್ನ ಮನೆಗೆ ಕೆರೆದುಕೊಂಡು ಹೋಗಲು ಅವರ ಚಿಕ್ಕಮ್ಮ ಬರುತ್ತಾಳೆ ಎಂಬ ಪ್ರತೀತಿ. ಮಗದೊಂದು ಕಥೆಯ ಪ್ರಕಾರ ಭಗವಾನ್ ಶ್ರೀಕೃಷ್ಣ ತನ್ನ ಭಕ್ತರೊಂದಿಗೆ ಬೆರೆಯಲು ಹೊರ ಬರುತ್ತಾನೆ ಎಂಬ ನಂಬಿಕೆಯಿದೆ. ಕಥೆಗಳು ಏನೇ ಇರಲಿ ದೈವ ಭಕ್ತರಿಗೆ ತಮ್ಮ ಭಕ್ತಿಯ ಪರಾಕಾಷ್ಟೆಯನ್ನು ತೋರಲು ಜಗದೋದ್ಧಾರಕರನ್ನು ನೋಡಿ ಕಣ್ತುಂಬಿ ಕೊಳ್ಳಲು ಹಾಗೂ ರಥಯಾತ್ರೆಯಲ್ಲಿ ಸಂಭ್ರಮಿಸಲು ಇದೊಂದು ಸುಸಮಯ. ಪ್ರತಿವರ್ಷದ ಆಷಾಢ ಮಾಸದ ಶುಕ್ಲ ಪಕ್ಷದ ಎರಡನೆ ದಿನ ಈ ಯಾತ್ರೆಯನ್ನು ನಡೆಸಲಾಗುತ್ತದೆ. ಜಗನ್ನಾಥ ತನ್ನ ಸಹೋದರ ಸಹೋದರಿಯರ ಜೊತೆ ಗುಂಡಿಚಾದಲ್ಲಿರುವ ತನ್ನ ಚಿಕ್ಕಮ್ಮನ ಮನೆಗೆ ಹೋಗುತ್ತಾನೆಂಬ ಹಿನ್ನಲೆಯಲ್ಲಿ ನಡೆಸಲಾಗುವ ಯಾತ್ರೆ ಇದು. ಇಲ್ಲಿ ಚಿಕ್ಕಮ್ಮನ ಮನೆಯಲ್ಲಿ ಏಳು ದಿನ ಉಳಿದು ನಂತರ ಮತ್ತೆ ದೇವಸ್ಥಾನಕ್ಕೆ ವಾಪಸ್ಸಾಗುತ್ತಾನೆ ಎಂದು ಪ್ರತೀತಿ. ರಥಯಾತ್ರೆ ಹೊರಡುವ 14 ದಿನ ಹಿಂದೆ ಜ್ಯೇಷ್ಠ ಪೂರ್ಣಿಮೆಯಂದು ಜಗನ್ನಾಥ ದೇವರಿಗೆ ಬಲಭದ್ರ ಸುಭದ್ರರಿಗೆ 108 ಕುಡಿಕೆಯ ಸ್ನಾನ ಮಾಡಿಸಲಾಗುತ್ತದೆ. ಇದನ್ನು “ಸಹಸ್ರಧಾರ ಸ್ನಾನ” ಎಂದು ಕರೆಯುತ್ತಾರೆ. ಇದಕ್ಕೆ ಬಳಸುವ ನೀರಿನ ಬಾವಿಯನ್ನು ವರ್ಷಕ್ಕೊಮ್ಮೆ ಮಾತ್ರ ತೆಗೆಯಲಾಗುತ್ತದೆ.ಈ ಸ್ನಾನದ ನಂತರ ಜಗನ್ನಾಥನಿಗೆ ಜ್ವರ ಬರುತ್ತದೆ ಎಂಬ ನಂಬಿಕೆಯಿದೆ. ಆಗ ಸ್ವಾಮಿಯು 14 ದಿನ ಏಕಾಂತದಲ್ಲಿರುತ್ತಾನೆ. 14 ದಿನ ಏಕಾಂತದಲ್ಲಿದ್ದು 15ನೇ ದಿನ ಭಕ್ತರಿಗೆ ದರ್ಶನ ಕೊಟ್ಟು ಮೂರು ಜನರು ಗುಂಡಿಚಾ ಕಡೆ ಹೊರಡುತ್ತಾರೆ.



# ವೇದವ್ಯಾ ಮತ್ತು ವೇದವ್ಯಾಸರು

– ಶ್ರೀಮತಿ. ಕಲ್ಯಾಣಿ

ಭಾರತೀಯ ಪ್ರಾಣತತ್ವ ಅದರಲ್ಲೂ ಸಾಂಸ್ಕೃತಿಕ ಪ್ರಾಣತತ್ವ ವೇದವೇ. ಇದನ್ನು ಆರ್ಯಮೇಧನು ಮುಕ್ತಿ ಕಂಠ ದಿಂದ ಪ್ರಶಂಸಿದ್ದಾನೆ. ಭಾರತೀಯ ಧರ್ಮ, ದರ್ಶನ, ಆಧ್ಯಾತ್ಮ, ಆಚಾರ,ವಿಚಾರ ನೀತಿ-ರೀತಿ, ವಿಜ್ಞಾನ- ಕಲೆ ಇವೆಲ್ಲವೂ ವೇದ ಗಳಿಂದಲೇ ಜೀವ ತಳೆದಿವೆ. ಜೀವನ ಮತ್ತು ಸಾಹಿತ್ಯದ ಯಾವುದೇ ಪ್ರಕಾರವೂ ಸಹ ವೈದಿಕ ವಾಙ್ಮಯದ ಬೀಜವಿಲ್ಲದೆ ಇಲ್ಲ, ಸಮಷ್ಠಿರೂಪದಲ್ಲಿ ಸಮಗ್ರ ಭಾರತೀಯ ಸಾಹಿತ್ಯ, ಜನಜೀವನ ಹಾಗೂ ಸಂಸ್ಕೃತಿಯ ನೆಲೆಗಟ್ಟು ವೇದಗಳೆಂದರೆ ಇದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ. ವೇದಗಳ ಹುಟ್ಟು ಯಾವಾಗ ಹೇಗೆ ಉಂಟಾಯಿತು ಎಂಬ ವಿಷಯದಲ್ಲಿ ಸ್ಮೃತಿ ವಚನವೇ ಪ್ರಮಾಣ.

"ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ"

ಅಂದರೆ, ವೇದವಾಣಿ ಅನಾದಿ, ಅನಂತ ಮತ್ತು ಸನಾತನ, ಅದನ್ನು ಬ್ರಹ್ಮನ ಮೂಲಕ ಲೋಕದ ಹಿತಕ್ಕಾಗಿ ಪ್ರಕಟ ಪಡಿಸಲಾಗಿದೆ.

ವೇದಗಳು ಎಷ್ಟು? ಈ ವಿಚಾರವಾಗಿ ತೈತ್ತರೀಯದ ಹೇಳಿಕೆಯನ್ನು ಪುರಸ್ಕರಿಸುವುದಾದರೆ ವೇದಕ್ಕೆ ಯಾವುದೇ ಅಂತ್ಯವಿಲ್ಲ ಎಂಬುದನ್ನು ಒಪ್ಪಬೇಕು. ಅನಂತಾ ವೈ ವೇದಾಃ ವಾಸ್ತವವಾಗಿ ದೈವ ಜ್ಞಾನಕ್ಕೆ ಯಾವುದೇ ಎಲ್ಲೆ ಇರಲಾರದು, ಆದರೂ ತಮ್ಮ ತಮ್ಮ ದೃಷ್ಟಿಕೋನದಿಂದ ಈ ವಿಷಯವಾಗಿ ಮಂಥನಮಾಡಿ ಕೆಲವರು ವೇದಗಳು ಮೂರು ಹಾಗೂ ಇನ್ನು ಕೆಲವರು ನಾಲ್ಕು ಎಂದು ಪ್ರತಿಪಾದಿಸಿದ್ದಾರೆ.

ಅಮರಕೋಶದ ಪ್ರಥಮಕಾಂಡದ ಶಬ್ದಾದಿವರ್ಗದಲ್ಲಿ ವೇದಗಳು ಮೂರು ಎಂದು ಹೇಳಲ್ಪಟ್ಟಿದೆ.

ಶ್ರುತಿಃ ಸ್ತ್ರೀ ವೇದ ಆಮ್ನಾಯಸ್ತ್ರಯೀ ಹಾಗೂ ಸ್ತ್ರೀ ಯಾಮೃಕ್ ಸಾಮಯಜುಷೀ ಇತಿ ವೇದಾಸ್ತ್ರಯಸ್ತ್ರಯೀ ಎಂದಿದೆ. ಅಂದರೆ ಋಕ್ ಸಾಮ ಮತ್ತು ಯಜುರ್ ವೇದಗಳ ಮೂರು ಹೆಸರುಗಳಿವೆ.

ಈ ಮೂರರ ಸಮೂಹವೇ ವೇದತ್ರಯೀ ಎನಿಸಿ ಕೊಂಡಿದೆ. ಮೇಲೆ ಹೇಳಿದ ತ್ರಯೀಗೆ ವಿರುದ್ಧವಾಗಿ ಮಹಾಕಾವ್ಯ ಗಳಲ್ಲಿ ವೇದಗಳ ಸಂಖ್ಯೆ ನಾಲ್ಕು ಎಂದು ಹೇಳಿದೆ. "ಚತ್ವಾರೋ ವೇದಾಃ ಸಾಙ್ಗ ಸರಹಸ್ಯಾ" ಇದಲ್ಲದೆ ನಾಲ್ಕು ಎಂದು ಪ್ರತಿಪಾದಿಸುವವರು ಬೇರೆ ಪ್ರಮಾಣಗಳನ್ನು ಸಹ ಈ ರೀತಿ ಕೊಡುತ್ತಾರೆ.

1.ಋಚಾಂ ತ್ವಃ ಪೋಷಮಾಸ್ತೇ ಪುಪುಷ್ವಾನ್ ಗಾಯತ್ರಂ ತ್ವೋ ಗಾಯತಿ ಶಕ್ವರೀಷು ।

ಬ್ರಹ್ಮಾತ್ವೋ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿಮಿಮೀತ ಉ ತ್ವಃ ॥

2.ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ ಸಾಮವೇದೋಽಥ ರ್ವಾಙ್ಗರಸಃ

3.ತತ್ರಾಪರಾ ಋಗ್ವೇದೋ ಯಜುರ್ವೇದ ಸಾಮ ವೇದೋಽಥರ್ವವೇದಃ।

4.ಚತ್ವಾರೋ ವಾ ಇಮೇ ವೇದಾ ಋಗ್ವೇದೋ ಯಜುರ್ವೇದಃ ಸಾಮವೇದೋ ಬ್ರಹ್ಮವೇದಃ

5.ಋ ಚಃ ಸಾಮಾನಿ ಜಜ್ಞಿರೇ। ಛಂದಾಗಂಸಿ ಜಜ್ಞಿರೇ ತಸ್ಮಾದ್ಯಜುಸ್ತ ಸ್ಮಾದಜಾಯತ॥

ಈ ರೀತಿ ಹೇಳಲ್ಪಟ್ಟ ಪ್ರಮಾಣಗಳಿಂದ ನಾಲ್ಕು ವೇದಗಳ ಉಲ್ಲೇಖ ಸ್ಪಷ್ಟವಾಗಿದೆ. ಮೊದಲು ಒಂದೇ ವೇದವಿತ್ತು ಎಂದು ಹೇಳುತ್ತಾರೆ. ವೇದವ್ಯಾಸರು ಅದನ್ನು ನಾಲ್ಕು ಭಾಗಗಳಾಗಿ ಮಾಡಿದರು. ಮಹಾಭಾರತದಲ್ಲಿ ಈ ಐತಿಹಾಸಿಕ ತಥ್ಯದ ಸುಳಿವು ಹೀಗೆ ಮಾಡಲ್ಪಟ್ಟಿದೆ.

ಯೋ ವ್ಯಸ್ಯ ವೇದಾಂಶ್ಚತುರಸ್ತಪಸಾ ಭಗವಾನ್ನೃಷಿಃ
ಲೋಕೇ ವ್ಯಾಸತ್ವಮಾಪೇದೇ ಕಾರ್ಷ್ಣ್ಯಾತ್ ಕೃಷ್ಣತ್ವಮೇವ ಚ ॥

ಅಂದರೆ ಯಾರು ತಮ್ಮ ಸ್ವಂತ ತಪಸ್ಸಿನ ಬಲದಿಂದ ವೇದವನ್ನು ನಾಲ್ಕು ಭಾಗಗಳಾಗಿ ವಿಸ್ತರಿಸಿ ಜಗತ್ತಿನಲ್ಲಿ ವ್ಯಾಸತ್ವ ಸಂಜ್ಞೆಯನ್ನು ಹೊಂದಿದರೋ ಮತ್ತು ಶರೀರ ಕೃಷ್ಣವರ್ಣ ವಾದ್ದರಿಂದ ಕೃಷ್ಣ ಎಂದೆನಿಸಿಕೊಂಡರು. ಅಂತಹ ಭಗವಾನ್ ವೇದವ್ಯಾಸರೇ ವೇದವನ್ನು ನಾಲ್ಕು ಭಾಗಗಳಾಗಿ ವಿಸ್ತರಿಸಿ ತಮ್ಮ ನಾಲ್ಕು ಪ್ರಮುಖ ಶಿಷ್ಯರಿಗೆ ವೈದಿಕ ಸಂಹಿತೆಯನ್ನು ಅಧ್ಯಯನ ಮಾಡಿಸಿದರು. ಅವರು ತಮ್ಮ ಪ್ರಮುಖ ಶಿಷ್ಯ ಪೈಲನಿಗೆ ಋಗ್ವೇದವನ್ನು, ವೈಶಂಪಾಯನಿಗೆ ಯಜುರ್ವೇದವನ್ನು, ಜೈಮಿನಿಗೆ ಸಾಮವೇದವನ್ನು ಹಾಗೂ ಸುಮಂತುವಿಗೆ ಅಥರ್ವವೇದ ಸಂಹಿತೆಯ ಸರ್ವಪ್ರಥಮ ಅಧ್ಯಯನವನ್ನು ಮಾಡಿಸಿದರು.

ಮಹಾಭಾರತದ ಯುದ್ಧಾನಂತರ ವೇದವ್ಯಾಸರು ಮೂರು ವರ್ಷಗಳು, ಸತತ ಪರಿಶ್ರಮದ ನಂತರ ಶ್ರೇಷ್ಠ ಕಾವ್ಯಾತ್ಮಕ ಇತಿಹಾಸವಾದ ಮಹಾಭಾರತವನ್ನು ರಚಿಸಿದರು. ಇದನ್ನು ಪಂಚಮವೇದ ಎಂದೆನ್ನುತ್ತಾರೆ. ವ್ಯಾಸರು ಇದನ್ನು ತಮ್ಮ ಐದನೆಯ ಶಿಷ್ಯರಾದ ಲೋಮ ಹರ್ಷಣರಿಗೆ ಅಧ್ಯಯನ ಮಾಡಿಸಿದರು. ಮಹಾಭಾರತದ ಅಂತಃಸಾಕ್ಷ್ಯ ಭೂತವು ಈ ಶ್ಲೋಕಗಳಿಂದ ವಿದಿತವಾಗುತ್ತದೆ.

ವೇದಾನಧ್ಯಾಪಯಾಮಾಸ ಮಹಾಭಾರತ ಪಂಚಮಾನ್ ।
ಸುಮಂತುಂ ಜೈಮಿನೀ ಪೈಲಂ ಶುಕಂ ಚೈವ ಸ್ವಮಾತ್ಮಜಮ್॥
ಪ್ರಭುರ್ವರಿಷ್ಠೋ ವರದೋವೈಶಂಪಾಯನಮೇವ ಚ ।
ಸಂಹಿತಾಸ್ತೈಃ ಪೃಥಕ್ತ್ವೇನ ಭಾರತಸ್ಯ ಪ್ರಕಾಶಿತಾಃ॥
ತ್ರಿಭಿರ್ವರ್ಷೈಃ ಸದೋತ್ಥಾಯೀ ಕೃಷ್ಣದ್ವೈಪಾಯನೋ ಮುನಿಃ।
ಮಹಾಭಾರತ ಮಾಖ್ಯಾನಂ ಕೃತವಾನಿದಮದ್ಭುತಮ್॥



**ಗುರುರ್ಬ್ರಹ್ಮಾ ಗುರುರ್ವಿಷ್ಣು**
**ಗುರುರ್ದೇವೋ ಮಹೇಶ್ವರಃ**
**ಗುರುಸ್ಸಾಕ್ಷಾತ್ ಪರಬ್ರಹ್ಮ**
**ತಸ್ಮೈ ಶ್ರೀಗುರವೇ ನಮಃ**



ಭಗವಾನ್ ವೇದ ವ್ಯಾಸರು ವೇದವನ್ನು ನಾಲ್ಕು ಭಾಗಗಳಾಗಿ ಏಕೆ ಮಾಡಿದರು? ಇದಕ್ಕೆ ಉತ್ತರ ಶ್ರೀಮದ್ಭಾಗವತದಲ್ಲಿ ಈ ರೀತಿಯಾಗಿ ಸಿಗುತ್ತದೆ.

ತತಃ ಸಪ್ತದಶೇ ಜಾತಃ-
ಸತ್ಯವತ್ಯಾಂ ಪರಾಶರಾತ್
ಚಕ್ರೇ ವೇದತರೋಃ
ಶಾಖಾ ದೃಷ್ಟ್ವಾ ಪುಂಸ್ಕೋಲ್ಪ
ಮೇಧಸಃ॥

ಅಂದರೆ, ಮಹರ್ಷಿ ಪರಾಶರರ ಮೂಲಕ ಸತ್ಯವತಿಯಿಂದ ಹುಟ್ಟಿದ ವೇದವ್ಯಾಸರು ಕಲಿಯುಗದಲ್ಲಿ ಮನುಷ್ಯನ ಅಲ್ಪಬುದ್ಧಿಯನ್ನು ಕಂಡು (ಅರ್ಥಬೋಧದ ಸೌಲಭ್ಯ ದೃಷ್ಟಿಯಿಂದ) ವೇದರೂಪದ ವೃಕ್ಷಕ್ಕೆ ನಾಲ್ಕು ಕೊಂಬೆಗಳನ್ನು ಸೃಷ್ಟಿಸಿದರು. ಮಹಾಭಾರತದ ವ್ಯಾಜದಿಂದ ವೇದವ್ಯಾಸರು ಶ್ರುತಿಯ ಅರ್ಥವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮಾಡಿದರು.



# ಚಾತುರ್ಮಾಸ್ಯದ ಕೆಲವು ವ್ರತಗಳು

– ಡಾ॥ ಸುಮನ ಬದರೀನಾಥ್
94820 94855

ಚಾತುರ್ಮಾಸ್ಯ ವ್ರತವು ಶ್ರೀಮನ್ನಾರಾಯಣನಿಗೆ ಅತಿ ಪ್ರಿಯವೂ ಅತ್ಯಂತ ಪವಿತ್ರವೂ, ಅನಂತಫಲಪ್ರದವೂ, ಜೀವನ ಪರ್ಯಂತ ಆಚರಣೀಯವೂ ಆದ ಮಹಾವ್ರತಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ. ಆಷಾಢಶುದ್ಧ ಏಕಾದಶಿಯಿಂದ (ಶಯನೈಕಾದಶಿ) ಕಾರ್ತೀಕ ಶುದ್ಧ ದ್ವಾದಶಿ (ಉತ್ಥಾನ ದ್ವಾದಶಿ) ಯವರೆಗಿನ ನಾಲ್ಕು ತಿಂಗಳ ಕಾಲವು ಪ್ರಧಾನವಾಗಿ ಚಾತುರ್ಮಾಸ್ಯ ಎನಿಸುತ್ತದೆ. ಈ ಸಮಯದಲ್ಲಿ ಶ್ರೀಹರಿಯು ಕ್ಷೀರ ಸಾಗರದಲ್ಲಿ ಶೇಷಶಯ್ಯೆಯಲ್ಲಿ ಯೋಗನಿದ್ರೆಯಲ್ಲಿರುವನು. ಚಾತುರ್ಮಾಸವು ದಕ್ಷಿಣಾಯನದಲ್ಲಿ ಬರುತ್ತದೆ. ಇದು ಮಂಗಳ ಕಾರ್ಯಗಳಿಗೆ ನಿಷಿದ್ಧವಾದ ಕಾಲ. ಅದರಿಂದ ನೊಂದ ದಕ್ಷಿಣಾಯನದ ಅಧಿದೇವತೆ ರಾತ್ರಿದೇವಿಯು ಭಗವಂತನನ್ನು ನಾನಾ ಬಗೆಯಲ್ಲಿ ಪ್ರಾರ್ಥಿಸಲು ಅವನು ರಾತ್ರಿದೇವಿಗೆ ನಿನ್ನಲ್ಲಿರುವ ಮೂರು ಯಾಮಗಳಲ್ಲಿ ಮೊದಲ ಎರಡು ಯಾಮಗಳು (ಆಷಾಢ, ಶ್ರಾವಣ, ಭಾದ್ರಪದ, ಆಶ್ವೀಜ, ಕಾರ್ತೀಕದ ಚಾತುರ್ಮಾಸ್ಯಕಾಲ) ನನಗೆ ಮಹಾಪ್ರಿಯವಾಗಲಿ. ಆ ಸಮಯದಲ್ಲಿ ಮಾಡಿದ ವ್ರತ, ದಾನ, ಜಪ, ತಪಾದಿ ಸತ್ಕರ್ಮಗಳು ಅನಂತ ಪಟ್ಟು ಫಲದಾಯಕವಾಗಲಿ ಎಂದು ವರವಿತ್ತನು. ಅಂದಿನಿಂದ ಚಾತುರ್ಮಾಸ್ಯ ಕಾಲವು ಅತ್ಯಂತ ಪವಿತ್ರವೂ, ಶ್ರೇಷ್ಠವೂ ಆಚರಣೀಯವೂ ಆದ ವ್ರತವಾಗಿ ಪರಿಗಣಿತಗೊಂಡಿತು.

ಚಾತುರ್ಮಾಸದ ಬಗ್ಗೆ ಮಾಹಿತಿಯು ಮಹಾಭಾರತ, ರಾಮಾಯಣ, ಪದ್ಮಪುರಾಣ, ಸ್ಕಂದಪುರಾಣ,ವರಾಹಪುರಾಣ, ಸ್ಮೃತ್ಯರ್ಥಸಾಗರ ಮುಂತಾದ ಅನೇಕ ಪ್ರಾಚೀನ ಗ್ರಂಥಗಳಲ್ಲಿ ದೊರೆಯುತ್ತದೆ. ಶ್ರೀಹರಿ ಯೋಗನಿದ್ರೆಯಲ್ಲಿರುವ ವಿಧವಿಧವಾದ ವ್ರತಾಚರಣೆಗಳಿಗೆ ಅತ್ಯಂತ ಸೂಕ್ತವಾದ ಕಾಲವಾಗಿದೆ. ಅವುಗಳಿಗೆ ಅನಂತ ಫಲ ದೊರೆಯುವುದೆಂದು ಹೇಳಲಾಗಿದೆ. ಪ್ರಥಮ ಮಾಸದಲ್ಲಿ ಶಾಕವ್ರತ, ದ್ವಿತೀಯ ಮಾಸದಲ್ಲಿ ದಧಿವ್ರತ,ತೃತೀಯಮಾಸದಲ್ಲಿ ಕ್ಷೀರವ್ರತ, ಚತುರ್ಮಾಸದಲ್ಲಿ ದ್ವಿದಲ ವ್ರತಗಳು ಪ್ರಧಾನವಾಗಿ ಹೇಳಲ್ಪಟ್ಟಿದ್ದರೂ, ಉಪವಾಸ, ಲಕ್ಷವ್ರತಗಳು, ದಾನ, ತ್ಯಾಗ, ಮುಂತಾದ ಇನ್ನೂ ಅನೇಕ ವಿಧವಾದ ವ್ರತಗಳನ್ನು ಶಕ್ತ್ಯಾನುಸಾರ ಆಚರಿಸಬಹುದು.

ಚಾತುರ್ಮಾಸದಲ್ಲಿ ಅನೇಕ ವಿಧವಾದ ಆಹಾರ ನಿಯಮ ವ್ರತಗಳು ಹೇಳಲ್ಪಟ್ಟಿವೆ. ಭಗವಂತನ ವಿಶೇಷ ಪ್ರೀತಿಗಾಗಿ ಏಕಾದಶಿಗಳ ಉಪವಾಸದೊಂದಿಗೆ ಬೇರಾವುದಾದರೊಂದು ದಿನ ಉಪವಾಸವನ್ನು ಆಚರಿಸಬೇಕು. ಚಾತುರ್ಮಾಸ್ಯದಲ್ಲಿ ಯಾವ ದಿನ ಉಪವಾಸ ಆಚರಿಸಿದರೂ ಅದಕ್ಕೆ ಏಕಾದಶಿಗಿಂತಲೂ ಹತ್ತು ಪಟ್ಟು ಅಧಿಕ ಫಲವೆಂದು ಹೇಳಲಾಗಿದೆ. ಚಂದ್ರನ ವೃದ್ಧಿಗೆ ಅನುಗುಣವಾಗಿ ಕೋಳಿಯ ಮೊಟ್ಟೆಯ ಗಾತ್ರದಷ್ಟು ತುತ್ತುಗಳನ್ನು ದಿನಕ್ಕೊಂದು ತುತ್ತಿನಂತೆ ಹೆಚ್ಚಿಸುತ್ತಾ,ಚಂದ್ರನಹ್ರಾಸಕ್ಕೆ ತಕ್ಕಂತೆ ತುತ್ತುಗಳನ್ನು ಕಮ್ಮಿ ಮಾಡುತ್ತಾ ಭೋಜನ ಮಾಡುವುದು ಚಾಂದ್ರಾಯಣ ವ್ರತ ಎನಿಸುತ್ತದೆ. ಒಂದು ತಿಂಗಳು ಪರ್ಯಂತ ಒಂದು ದಿನ ಉಪವಾಸ ಮಾರನೆಯ ದಿನ ಭೋಜನ ಎಂಬುದಾಗಿ ಆಚರಿಸಿದರೆ ಧಾರಣಪಾರಣ ವ್ರತ ಎನ್ನುವರು. ಇದಲ್ಲದೆ ದಶಮಿ ಬೆಳಗ್ಗೆ ಊಟ ರಾತ್ರಿ ಫಲಾಹಾರ, ಏಕಾದಶಿ ನಿರಾಹಾರ ದ್ವಾದಶಿ ಬೆಳಗ್ಗೆ ಊಟ, ರಾತ್ರಿ ಫಲಾಹಾರ ಇದು ಅಖಂಡ ವ್ರತ, ಏಕಭುಕ್ತ ಎಂದರೆ ಬೆಳಗ್ಗೆ ಒಂದು ಹೊತ್ತು ಮಾತ್ರ ಊಟ ಮಾಡುವುದು. ನಕ್ತವ್ರತ ಎಂದರೆ ಬೆಳಗ್ಗಿನಿಂದ ಉಪವಾಸಿವಿದ್ದು ರಾತ್ರಿ ಊಟ ಮಾಡುವುದು,ಮೌನ ಭೋಜನ ಎಂದರೆ ಊಟ ಮಾಡುವಾಗ ಮಾತನಾಡದಿರುವುದು, ಅಯಾಚಿತ ಎಂದರೆ ಎಲ್ಲ ಪದಾರ್ಥ ಗಳನ್ನು ಒಟ್ಟಿಗೆ ಬಡಿಸಿಕೊಂಡು ಊಟ ಮಾಡುವುದು, ಮತ್ತೆ ಹಾಕಿಕೊಳ್ಳದಿರುವುದು ಬಾಳೆ ಎಲೆ, ಮುತ್ತುಗದ ಎಲೆ ಮುಂತಾದ ಪತ್ರಾವಳಿಗಳಲ್ಲಿ ಭೋಜನ ಹೀಗೆ ಉಪವಾಸ ವ್ರತಗಳನ್ನು ನಾನಾ ರೀತಿಯಾಗಿ ಆಚರಿಸಬಹುದು.ಉಪವಾಸ ವ್ರತಗಳಿಗೆಲ್ಲ ಉದ್ಯಾಪನೆಯಾಗಿ ಬ್ರಾಹ್ಮಣ ಸುವಾಸಿನೀ ಭೋಜನ ಮಾಡಿಸಿ ದಕ್ಷಿಣೆ ತಾಂಬೂಲ ನೀಡಬೇಕು.

ಚಾತುರ್ಮಾಸ್ಯದಲ್ಲಿ ವಿಧವಿಧವಾದ ಲಕ್ಷವ್ರತಗಳನ್ನು ಆಚರಿಸಬಹುದು. ದಿನಕ್ಕೆ ಒಂದುಸಾವಿರ ಸಂಖ್ಯೆಯಲ್ಲಿ ಯಾವುದೇ ಕಾರ್ಯ ಮಾಡಿದರೂ 4 ತಿಂಗಳಲ್ಲಿ ಲಕ್ಷ ಸಂಖ್ಯೆಯಾಗುತ್ತದೆ. ಲಕ್ಷ ಎನ್ನುವ ಸಂಖ್ಯೆಗೆ ವಿಶೇಷ ಮಹತ್ವವಿದೆ. ಪುರಾಣಗಳಲ್ಲಿಯೂ ಅನೇಕ ಲಕ್ಷವ್ರತಗಳೂ ಅವುಗಳ ಮಹಿಮೆಗಳೂ ಹೇಳಲ್ಪಟ್ಟಿವೆ. ಲಕ್ಷದೀಪ, ಲಕ್ಷ ಬತ್ತಿ ಆರತಿ, ಲಕ್ಷಹರಿದ್ರಾ ಕುಂಕು

ಮಾರ್ಜನೆ, ಲಕ್ಷಪುಷ್ಪ, ಲಕ್ಷ ತುಳಸಿ ಅರ್ಚನೆ ಮುಂತಾಗಿ ಅನೇಕ ರೀತಿಯ ಲಕ್ಷ ವ್ರತಗಳಿವೆ. ಲಕ್ಷ ದೀಪ, ಲಕ್ಷ ಬತ್ತಿ ಆರತಿ ಮಾಡುವ ಸುಲಭ ವಿಧಾನವೆಂದರೆ ಹತ್ತಿಯಿಂದ ಎಳೆ ತೆಗೆದು ನೂರು ಎಳೆಗಳು ಹತ್ತು ದೀಪಗಳನ್ನು ತಯಾರಿಸಿ ದಿನವೂ ಹಚ್ಚಿದರೆ 4 ತಿಂಗಳಲ್ಲಿ ಲಕ್ಷ ದೀಪ ಹಚ್ಚಿದಂತಾಗುವುದು. ಸಹಸ್ರ ನಾಮವನ್ನು ಹೇಳಿಕೊಂಡು ಹರಿದ್ರಾಕುಂಕುಮಾರ್ಚನೆ ದಿನವೂ ಒಂದು ಬಾರಿ ಮಾಡುವುದು, ಮಲ್ಲಿಗೆ, ಸಂಪಿಗೆ, ಪಾರಿಜಾತ ಮುಂತಾದ ಸುಗಂಧಭರಿತ ಹೂಗಳಿಂದ ಮತ್ತು ತುಲಸಿಯಿಂದ ಪೂಜಿಸುವುದು, ಅಥವಾ ಸಾವಿರ ಹೂಗಳನ್ನು ದಿನವು ಪೂಜಿಸುವುದು, ಮುಂತಾಗಿ ಅನೇಕ ಲಕ್ಷವ್ರತಗಳಿವೆ.

ಎಲ್ಲಕ್ಕಿಂತಲೂ ಸುಲಭವಾದ ಲಕ್ಷ ವ್ರತವೆಂದರೆ ಲಕ್ಷ ಜಪ ಮತ್ತು ಲಕ್ಷ ಲೇಖನ, ತಮಗೆ ವಿಹಿತವಾದ ಯಾವುದಾದರೊಂದು ದೇವರ ನಾಮ (ಶ್ರೀರಾಮ, ಶ್ರೀಕೃಷ್ಣ ಮುಂತಾಗಿ) ಅಥವಾ ಮಂತ್ರವನ್ನು ಆರಿಸಿಕೊಂಡು ಅದನ್ನು ದಿನಕ್ಕೆ ಸಾವಿರ ಬಾರಿಯಂತೆ ಜಪಿಸಬಹುದು, ಅಥವಾ ಬರೆಯಬಹುದು. ವ್ರತ ಸಮಾಪ್ತಿಯ ನಂತರ ಅದಕ್ಕೆ ಸೂಕ್ತವಾದ ದಾನವನ್ನು ಕೊಡಬೇಕು.

ಭಗವಂತನಾದ ವಿಷ್ಣುವು ಇಷ್ಟ ವಸ್ತು ಪ್ರದನಾಗಿರುವನು. ಮಾನವರಿಗೆ ಸದಾ ಇಷ್ಟ ವಸ್ತುವಿನ ಪ್ರಾಪ್ತಿಯು ಪ್ರಿಯವಾದುದು. ಆದ್ದರಿಂದ ಚಾತುರ್ಮಾಸ್ಯದಲ್ಲಿ ಇಷ್ಟ ವಸ್ತುವನ್ನು ತ್ಯಾಗ ಮಾಡಿದಾಗ (ಉಪಯೋಗಿಸದೆ ಇದ್ದಾಗ) ಭಗವಂತನ ಅನುಗ್ರಹವಾಗುವುದು ಇಚ್ಛೆಯಿದ್ದವರು ಘೃತ (ತುಪ್ಪ) ಲವಣ (ಉಪ್ಪು) ತಾಂಬೂಲ, ಗುಡ (ಬೆಲ್ಲ) ಅಭ್ಯಂಗಸ್ನಾನ, ಪುಷ್ಪಭೋಗ (ಹೂಮುಡಿಯದಿರುವುದು) ಮುಂತಾದ ಅನೇಕ ದ್ರವ್ಯಗಳ ತ್ಯಾಗ ರೂಪವಾದ ವಿಶೇಷ ವ್ರತಗಳನ್ನು ಸಹ ಆಚರಿಸಬಹುದು. ಅಂತಹ ವಿಶೇಷ ವ್ರತಗಳಿಗೆ ಪ್ರತ್ಯೇಕ ಫಲಗಳುಂಟು, ಉತ್ಥಾನ ದ್ವಾದಶಿ ಅಥವಾ ಕಾರ್ತೀಕ ಹುಣ್ಣಿಮೆಯಂದು ವ್ರತ ಸಮಾಪ್ತಿ ಮಾಡಿ ಅಂದು ತ್ಯಾಗ ಮಾಡಿದ ವಸ್ತುಗಳನ್ನು ದಾನಮಾಡಬೇಕು.

ಚಾತುರ್ಮಾಸವು ನಾನಾ ರೀತಿಯ ದಾನಗಳಿಗೆ ಅತ್ಯಂತ ಪ್ರಶಸ್ತವಾದ ಸಮಯವಾಗಿದೆ. ಸತ್ಪಾತ್ರರಿಗೆ ಯಥಾಶಕ್ತಿದಾನ ಮಾಡಬೇಕು. ನಿತ್ಯದಾನ (ಪ್ರತಿದಿನವೂ ಒಂದು ವಸ್ತುವನ್ನು ದಕ್ಷಿಣೆ ಸಹಿತ ಕೊಡುವುದು) ವಸ್ತ್ರದಾನ, ರಜತದಾನ, ಸುವರ್ಣ




ದಾನ, ನಾನಾ ವಿಧವಾದ ಭೋಗ ವಸ್ತುಗಳ ದಾನ, ಭಾಗವತ, ಹರಿಕಥಾಮೃತಸಾರ, ಚಾತುರ್ಮಾಸ ಮಹಾತ್ಮೆ ಮುಂತಾದ ಶ್ರೇಷ್ಠ ಗ್ರಂಥಗಳ ದಾನ ವಿಶೇಷ ಫಲಕಾರಿ,ದಾನಕ್ಕೆ ಹುಣ್ಣಿಮೆ, ಅಮಾವಾಸ್ಯೆ ದ್ವಾದಶಿಗಳು ಶ್ರೇಷ್ಠದಿನಗಳಾಗಿವೆ. ನಿತ್ಯವು ಪುರಾಣ ಶ್ರವಣ, ಭಾಗವತ, ಹರಿಕಥಾಮೃತಸಾರ, ರಾಮಾಯಣ ಮುಂತಾದ ಗ್ರಂಥಗಳ ಪಾರಾಯಣ, ಬ್ರಾಹ್ಮಣ ಸುವಾಸಿನೀ ಭೋಜನ ಮುಂತಾದ ಅನೇಕ ರೀತಿಯ ವ್ರತಗಳನ್ನು ಮಾಡಬಹುದು. ಸ್ತ್ರೀಯರು ವಿಶೇಷವಾಗಿ ಚಾತುರ್ಮಾಸ್ಯದಲ್ಲಿ ಹಲವಾರು ವ್ರತಗಳನ್ನು ಮಾಡಬಹುದು.ಸುಮಂಗಲೀಪೂಜೆ, ತುಲಸೀಪೂಜೆಗೆ ವಿಶೇಷ ಮಹತ್ವವಿದೆ.

ಚಾತುರ್ಮಾಸ್ಯದ ಮಹಿಮೆ ಬರೆದಷ್ಟು ಮುಗಿಯದು. ತಮ್ಮ ಶಕ್ತ್ಯಾನುಸಾರ ಅತ್ಯಲ್ಪವಾದ ಅನುಷ್ಠಾನ ಮಾಡಿದರು ಮಹತ್ ಪುಣ್ಯಫಲ ದೊರೆಯುವುದು.ಚಾತುರ್ಮಾಸ್ಯಕ್ಕೆ ಸಮಾನವಾದ ಭಗವಂತನಿಗೆ ಪ್ರಿಯವಾದ ಬಲು ಸುಲಭವಾದ ಬೇರೊಂದು ವ್ರತವಿರುವುದಿಲ್ಲ ಎಂದು ಪ್ರಾಚೀನ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಸಾಧಕರೆಲ್ಲರೂ ಯಥಾಶಕ್ತಿ,ಯಥಾಕಾಲ, ಯಾಥಾಯೋಗ್ಯತೆ,ಚಾತುರ್ಮಾಸ್ಯದ ವ್ರತಗಳನ್ನಾಚರಿಸಿ ಪುಣ್ಯಭಾಜನರಾಗಲೆಂಬುದೇ ಈ ಲೇಖನದ ಸದಾಶಯ.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

**ಕಳೆದ ಸಂಚಿಕೆಯಿಂದ**

ತಿರುಮಲೆಯ ಮೇಲೆ ಆನಂದಾಳ್ವಾರರ ಕೈಂಕರ್ಯಕ್ಕೆಂದು ಶ್ರೀ ಭಗವದ್ರಾಮಾನುಜರಿಗೆ ಉತ್ಸವ ಮೂರ್ತಿಯನ್ನೆಂದೇ ನಿರ್ಮಿಸಿದ ನಂತರ ಗೋವಿಂದರಾಜಸ್ವಾಮಿ ಸನ್ನಿಧಿಯಲ್ಲಿ ಶ್ರೀ ಭಗವದ್ರಾಮಾನುಜರ ಉತ್ಸವ ವಿಗ್ರಹವನ್ನು ಮಾತ್ರವೇ ನಿರ್ಮಿಸಿ ಪ್ರತಿಷ್ಠಾಪನೆ ಮಾಡಿ ಒಂದೇ ಕೋಣೆಯಲ್ಲಿ ವಿರಾಜಿಸಿ ಆರಾಧನೆಯನ್ನು ಮಾಡುತ್ತಿದ್ದರು. ಹುಲ್ಲು ಪೊದೆಯಲ್ಲಿದ್ದ ಭಗವಂತನನ್ನು ಶ್ರೀಮಂಟಪದ ಗರ್ಭಾಲಯದಲ್ಲಿ, ಗೋವಿಂದರಾಜಸ್ವಾಮಿಗೆ ಒಂದು ಗರ್ಭಗೃಹವನ್ನು ನಿರ್ಮಿಸಿ ಅಲ್ಲಿರುವ ಹೊತ್ತದಲ್ಲಿರುವ ಸರ್ಪವನ್ನು ಶ್ರೀ ಅನಂತಾಳ್ವಾರರು ಆರಾಧನೆ ಮಾಡಿದಂತೆ ತನ್ನ ವಾಸಸ್ಥಾನವಾದ ನಾರಾಯಣಪುರದಲ್ಲಿರುವ ತನ್ನ ಉದ್ಯಾನವನದಲ್ಲಿನ ನಾಲ್ಕು ಸ್ತಂಭಗಳ ಮಂಟಪದಲ್ಲಿ ಸಂಪೂರ್ಣವಾಗಿ ತರಿಸಿ ಶ್ರೀಮಹಾಮಣಿ ಮಂಟಪದ ನಡುವೆ ಒಂದು ಸ್ತಂಭ ಮಂಟಪವನ್ನು ನಿರ್ಮಿಸಿ, ತನ್ನಂತೆ ಪ್ರತ್ಯೇಕ ಉತ್ಸವವು ಈ ಮೊದಲು ಇರಲಿಲ್ಲವೆಂದು ತಿಳಿದು ತನ್ನ ಜನ್ಮನಕ್ಷತ್ರ ದಿನವಾದ ವೃಷಭಮಾಸ ಅನುರಾಧ ನಕ್ಷತ್ರದಂದು ಅವಬೃಥೋತ್ಸವ (ದೀಕ್ಷಾಂತಸ್ನಾನವು)ಗಳನ್ನು ನೆರವೇರಿಸುವಂತೆ ಏರ್ಪಾಟು ಮಾಡಲಾಯಿತು. ಗೋವಿಂದರಾಜ ಪುರಾಣ (ಚಿತ್ರಕೂಟ ಮಹಾತ್ಮ್ಯೆ) ಪ್ರಸಿದ್ಧವಾದ ತಿರುವಾಡಿತಿರುನಾಳನ್ನು (ಕರ್ಕಾಟಕ ಮಾಸೋತ್ಸವಮು) ಜರುಗಿಸಲಾಗುತ್ತದೆ. ಶ್ರೀರಾಮಾನುಜಾಚಾರ್ಯರ ಆಜ್ಞೆ ನಿಮಿತ್ತ ಉತ್ತರ (ಉತ್ತರದಿಕ್ಕಿಗೆ) ರಾಜಬೀದಿಯ ಎರಡು ಬದಿಗಳಲ್ಲಿ ಮಾಳಿಗೆಗಳನ್ನು ಕಟ್ಟಿಸಿ ರಾಮಾನುಜಪುರವೆಂದು ಹೆಸರಿಸಲಾಯಿತು. ಆ ದಿನಗಳಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿಗೆ, ಶ್ರೀಗೋವಿಂದರಾಜಸ್ವಾಮಿಗೆ ಮಂಗಳಾಶಾಸನ ಮಾಡುತ್ತಿರುವ ಶ್ರೀ ಮಹಾಭಾಗವತರಿಗೂ, ಜ್ಯೇಷ್ಠ ಶ್ರೀಶೈಲಪೂರ್ಣರಿಗೂ, ಅನಂತಾಳ್ವಾರರಿಗೂ (ಆನಂದಾಳ್ವಾನ್) ಶ್ರೀ ವೈಖಾನಸ ಶ್ರೀವೈಷ್ಣವರಿಗೂ ದಿವ್ಯ ಭವನಗಳನ್ನು ಕಟ್ಟಿಸಿ ತಿರುಪ್ಪಣಿಪ್ಪಿಳ್ಳೈ (ತಿರುವೇಂಗಡಚ್ಚಿರುಕ್ಕನ್) ಒಂದು ಮಠವನ್ನು ಕಟ್ಟಿಸಿ ವೈಯಾಶಿ (ವೃಷಭ) ಮಾಸ ತಿರುನಾಳ್‌ನ್ನು ಮೊದಲುಗೊಂಡು ನಿತ್ಯೋತ್ಸವ, ಮಹೋತ್ಸವ, ಸಂವತ್ಸರೋತ್ಸವ ಎಲ್ಲವನ್ನು ಜರಗುವಂತೆ ಮಾಡಲಾಯಿತು.

ಶ್ರೀವೇಂಕಟೇಶ್ವರನು ಅಧ್ಯಯನೋತ್ಸವವನ್ನು ಆಚರಿಸಿ ಅನುಗ್ರಹಿಸುವ ವಿಧಾನಕ್ಕೆ ಶ್ರೀ ಮಣವಾಳ ಮಹಾಮುನಿಗಳು ತಮ್ಮ ಶಿಷ್ಯಂದಿರಿಗೆ ಅಷ್ಟದಿಗ್ಗಜರಲ್ಲಿ ಪ್ರಮುಖರಾದ ಮಹಾಪಂಡಿತ ವಿಚಾರಕರ್ತೃ ತಿರುವೇಂಗಡ ರಾಮಾನುಜಜಿಯ್ಯರಿಗೆ ಬರೆದು ಕಳುಹಿಸಿದ ಶಾಸನ ಪತ್ರವಿದು.



ಶ್ರೀವೇಂಕಟೇಶ್ವರಸ್ವಾಮಿ ತಮ್ಮ ಅಧ್ಯಯನೋತ್ಸವ ಸಮಯದಲ್ಲಿ ಇಯಚ್ಚಾ ಮೊದಲಾದ ದಿವ್ಯ ಪ್ರಬಂಧ ಪಠಿಸಲು ಶ್ರೀಭಗವದ್ರಾಮಾನುಜಾಚಾರ್ಯರಿಗೆ ಆಜ್ಞಾಪಿಸಿದನೆಂಬುದು ಐತಿಹ್ಯವು.

ಶ್ರೀರಾಮಾನುಜ ಯೋಗಿನೋಹ್ಯಪದಿಶನ್ ಸುಕ್ತಿಶ್ಶಠಾರ್‌ಶ್ಶುಭಾ
ಶ್ಚಾದ್ಯಾಯೋನಿಜಯೋಗಿನಾಂ ವೃಷಗಿರಿಶಾನಾಜ್ಞಯಾ
ತತ್ಪರಃ
ಭಕ್ತ್ಯಾಗಾಯದುದಾರಧೀಃ ಕರಿವರಸ್ತದ್ದೇವಗಾನೇವ ಯಃ
ಶ್ರೀರಂಗೇಂದ್ರಗುರು ಭಜೇ ಮುನಿವಹೋಹ್ವಾಂ
ನಾಥವಂಶೋದ್ಭವಮ್

(ಮಹಾಮೇಧಾವಿಯಾದ ಯಾವ ಕವಿವರನು ಮಂಗಳಕರವಾದ ಶಠಕೋಪ ಶ್ರೀಸೂಕ್ತಗಳನ್ನು (ತಿರುವಾಯ್‌ಮೊಳಿ) ರಾಮಾನುಜ ಯತೀಂದ್ರಯರಿಗೆ ಉಪದೇಶಿಸುತ್ತಾ ವೃಷಾದ್ರಿಪತಿಯಲ್ಲಿ ಆಜ್ಞೆ ಮಾಡಿದ ಆ ಸ್ವಾಮಿಯ ಎದುರು ಅಯೋನಿಜರಾದ ಮೂವರು ಮೊದಲಾದ ಆಳ್ವಾರರ ಗೀತೆಗಳನ್ನು ಭಕ್ತಿಯಿಂದ ದೇವಗಾನ ಪದ್ಧತಿಯಲ್ಲಿ ಗಾಯನ ಮಾಡಿದರೋ ಅಂಥಹ ನಾಥಮುನಿಯ ವಂಶೋದ್ಭವರಾದ ಮುನಿವಾಹನ ನಾಮಧೇಯರಾದ ಶ್ರೀರಂಗೇಂದ್ರ ಗುರುವನ್ನು (ತಿರುವಂಗಪ್ಪೆರುಮಾಳ್ ಅರಯರ್) ಸೇವಿಸಿದರು.)

ಹೀಗೆಂದು ಹೇಳಲ್ಪಟ್ಟ ನಾಥಮುನಿ (ಪೆರಿಯಮುದಲಿಯಾರ್) ವಂಶಸ್ಥರಾದ, ಶ್ರೀರಾಮಾನುಜಾಚಾರ್ಯರಿಗೆ ಶ್ರೀಮುಖಸೂಕ್ತ್ಯಾಚಾರ್ಯರಾದ ಶ್ರೀವೇಂಕಟಾಚಲಪತಿ ಆಜ್ಞೆಮೇರೆಗೆ ಸ್ವಾಮಿಚಿತ್ತಾನಂದಕ್ಕೊಸಗ ಮುದಲಾಳ್ವಾರರು ಶ್ರೀ ಸೂಕ್ತವನ್ನು, ಹಲವು ದೇವಗಾನಗಳನ್ನು ಕಲಿಸಿ ಹಾಡಿದವರಾಗಲು, "ಜ್ಞಾನಿಥ್ವಾತ್ಮವ" ಎಂಬ ಯುಕ್ತಿಯಂತೆ ಶ್ರೀರಂಗನಾಥನ ದಿವ್ಯಮಂಗಳ ವಿಗ್ರಹದ ಸೌಂದರ್ಯದೊಡನೆ ಸೇವಾನಂತರ ಮೋಕ್ಷ ಹೊಂದುವಂತೆ ಭಗವಂತನನ್ನು (ಸಮ್ಮತನಾಗಿ) ಸಾಧುಗಳಿಂದ ತಿರುಪ್ಪಾಣ್ಣಾಳ್ವಾರರು ಎಂಬ ನಾಮಧೇಯವನ್ನು ಪ್ರಸಾದಿಸಿ, ಕರುಣೆ ತೋರಿದ ಮಹಾಮಹಿಮೆ ಆಳ್ವಾರ್ ತಿರುವರಂಗಪ್ಪೆರುಮಾಳ್ ಅರಯರ್ ಎಂಬ ಪ್ರಬಂಧಗಾಯಕರು ಒಂದು ಕೃತ್ತಿಕಾ ದಿಪೋತ್ಸವದಂದು ಶ್ರೀರಂಗನಾಥನಿಗೆ ಮಂಗಳಾಶಾಸನವನ್ನು ಮಾಡಿ ನಂತರ ಶ್ರೀಭಗವದ್ರಾಮಾನುಜ ಮಠಕ್ಕೆ ವಿಜಯವನ್ನು ಮಾಡಿ ಶ್ರೀಭಗವದ್ರಾಮಾನುಜರು ಪ್ರತ್ಯುತ್ಥಾನ ಪ್ರಣಾಮಾದ್ಯುಪಚಾರಗಳನ್ನು ಮಧ್ಯದಲ್ಲಿ ಪ್ರಬಂಧಗಾಯಕರು 'ಪೈತ್ತಪಾಂಬಣೈಯಾನ್ ತಿರುವೇಂಗಡಮ್' (ಹೆಡೆಯೆತ್ತಿದ ಆದಿಶೇಷನ್ನು ಹಾಸಿಗೆಯಾದ ಶ್ರೀವೇಂಕಟಾದ್ರಿ) "ಮೊಯೆತ್ತಶೋಲೈ ಮೊಯಪೊದಡಂ ತಾಳ್ವರೈ ಪಯೆತ್ತಿಳೈಪ್ಪದನ್ ಮುನ್ನಂ ಅಡೈಮಿನೋ" (ಉಪವನಗಳು ಪುಷ್ಪ ಸಮೃದ್ಧಿಯು ದಂಡೆಯಲ್ಲಿ ಸ್ಥಿತವಾದ ಪರ್ವತಗಳು ಒಣಗಿ ನಶಿಸಿ ಬಾಡುವ ಮುನ್ನವೇ ಸೇರಿಕೊಳ್ಳಬೇಕು.)

- ಮುಂದುವರೆಯುತ್ತದೆ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡುತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳೆಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಕಳೆದ  ಸಂಚಿಕೆಯಿಂದ ....

ಬಾಯಿಯೋ ಬಿದಿರು ಮಳೆಗಳಿಂದ ನಿಬಿಡವಾದ ಬೆಟ್ಟದ ಮೇಲೆ ನಿಂತ ತೇಜೋವಿಶಿಷ್ಟನಾದ ವೇಂಗಡದೊಡೆಯನ ಶ್ರೀಮೂರ್ತಿಯ ಸ್ವಭಾವ ಲಾವಣ್ಯಾದಿಗಳನ್ನೇ ಸಂಕೀರ್ತಿಸಲು ಆಶಿಸುತ್ತಿರುವುದು(33)ವೇದಪ್ರತಿಪಾದ್ಯನೂ, ವೇಂಗಡದಲ್ಲಿ ನೆಲಸಿರುವವನೂ,ನಿತ್ಯ ಸೂರಿಗಳ ಮಣಿಮುಕುಟಗಳಿಂದ ಅಲಂ ಕರಿಸಲ್ಪಟ್ಟ ದಿವ್ಯಪಾದಗಳನ್ನು ಉಳ್ಳವನೂ ಆದ ಸ್ವಾಮಿಯನ್ನು ಆಶ್ರಯಿಸಿದ ನಂತರ ಐಶ್ವರ್ಯದ ಗರ್ವವೆಲ್ಲಾ ಕ್ಷಣಿಕವಾಗಿ ಏರ್ಪ ಡುತ್ತದೆ. ನೆನ್ನೆ ಇದ್ದಿತು ಇಂದು ಇಲ್ಲವಲ್ಲಾ ಎನ್ನುವ ಈಪ್ಸಿತಾದಿ ಬಾಧೆಗಳು ಅಂತಹವರ ಹತ್ತಿರ ಸುಳಿಯುವುದೇ ಇಲ್ಲ ಖಂಡಿತ!. (45) ಶ್ರೀರಂಗ,ತಿರುಕ್ಕೋಟ್ಟಿಯೂರ್‌ಗಳು ವಾಸಸ್ಥಳಗಳಾದುವು. ಆದರೂ ಹಲವು ಕಾಲದಿಂದ ವಾಸಮಾಡುತ್ತಿರುವುದು ವೇಂಗಡ! ಮತ್ತು ತೋಪುಗಳಿಂದ ಕಂಗೊಳಿಸುತ್ತಿರುವ ತಿರುನೀರ್ಮಲೆ (46) ನಾಲ್ಕು ವೇದಗಳನ್ನು ಪ್ರಕಾಶಪಡಿಸಿದೆ ವೇದ ಪುರುಷವೆನಿಸಿ ಕೊಂಡೆ ಸಂಸ್ಕೃತಿ ಇತಿಹಾಸಗಳನ್ನೆಲ್ಲಾ ಅಧ್ಯಯನ ಮಾಡಿಸಿದೆ. ಶ್ರೀದೇವಿಯ ಬಾಹುಗಳಿಂದ ಆವರಿಸಲ್ಪಟ್ಟು ಇರುವ ಈ ತಾಣ ವನ್ನು ಆಶಿಸಿ ನಿನ್ನದನ್ನಾಗಿಸಿಕೊಂಡೆ (48) ವೇಂಗಡವನ್ನು ಆಶ್ರಯಿಸಿ ಬಂದ ತೋಪಧನರು ತಪೋಮುದ್ರೆಯಲ್ಲಿ ಅಲು ಗಾಡದೇ ನಿಂತಿರಲು ಅವರ ಮೈಗಳನ್ನು ಬಳ್ಳಿಗಳು, ಇವು ಸಣ್ಣ ಬೆಟ್ಟಗುಡ್ಡಗಳೋ ಎಂಬ ಭ್ರಾಂತಿಯಿಂದ ಆವರಿಸಿಕೊಂಡು ಅವರ ಶಿರೋಪ್ರಾಂತ್ಯವನ್ನೂ ಮುಚ್ಚಿಕೊಂಡಿತು. ಇಂತಹ ವಿಚಿತ್ರ ವ್ಯಾಪಾರವಾಗುತ್ತಿದ್ದರೂ ವಿಚಲಿತರಾಗದೇ ಇದ್ದಾರೆ ಆಯೋಗಿಗಳು. ಇವರಂತಹ ಭಕ್ತಿಮಾರ್ಗಗಳಿಂದ ತುಂಬಿ ರುವ,ತಟಾಕಾದಿ ದಿವ್ಯತೀರ್ಥಗಳಿಂದ ಕಂಗೊಳಿಸುವ ವೇಂಗಡವನ್ನೇ ಅಲ್ಲವೇ ನಾನೂ ಆಶ್ರಯಿಸಿ ಶ್ರೇಯಸ್ಸನ್ನು ಹೊಂದುವುದು(53)ಬೆಟ್ಟಗಳೆಂದು ಇಷ್ಟಪಡುವ ಜಾಗ ಗಳೆರಡು, ಒಂದು ವೇಂಗಡ ಮತ್ತೊಂದು ತಿರುಮಾಲಿರುಂ ಶೋಲೈ. ಇವನ್ನು ನೀನು ವಾಸಕ್ಕೆ ಯೋಗ್ಯವೆಂದು ಅಂಗೀ ಕರಿಸಿದೆ. ಆದರೂ ನಿನ್ನ ಹೃದಯಾಂತರಾಳದಿಂದ ಅಭಿ ಮಾನಿಸಿ ಭಕ್ತರ ಹೃದಯವನ್ನು ನಿನ್ನ ಮಂದಿರವನ್ನಾಗಿಸಿ ಕೊಂಡಿರುವೆಯಲ್ಲ! ನಿನ್ನ ಹೃದಯವನ್ನು ಈ ರೀತಿ ಅಪಹರಿ ಸಿರುವ ಈ ಮೂರು ಕೋವಿಲ್‌ಗಳಲ್ಲಿ ತಂಗಿರುವುದರಿಂದ ನಿನ್ನ ಹಳೆಯ ವಾಸಸ್ಥಾನವಾದ ಕ್ಷೀರಾಬ್ಧಿಯನ್ನು ಎಲ್ಲಿ ತ್ಯಜಿಸಿ ಬಿಡುವೆಯೋ ಎನ್ನುವ ಭಯನನಗುಂಟಾಗಿದೆ. ದಯವಿಟ್ಟು ಆ ರೀತಿ ಮಾಡಬಿಡಬೇಡ ! (54) ಭಕ್ತರ ಹೃದಯ ತಂಜಾಊರಿನ ಮಾಮಣ್‌ಕ್ಕೋಯಿಲ್, ಶ್ರೀರಂಗ, ತಿರುತಣ್ಣಾಲ್, ಶೀತಲವಾದ ತಿರುವೇಂಗಡ, ಕ್ಷೀರ

ಸಾಗರ, ಮಹಾಬಲಿಪುರ (ಮಾಮಲ್ಲೈ) ತಿರುಕ್ಕೋವಲೂರ್ ಮತ್ತು ಪ್ರಾಕಾರಗಳಿಂದ ಮೆರೆಯುವ ಕುಂಭಕೋಣ ಇವೆಲ್ಲಾ ಶತ್ರು ನಿರಸನ (ಅರಿಷಡ್‌ವರ್ಗಗಳೆಂಬ, ಭಗವದಾಶ್ರಯಕ್ಕೆ ವಿರೋಧವಾಗಿರುವ ಗುಣಗಳು) ಮಾಡಬಲ್ಲ ದಿವ್ಯಕ್ಷೇತ್ರಗಳು. ಮಹಾವಿಷ್ಣುವಿನ ನೆಲೆಗಳು (70) ಬ್ರಾಹ್ಮೀ ಮುಹೂರ್ತದಲ್ಲಿ ಎದ್ದ ಕಪಿಗಳು ತೀರ್ಥದಲ್ಲಿ ಮಿಂದು, ಆಗ ತಾನೇ ಅರಳಿಯು ತ್ತಿರುವ ಪುಷ್ಪಗಳನ್ನು ತಿರಿದು ತಂದು ನಿನ್ನ ಪಾದಗಳನ್ನು ಅರ್ಚಿ ಸುತ್ತಿವೆ. ಹಾಗೆಯೇ ನನ್ನ ಮನಸ್ಸೇ ! ನೀನೂ ಕೂಡ ಸುಂದರ ವಾದ ವೇಂಗಡದೊಡೆಯನ ನಾಮಗಳನ್ನು ಅನುಸಂಧಾನ ಮಾಡಿಕೊಂಡು ಅವನ ದಿವ್ಯ ಮಂಗಳ ವಿಗ್ರಹದ ಪದತಲದಲ್ಲಿ ಪುಷ್ಪಗಳನ್ನು ಅರ್ಪಿಸಿ ಧನ್ಯತೆಯನ್ನು ಪಡೆದುಕೋ (72) ಘನ ವಾದ ಆಕೃತಿಯನ್ನು ಕೊಂಡ ಹೆಣ್ಣಾನೆಯ ಮುಂದೆ ನಿಂತು , ಪ್ರೀತಿಯಿಂದ, ಎರಡು ಗಿಣ್ಣುಳ್ಳ ಚಿಕ್ಕ ಚಿಕ್ಕ ಬಿದಿರು ತುಂಡನ್ನು ಗಿಡದಿಂದ ಸಿಗಿದು ಬಿಡಿಸಿ, ಎಳೆಯದಾಗಿರುವುದನ್ನೇ ಆರಿಸಿ ತಂದು, ಅಲ್ಲಿಯೇ ಸಿಗುವ ಜೇನಿನಲ್ಲಿ ಅದ್ದಿ, ಸೊಂಡಲಿನಲ್ಲಿ ಅದಕ್ಕೆ ನೀಡುತ್ತಿರುವ, ಕುಂಭಸ್ಥಳಗಳಲ್ಲಿ ಮದಜಲ ಒಸರು ತ್ತಿರುವ ಗಂಡಾನೆಗಳಿಂದ ಶೋಭಿಸುವ ಮತ್ತು ಮೇಘವರ್ಣದ ಮೈ ಕಾಂತಿಯಿಂದ ರಂಜಿಸುವ ಸರ್ವೇಶ್ವರನು ವಾಸ ಮಾಡುವ ವೇಂಗಡವೆಂಬ ದಿವ್ಯ ಪರ್ವತವನ್ನು ಕಂಡು ಧನ್ಯ ರಾಗಿರಿ. (75)

ಮುಂದಿನದು ಪೇಯಾಳ್ವಾರ್ ಅವರ 'ಮೂನ್ರಾಂತಿರು ವಂದಾದಿ ಇದೂ ಸಹ ನೂರು ಪಾಶುರಗಳನ್ನು ಒಳಗೊಂಡ ದಿವ್ಯ ಪ್ರಬಂಧ, 19 ಪಾಶುರಗಳಲ್ಲಿ ವೇಂಗಡವನ್ನು ಹಾಡಿದ್ದಾರೆ. ಇವರೇ ಮೊತ್ತಮೊದಲಿಗೆ ವೇಂಗಡವನ್ನು ತಿರುಮಲೆ (ಶ್ರೇಷ್ಟವಾದ ಬೆಟ್ಟ) ಎಂದು ಕರೆದಿರುವುದು ಮತ್ತು ವಿಚಿತ್ರ ವೆಂಬಂತೆ ಶಿವ ಮತ್ತು ವಿಷ್ಣು ಮೂರ್ತಿಗಳು ಈ ವೇಂಕಟೇ ಶ್ವರನ ದಿವ್ಯಮಂಗಳ ವಿಗ್ರಹದಲ್ಲಿ ಒಂದಾಗಿ ಸೇರಿದ್ದಾರೆ ಎನ್ನುವ ಅರ್ಥ ಮಾಡಿದ್ದಾರೆ. ಮೊದಲ ಇಬ್ಬರು ಆಳ್ವಾರು ಗಳಿಗಿಂತ ಹೆಚ್ಚಿನ ಪಾಶುರಗಳನ್ನು ವೇಂಗಡಕ್ಕೆ ಅಂಕಿತಗೊಳಿಸಿ ಪ್ರಕೀರ್ತಿಸಿದ್ದಾರೆ. ಪ್ರಕೃತಿವರ್ಣನಿಗೆ ಬಹು ಪಾಲು ಪಾಶುರ ಗಳನ್ನು ಅಥವಾ ಪಾಶುರಗಳ ಬಹುಪಾಲನ್ನು ಮೀಸಲಿರಿಸಿ ದ್ದಾರೆ. ಇವರದು ಅಲಂಕಾರಿಕ ಶೈಲಿ. ಕಾಡು ಪ್ರಾಣಿಗಳ ವರ್ಣನೆ, ವಿಚಿತ್ರ ಜನ ಜೀವನ ಇವೆಲ್ಲಾ ಅಧ್ಯಯನ ಯೋಗ್ಯ ವಾದ ಇವರ ಕಾವ್ಯ ವಸ್ತುಗಳು. ಈ ಎಲ್ಲಾ ದೃಷ್ಟಿಗಳಿಂದ ಪೇಯಾಳ್ವಾರ್ ಈ ಮೂವರಲ್ಲಿ ಮೊದಲಿಗರಾಗಿ ನಿಲ್ಲುತ್ತಾರೆ. ಈ ಹತ್ತೊಂಭತ್ತು ಪಾಶುರಗಳಲ್ಲಿ 13 ಪಾಶುರಗಳಲ್ಲಿ ವೇಂಗಡ ವನ್ನೂ ಮೂರು ಪಾಶುರಗಳಲ್ಲಿ 'ವೇಂಗಡತ್ತಾನ್' ಮತ್ತು ಒಂದು ಪಾಶುರಗಳಲ್ಲಿ ವೇಂಗಡವನ್ನೈ ಅನ್ನು ಬಣ್ಣಿಸಿದ್ದಾರೆ. ತಿರುಮಲೆ ಎಂಬುದಾಗಿ ಎರಡು ಪಾಶುರಗಳಲ್ಲಿ ಈ ಬೆಟ್ಟವನ್ನು ನಿರ್ದೇಶಿಸಿ ದ್ದಾರೆ. ನಾಯಕಿಯು ವೇಂಗಡದೊಡೆಯನ ವಿರಹದಿಂದ ಬಾಧೆ ಪಡುವುದನ್ನು ಅವಳ ತಾಯಿಯೋ ಸಖಿಯೋ ಹೇಳುವಂತೆ ಬರುವ ಒಂದು ಪಾಶುರವು ರಮ್ಯವಾಗಿದೆ. ಇಂತಹ ಪದ್ಯ ಪ್ರಕಾರ ಮೊತ್ತಮೊದಲಿಗೆ ಇಲ್ಲಿ ಕಾಣಿಸಿಕೊಳ್ಳುತ್ತದೆ. ಸೊಗ ಸಾದ ಕಲ್ಪನೆ ನಾಲಾಯಿರ ದಿವ್ಯಪ್ರಬಂಧ ಸಾಹಿತ್ಯ ಪ್ರಪಂಚ ದಲ್ಲಿ! ಚತುರ್ವೇದಪ್ರತಿಪಾದ್ಯನಾದವನೂ ದೇವತೆಗಳ ಮುಕುಟ ಸ್ಪರ್ಶ ಹೊಂದಿದ ಪಾದಗಳನ್ನುಳ್ಳವನೂ ಆದ ವೇಂಗಡದೊಡೆ ಯನನ್ನು ಆಶ್ರಯಿಸಿ ಮನಸ್ಸಿಟ್ಟು ವಾಸಿಸು. ಯುವತಿಯರ ತೋಳ್ಬಳಸಿನ ಆಸೆಯನ್ನು ತೊರೆಯಲು ಇದೊಂದೇ ಮಾರ್ಗ (14) ಕಾಂಚೀಪುರವೂ,ವೇಂಗಡವೂ,ವೆಃಕಾವೂ ತಿರು ವೆಳುಕ್ಕೈಪಾಡಿಯೂ,ತುಳಸೀಮಾಲಾಧರನಾದ ಭಗವಂತನ ವಾಸಸ್ಥಳಗಳು, ಅವನಲ್ಲೇ ನೆಲೆಗೊಂಡಿರುವ ನನ್ನ ಮನಸ್ಸು- ಕೆಂಪಾದ ಕಣ್ಣುಳ್ಳ ಆದಿಶೇಷನನ್ನು ಅವನು ನಿಮಿಷ ಮಾತ್ರವೂ ಆಗಲಿರದಂತೆ-ಅವನಿಂದ ಬೇರ್ಪಡುವುದಿಲ್ಲ. (25)

- ಮುಂದುವರೆಯುತ್ತದೆ.


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ!** **ನಿಮ್ಮ ರಕ್ಷಣೆ ನಿಮ್ಮ ಕೈಯಲ್ಲಿ** **ವಾಹನ ನಡೆಸಿ!!**

# ಶ್ರೀವೆಂಕಟಾಚಲ ಮಹಾತ್ಮ್ಯ





ತೆಲುಗು ಮೂಲ - ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ - ಶ್ರೀಮತಿ. ಎಸ್. ಪಾರ್ವತಿ

ಹಿಂದಿನ ಸಂಚಿಕೆಯ ನಂತರ.....

ಆ ಗುಹೆ ಸಾಮಾನ್ಯ ಗುಹೆಯಲ್ಲ. ಇದು ಬಾವಲಿಗಳು, ಹಾವುಗಳು ಮತ್ತು ಜೇಡಗಳ ಗೂಡುಗಳ ಆವಾಸಸ್ಥಾನವಲ್ಲ. ಆ ಗುಹೆಯಲ್ಲಿ ಚಿನ್ನದ, ನವ ರತ್ನಮಯವಾದ ಗೋಪುರಾಕಾರದ ಗೋಡೆಗಳು ಗೋಚರಿಸಿದವು. ಎಲ್ಲಾ ಕವಾಟಗಳು ವಜ್ರಗಳಾಗಿವೆ. ಎಲ್ಲಾ ಮಂಟಪಗಳು ವೈಢೂರ್ಯ, ಮಾಣಿಕ್ಯ ಮತ್ತು ಮರಕತ ಮೌಕ್ತಿಕಗಳಿಂದ ಕೂಡಿವೆ. ಎತ್ತರದ ಕಟ್ಟಡಗಳು. ಸುಂದರವಾದ ಚಿತ್ರ ವಿಚಿತ್ರ ಕಟ್ಟಡ ಸಂಕೀರ್ಣಗಳಿವೆ. ಎಲ್ಲಿ ನೋಡಿದರೂ ಹಸಿರು ತೋರಣಗಳಿಂದ ಕೂಡಿದ ಚಿನ್ನದ ರಥಗಳೇ, ಆನೆಗಳು ಮತ್ತು ಕುದುರೆಗಳು ಮುಕ್ತವಾಗಿ ಚಲಿಸಬಹುದಾದ ರಾಜಪಥಗಳೇ! ಸುಮಧುರವಾದ ಸಂಗೀತ ಕೇಳುತ್ತಿದೆ ಮತ್ತು ನೃತ್ಯ ವಿಲಾಸಗಳು ಗೋಚರಿಸುತ್ತಿವೆ. ವಿವಿಧ ವಾದ್ಯ ಘೋಷಗಳು ಮೊಳಗುತ್ತಿವೆ. ಎಲ್ಲಿ ನೋಡಿದರೂ ಸುಂದರಿಯರ ಸದ್ದು. ಇದಲ್ಲದೆ, ಚತುರ್ಭುಜರು ಗದಾಧಾರಿಗಳು ಶಂಖ ಚಕ್ರಪಾಣಿಗಳು ಸುತ್ತುತ್ತಿದ್ದಾರೆ.

ಆ ಗುಹೆಯ ಭೂತಲದ ಗುಹೆಯಂತೆ ಕಾಣಲಿಲ್ಲ ವಿಶಿಷ್ಟವಾಗಿದೆ, ತುಂಬಾ ಪ್ರಕಾಶಮಾನವಾಗಿದೆ. ಅಂತಹ ಗುಹೆಯ ಮಧ್ಯಭಾಗದಲ್ಲಿ ಒಂದು ವಿಮಾನವಿದೆ. ಅಲ್ಲಿ ಲಕ್ಷ್ಮೀಶ್ವರ ಶೇಷಶಯನನ ರೂಪದಲ್ಲಿ ವಾನರರಿಗೆ ಕಾಣಿಸಿಕೊಂಡನು. ಆ ಸ್ವಾಮಿಯ ಎದೆಯಲ್ಲಿ ಲಕ್ಷ್ಮೀ. ಆ ಸ್ವಾಮಿಯ ಎರಡೂ ಬದಿಯಲ್ಲಿ ಭೂಮಾತೆ ಮತ್ತು ನೀಲದೇವಿಯರು ಇದ್ದಾರೆ. ಮೇಲಾಗಿ ಶಂಖ ಚಕ್ರಗದಾಪಾಣಿಗಳು ಶ್ವೇತಾಂಬರರಾಗಿ, ಶ್ವೇತಪುಷ್ಪ ಮಾಲೆಗಳಿಂದ ಅಲಂಕರಿಸಿಕೊಂಡು ಭಗವಂತನ ಸೇವೆ ಮಾಡುತ್ತಿದ್ದಾರೆ. ಅಂತಹ ದೃಶ್ಯವನ್ನು ನೋಡಿದ ಕಪಿವೀರರಿಗೆ ಏನೂ ಮಾಡಬೇಕೆಂದು ತೋಚಲಿಲ್ಲ.

ಈ ವಾನರ ಗುಂಪನ್ನು ನೋಡಿದ ಕಾವಲುಗಾರನೊಬ್ಬ ಅವರನ್ನು ಹಿಂದಕ್ಕೆ ತಳ್ಳುತ್ತಾ ಬಂದ. ದ್ವಾರಪಾಲಕನನ್ನು ನೋಡಿ ವಾನರರು ಹೆದರಿದರು, ಗುಂಪು ಚದುರಿತು, ಆದಾಗ್ಯೂ, ಅವರ ಆತಂಕವನ್ನು ಗುರಿತಿಸಿದ ದ್ವಾರಪಾಲಕನೊಬ್ಬ ವಿನಮ್ರತೆಯಿಂದ ಅವರಿಗೆ ಗುಹೆಯಿಂದ ಹೊರ ಬರುವ ಮಾರ್ಗವನ್ನು ತೋರಿಸಿದನು. ಕಪಿವರ್ಯರು ಬದುಕಿದೆವೆಂದು ನಿಟ್ಟುಸಿರು ಬಿಡುತ್ತಾ ಗುಹೆಯ ಹೊರಭಾಗಕ್ಕೆ ಬಂದರು. ಸ್ವಲ್ಪ ಹೊತ್ತು ಉಸಿರು ಬಿಗಿಹಿಡಿದು ಗುಹೆಯ ವೈಶಿಷ್ಟ್ಯಗಳ ಬಗ್ಗೆ ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳ ತೊಡಗಿದರು.

ಶ್ರೀರಾಮನೊಡನೆ ಯುದ್ಧ ಮಾಡಲಾರದೆ ರಾವಣನು ಈ ಗುಹೆಯಲ್ಲಿ ಅಡಗಿ ಕುಳಿತಿದ್ದಾನೆ ಎಂದು ಪೋರನೊಬ್ಬನು ಹೇಳಿದನು.

ಅವರಲ್ಲೊಬ್ಬ ಇಲ್ಲ ಇಲ್ಲ ಇದು ರಾವಣಮಯವಲ್ಲ ನಿಜ ವಾಗಿಯೂ "ಹರಿಮಾಯ" ಎಂದನು. 'ಆದಾಗ್ಯೂ, ವ್ಯರ್ಥಾ ಲಾಪವೇಕೆ! ಈ ಬಾರಿ ಗುಹೆಯೊಳಗೆ ಹೋಗಿ ಬರೋಣ ಎಂದು ಇನ್ನೊಬ್ಬ ಸಲಹೆ ನೀಡಿದನು. ನಾವೊಬ್ಬರೇ ಏಕೆ ಹೋಗ ಬೇಕು? ನಾವೆಲ್ಲರೂ ಒಡನಾಡಿಗಳೊಂದಿಗೆ ಹೋಗೋಣ ಎಂದು ಇನ್ನೊಬ್ಬ ಸಲಹೆ ನೀಡಿದನು.

"ವಾನರಮಿತ್ರರೇ! ನೀವು ಕನಸು ಕಾಣುತ್ತಿದ್ದೀರಿ. ಇದೆಲ್ಲಾ ಭ್ರಮೆ" ಎಂದು ಕೆಲವರು ಹೇಳಿದರು. ಇನ್ನು ಕೆಲವರು "ಇಲ್ಲ ಇಲ್ಲ ನಾವು ಕಂಡದ್ದೆಲ್ಲ ಸತ್ಯ" ಎಂದು ಗಟ್ಟಿಯಾಗಿ ಉತ್ತರಿಸಿದರು. ಹೀಗೆ ಒಬ್ಬರಿಗೊಬ್ಬರು ವಾದಿಸುತ್ತಿರುವಾಗ, ಅವರ ಮುಂದೆ "ಗುಹೆ" ಕಾಣಿಸಲಿಲ್ಲ. ಎಲ್ಲರೂ ದಿಗ್ಭ್ರಮೆಗೊಂಡರು.ತರುವಾಯ ವಾನರ ವೀರರು ಶ್ರೀರಾಮನ ಸನ್ನಿಧಿಯನ್ನು ತಲುಪಿದರು. ಆ ಸ್ವಾಮಿಯೊಂದಿಗೆ ತಮ್ಮ ಅನುಭವಗಳನ್ನು ವಿವರವಾಗಿ ಹಂಚಿ ಕೊಂಡರು.

ಶ್ರೀರಾಮನು ವಾನರವೀರರ ಅನುಭವಗಳನ್ನು ಕೇಳಿ ನಗುತ್ತಾ ಹೀಗೆ ಹೇಳಿದನು.

"ವಾನರವೀರರೇ! ಯಾವುದೇ ವಿಷಯದ ಸತ್ಯವನ್ನು ತಿಳಿಯಲು ಸಮಗ್ರ ಪರಿಶೀಲನೆ ಮತ್ತು ಅನ್ವೇಷಣೆಯ ಅಗತ್ಯ ವಿದೆ. ನಾನು ಅದನ್ನು ನಿರಾಕರಿಸುವುದಿಲ್ಲ. ಆದರೆ ದೇವರಜನ್ಮ, ರಾಜರಜನ್ಮ ಮೂಲ ಮತ್ತು ನದಿಗಳ ಉಗಮ ಸ್ಥಾನಗಳ ಬಗ್ಗೆ ಮಾತನಾಡಬಾರದು. ರಮಾಮನೋಹರನು ಈ ಜಾಗದಲ್ಲಿ ಇಲ್ಲ ಎನಬಾರದು. ಹರಿಗಿರಿಯ ಮಹಿಮೆಯನ್ನು ಹರಿಯೇ ಬಲ್ಲ. ಆ ಮಹಿಮೆಗಳನ್ನು ದೇವತೆಗಳೂ ಗ್ರಹಿಸಲಾರರು. ಈ ವೇಂಕ ಟಾಚಲದ ಮಹಿಮೆಗಳು ಅನಂತವಾಗಿದೆ. ಈ ಎಲ್ಲವನ್ನೂ ತಿಳಿಯಬೇಕೆಂದು ಬಯಸುವುದು ಸರಿಯಲ್ಲ ಆದರೆ ನಾನು ನಿಮಗೆ ಒಂದು ವಿಷಯ ಹೇಳುತ್ತೇನೆ ಕೇಳಿ ನೀವು ಧನ್ಯರು. ನೀವು ಗುಹೆಯಲ್ಲಿ ಮಾಧವನನ್ನು ಭೇಟಿ ಮಾಡಿದ್ದೀರಿ. ನಿಮಗೆ ಸ್ವಾಮಿ ದರ್ಶನದಿಂದ ನೀವು ಧನ್ಯರಾಗಿದ್ದೀರಿ ಎಂದು ವಾನರು ಗಳ ಸಂದೇಹಗಳಿಗೆ ಉತ್ತರಿಸಿದರು.

ಆ ನಂತರ ರಾಮನು ವೆಂಕಟಾದ್ರಿಯಲ್ಲಿ ಒಂದು ದಿನ ಕಳೆದು ವಾನರರೊಡನೆ ದಕ್ಷಿಣಾಭಿಮುಖವಾಗಿ ಪ್ರಯಾಣ ಮಾಡಿ ಸಮುದ್ರತೀರವನ್ನು ತಲುಪಿದನು. ಅವನು ವಾನರ ವೀರರ ಸಹಾಯದಿಂದ ಸಮುದ್ರದಲ್ಲಿ ಕಾಲು ದಾರಿಯನ್ನು ನಿರ್ಮಿ ಸಿದನು. ಸುನಾಯಾಸವಾಗಿ ಕಪಿವೀರರೊಂದಿಗೆ ಲಂಕೆಯನ್ನು ತಲುಪಿದನು. ರಾಕ್ಷಸಬಲವನ್ನು ಸಂಹಾರ ಮಾಡಿದನು. ಅವನು ಕುಂಭಕರ್ಣನನ್ನು ಕೊಂದನು. ಜಾನಕಿಯನ್ನು ನಿಂದಿಸಿದ ರಾವಣ ನನ್ನು ಕೊಂದನು. ಆಗ ಸೀತಮ್ಮನನ್ನು ಪರೀಕ್ಷಿಸಿ ಕೈ ಹಿಡಿದನು. ತನಗೆ ಸಹಾಯ ಮಾಡಿದ ವಿಭೀಷಣನಿಗೆ ಲಂಕಾರಾಜ್ಯವನ್ನು ಒಪ್ಪಿಸಿದನು. ಅವನಿಗೆ ಲಂಕೆಯ ಅಧಿಪತಿಯಾಗಿ ಪಟ್ಟಾಭಿಷೇಕ ಮಾಡಿದರು. ಸೀತಾಲಕ್ಷ್ಮಣ ಮತ್ತು ತನಗೆ ಸಹಾಯ ಮಾಡಿದ ವಾನರ ಯೋಧರೊಂದಿಗೆ ಅವನು ಪುಷ್ಪಕ ವಿಮಾನವೇರಿ ಸಾಕೇತಪುರ ವನ್ನು ತಲುಪಿದನು. ಭರತ, ಶತ್ರುಘ್ನರ ಭಕ್ತಿಯ ಸೇವೆ ಸ್ವೀಕರಿಸಿ ಸಾಕೇತದಲ್ಲಿ ಪಟ್ಟಾಭಿಷಿಕ್ತನಾದನು.

ಪ್ರಜೆಗಳು ಸಂತೋಷದಿಂದಿರುವಂತೆ ರಾಮರಾಜ್ಯದ ರಾಜ್ಯ ಭಾರವನ್ನು ಮಾಡುತ್ತಿದ್ದನು ಎಂದು ಸೂತರು ಹೇಳಿ ಕಥೆಯನ್ನು ಮುಗಿಸಿದರು.

ಈ ಕಥೆಯನ್ನೆಲ್ಲ ಕೇಳಿದ ಶೌನಕಾದಿಗಳು ಕುತೂಹಲ ಗೊಂಡು ಪುರಾಣ ಋಷಿಗಳೇ, ನಮಗೊಂದು ಸಣ್ಣ ಸಂಶಯವಿದೆ. ಗುಹೆಯಲ್ಲಿ ವಾನರರು ಭೇಟಿ ಮಾಡಿದ ದಿವ್ಯ ಮಂಗಳ ವಿಗ್ರಹನಾ ರೆಂದು ಕೇಳಿದರು. ಅದಕ್ಕೆ ಉತ್ತರವಾಗಿ ಸೂತನು,

ನಿಮ್ಮ ಸಂದೇಹಗಳನ್ನು ನಿವಾರಿಸುವ ಕರ್ತವ್ಯ ನನ್ನದಾಗಿ ಹೇಳುತ್ತೇನೆ ,

ವೈಕುಂಠ ತೊರೆದ ಶ್ರೀಮನ್ನಾರಾಯಣನೇ ವೆಂಕಟಗಿರಿ ವಾಸ. ಗುಹೆಯಲ್ಲಿ ವಾನರರಿಗೆ ಕಾಣಿಸಿಕೊಂಡವನು ಅವನೇ ತಾನೇ ವೈಕುಂಠವಾಸನೆಂದು ವಾನರವೀರರಿಗೆ ತಿಳಿಯಪಡಿಸ ಬೇಕೆಂದು ಹಾಗೆ ಸಾಕ್ಷಾತ್ಕರಿಸಿದ್ದಾನೆ. ಸಾಮಾನ್ಯ ಜನರಿಗೆ ಈ ವಿಶೇಷತೆ ತಿಳಿದಿಲ್ಲ. ಗುಹೆಯಲ್ಲಿ ವೈಕುಂಠವೇ ಸ್ವಾಭಾವಿಕವಾಗಿ ಸಾಕ್ಷಾತ್ಕಾರವಾಗಿದೆ. ಆದ್ದರಿಂದ ಈ ಗುಹೆಯು ವೈಕುಂಠಗುಹ ಎಂಬ ಹೆಸರನ್ನು ಪಡೆದಿದೆ. ಈ ಗುಹೆಯ ಮಹಿಮೆಯನ್ನು ಕೇಳಿದ ವರಿಗೆ ಕಲಿದೋಷದ ಬಾಧೆ ಇರುವುದಿಲ್ಲ. ಪುತ್ರಪೌತ್ರಾಭಿವೃದ್ಧಿ ಆಗು ತ್ತದೆ. ಮೇಲಾಗಿ ಅವರು ಸಹಜವಾದ ಐಶ್ವರ್ಯ ಸಂಪತ್ತುಗಳನ್ನು ಪಡೆದು ಕೊನೆಗೆ ಮೋಕ್ಷವನ್ನು ಪಡೆಯುತ್ತಾರೆ ಎಂದು ಸೂತರು ವಿವರವಾಗಿ ಹೇಳುವ ಮೂಲಕ ಮುನಿಗಳ ಸಂದೇಹಗಳನ್ನು ಪರಿ ಹರಿಸಿದರು.

(ಪ್ರಥಮಾಶ್ವಾಸ ಅಂತ್ಯ)

ಮುಂದುವರೆಯುತ್ತದೆ.





ಜುಲೈ ತಿಂಗಳ

# ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್



**ಮೇಷ**

ಬಂಧುಮಿತ್ರರೊಂದಿಗೆ ಸತ್ಸಂಬಂಧಗಳು, ಮೊಣಕಾಲು, ಪಾದಗಳಿಗೆ ಸಂಬಂಧಿಸಿದಂತೆ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಗಿ ಬರುವುದು. ವಿದ್ಯೆ ವಿಷಯಗಳಲ್ಲಿ ಪ್ರಾಧಿಕಾರ ದೊರೆಯಲಿದೆ ವಿದ್ಯೆ ಸದುಪಯೋಗವನ್ನು ಮಾಡಿ ಮುಂದೆ ಬರುವಿರಿ. ಉದ್ಯೋಗ, ವೃತ್ತಿ - ವ್ಯಾಪಾರಗಳು ಸಾಮಾನ್ಯವಾಗಿರುತ್ತವೆ.

**ವೃಷಭ**

ಸ್ವತಂತ್ರ ಮನೋಭಾವವುಂಟಾಗಿ ವಾಕ್ಪ್ರವಾಹದಿಂದ ಇತರರ ಮೇಲೆ ಹರಿಹಾಯುವಿರಿ. ಇತರೊಂದಿಗೆ ಮತ್ತಷ್ಟು ಸಮಸ್ಯೆಗಳನ್ನು ಮೈಮೇಲೆಳೆದುಕೊಳ್ಳುವಿರಿ. ಚರ್ಮ ಸಮಸ್ಯೆಗಳ ಸಂಬಂಧಿಸಿದಂತೆ ಚಿಕಿತ್ಸೆ ಪಡೆದುಕೊಳ್ಳುವಿರಿ. ತಂದೆಯೊಂದಿಗೆ ಸತ್ಸಂಬಂಧಗಳಿರುತ್ತವೆ. ಪ್ರಯಾಣಗಳು ಒದಗಿ ಬರುತ್ತವೆ.

**ಮಿಥುನ**

ಆರೋಗ್ಯ ವಿಷಯಗಳಲ್ಲಿ ಜಾಗ್ರತೆಯಿಂದಿರಬೇಕು. ಹೃದಯ, ರಕ್ತ ಪರಿಚಲನೆ, ತಲೆನೋವು ಹಾಗೂ ಕಣ್ಣಿಗೆ ಸಂಬಂಧಿಸಿದ ಹಲವು ಸಮಸ್ಯೆಗಳು ಈ ತಿಂಗಳಿನಲ್ಲಿ ಸಂಭವಿಸಬಹುದು. ಕೋಪ ಮತ್ತು ಆವೇಶವನ್ನು ಹದಬಸ್ತಿನಲ್ಲಿಟ್ಟುಕೊಳ್ಳಬೇಕು. ಆರ್ಥಿಕ ಮುಗ್ಗಟ್ಟುಗಳು ಎದುರಾಗಲಿವೆ.

**ಕರ್ಕಾಟಕ**

ಮೇಲ್ವರ್ಗದವರೊಂದಿಗೆ ಸಮಸ್ಯೆಗಳುಂಟಾದಲ್ಲಿ ಸಹನೆಯಿಂದಿರಬೇಕು. ಆರೋಗ್ಯದ ದೃಷ್ಟಿಯಿಂದ ಸಹಾ ಜಾಗ್ರತೆ ಅವಶ್ಯಕ.

**ಸಿಂಹ**

ಎಲ್ಲಾ ತರಹದ ವೃತ್ತಿಪರರಿಗೆ ಅಧಿಕ ಆದಾಯ ಹಾಗೂ ಯತ್ನ ಕಾರ್ಯ ಸಿದ್ಧಿಯುಂಟಾಗಲಿದೆ. ಆರೋಗ್ಯ ಉತ್ತಮವಾಗಿರಲಿದೆ. ಮನಸ್ಸು ಉಲ್ಲಾಸಕರವಾಗಿರುತ್ತದೆ. ಭೂಮಿ,ಗೃಹ ಸ್ಥಿರಾಸ್ತಿಗಳು ಸಹಾ ಒದಗಿಬರುವ ಅವಕಾಶಗಳಿರುತ್ತವೆ.

**ಕನ್ಯ**

ಸಂಪತ್ತು ಹಾಗೂ ಕೀರ್ತಿವೃದ್ಧಿಸುತ್ತದೆ. ಸ್ನೇಹಿತರಿಂದ ಆದರ ಹಾಗೂ ಪ್ರಯತ್ನಗಳಲ್ಲಿ ವಿಜಯವನ್ನು ಸಾಧಿಸುವಿರಿ. ಮನೆ ಮತ್ತು ಕುಟುಂಬ ವಿಷಯಗಳಲ್ಲಿ ಉತ್ತಮವಾಗಿದೆ. ನೀವು ಆರ್ಥಿಕ ಸಮಸ್ಯೆಗಳಿಂದ ಸಹಾ ಹೊರಬರುತ್ತೀರಿ. ಇದು ನಿಮ್ಮ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಪ್ರಕಾಶಮಾನವಾದ ಕಾಲ.

**ತುಲಾ**

ಯತ್ನಕಾರ್ಯಸಿದ್ಧಿ, ವಿದ್ಯೆ ವೃತ್ತಿಪರವಾಗಿ ಮುನ್ನಡೆ ಗುರಿಯನ್ನು ಸಕಾಲದಲ್ಲಿ ಪೂರ್ಣಗೊಳಿಸಿ ಎಲ್ಲರ ಹೊಗಳಿಕೆಗೆ ಪಾತ್ರರಾಗುವಿರಿ ಹೊಸ ಉದ್ಯೋಗದಲ್ಲಿ ಸೇರುವ ಅವಕಾಶವಿದೆ. ಆರ್ಥಿಕವಾಗಿ ಸ್ವಯಂ ಸಮೃದ್ಧಿಯನ್ನು ಸಾಧಿಸುವಿರಿ.

**ವೃಶ್ಚಿಕ**

ವಾಹನ , ಸಂಪತ್ತು ಮತ್ತು ಸುಖಕರವಾದ ಜೀವನದಂತಹ ಸಾಧಾರಣ ಸೌಕರ್ಯಗಳಿಂದ ನಿಮ್ಮ ಜೀವನಶೈಲಿ ಫಲವತ್ತಾಗಿರುತ್ತದೆ. ನಿಮ್ಮ ಪ್ರಯತ್ನಕ್ಕೆ ಅನುಗುಣವಾಗಿ ಆದಾಯವೂ ಸಹಾ ಸಾಕಷ್ಟು ಇರುತ್ತದೆ.

**ಧನಸ್ಸು**

ವೃತ್ತಿ ಪರಗತಿಯಲ್ಲಿ ಗುರುತಿಸಿಕೊಳ್ಳುವಿರಿ. ಸಂತೃಪ್ತ ಜೀವನ ಸಾಗಿಸುವಿರಿ. ಧನಗಮನಕ್ಕೆ ಕೊರತೆಯಿರದು. ಆಗಾಗ ಮಾನಸಿಕವಾಗಿ ತೊಂದರೆ - ಕ್ಷೋಭೆ ಗೊಳಗಾಗುತ್ತೀರಿ. ಅದೃಷ್ಟವು ನಿಮ್ಮ ಕೈ ಹಿಡಿಯುತ್ತದೆ.

**ಮಕರ**

ಉತ್ತಮ ಫಲಿತಾಂಶಗಳನ್ನು ಆಶಿಸದಿರಿ. ಮಾನಸಿಕ ಹಾಗೂ ಶಾರೀರಿಕ ಒತ್ತಡದಲ್ಲಿರುವಿರಿ. ಸ್ತ್ರೀಯರೊಂದಿಗಿನ ಸಂಭಾಷಣೆಯ ಸಮಯದಲ್ಲಿ ಜಾಗರೂಕತೆಯಿಂದಿರಬೇಕು. ಬಾಯನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಒಳಿತು. ಆರ್ಥಿಕ ವಿಷಯಗಳು ಸಾಮಾನ್ಯವಾಗಿರುತ್ತವೆ.

**ಕುಂಭ**

ಓದಿನಲ್ಲಿ ಪ್ರತಿಭಾ ಸ್ಪರ್ಧೆಗಳಲ್ಲಿ ಜಯಗೊಳ್ಳುವಿರಿ. ಹಲವು ವಿಷಯಗಳನ್ನು ಕಲಿತುಕೊಳ್ಳುವ ಆಸಕ್ತಿಯಿಂದ ಪ್ರಯಾಸಪಟ್ಟು ಕಲಿತುಕೊಳ್ಳುವಿರಿ. ಸ್ಪರ್ಧೆಗಳಲ್ಲಿ ಖಚಿತವಾಗಿ ವಿಜಯ ನಿಮ್ಮದಾಗುತ್ತದೆ. ನಿಮ್ಮ ಪ್ರಯತ್ನಗಳನ್ನು ಸಹಾ ದುಪ್ಪಟ್ಟು ಮಾಡುವಿರಿ.

**ಮೀನ**

ಮನೆಯನ್ನು ತ್ಯಜಿಸಿ ಬೇರೆ ಕಡೆ ವಾಸಿಸಬೇಕಾಗುವ ಸಂದರ್ಭವಿರುವುದು. ಚರ್ಮವ್ಯಾಧಿಗಳಿಗೆ ತುತ್ತಾಗುವ ಪರಿಸ್ಥಿತಿಗಳು ಒದಗಿ ಬರುವುವು. ಈ ತಿಂಗಳಿನಲ್ಲಿ ಸ್ಥಿರಾಸ್ತಿ ಸಂಬಂಧವಾದ ಕ್ರಯವಿಕ್ರಯಗಳನ್ನು ವಾಯಿದೆಯಿಂದ ಮುನ್ನೂಕುವುದು ವಿಹಿತ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

### 1. ಆಷಾಢ ಮಾಸದ ಮಹತ್ವವೇನು?

**ಉತ್ತರ:** ಆಷಾಢಯತೀತಿ ಆಷಾಢಃ ಎಂಬಂತೆ ಆಷಾಢವು ಸೂರ್ಯನನ್ನು ದಂಡಿಸುವ ಸ್ವಭಾವವುಳ್ಳದ್ದು . ಸೂರ್ಯನ ಪ್ರಕಾಶ ಒಂದೇ ಸಮನಾಗಿ ಇರುವುದಿಲ್ಲ. ಸ್ಕಂದ ಮತ್ತು ಪದ್ಮಪುರಾಣದ ಪ್ರಕಾರ ಸೂರ್ಯದೇವನು ಈ ಮಾಸದಲ್ಲಿ ಭಕ್ತರಿಗೆ ನೇರ ದರ್ಶನ ನೀಡುತ್ತಾನೆ. ಹಾಗಾಗಿ ಆಷಾಢ ಮಾಸದಲ್ಲಿ ಸೂರ್ಯನಿಗೆ ಅರ್ಘ್ಯ ಅರ್ಪಿಸುವುದರಿಂದ ವಿಶೇಷ ಫಲ ಲಭಿಸುವುವುದು. ಈ ಮಾಸದಲ್ಲಿಯೇ ಉತ್ತರಾಯಣ ಮುಗಿದು ದಕ್ಷಿಣಾಯನ ಪುಣ್ಯಕಾಲ ಪ್ರಾರಂಭವಾಗುವುದು. ಈ ಮಾಸದಲ್ಲಿಯೇ ಗಂಗೆ ಭೂಮಿಗೆ ಉತ್ತರಾಭಿಮುಖವಾಗಿ ಹರಿದು ಬಂದಿದ್ದರಿಂದ ದಕ್ಷಿಣಾಯನ ಪುಣ್ಯಕಾಲದಂದು ಗಂಗೆ ಪೂಜೆ ಮಾಡುವುದು ರೂಢಿಯಲ್ಲಿದೆ.ಈ ಮಾಸದಲ್ಲಿ ದೇವಶಯನಿ ಏಕಾದಶಿ ಆರಂಭ ವಾಗುತ್ತದೆ. ವಿಷ್ಣು ವಿಶ್ರಾಂತಿಗಾಗಿ ಕ್ಷೀರಸಾಗರಕ್ಕೆ ಹೋಗುತ್ತಾನೆ. ಆಷಾಢ ಶುಕ್ಲ ಏಕಾದಶಿಯಿಂದ ಕಾರ್ತಿಕ ಶುಕ್ಲ ಏಕಾದಶಿಯವರೆಗೆ ಚಾತು ರ್ಮಾಸ ಆಚರಿಸಲಾಗುತ್ತದೆ. ಶಿವನು ದಕ್ಷಿಣಾಮೂರ್ತಿಯಾಗಿ ಆಷಾಢಶುಕ್ಲ ಹುಣ್ಣಿಮೆಯೆಂದೇ ಶಿಷ್ಯರಿಗೆ ಉಪದೇಶಿಸಿದ್ದರಿಂದ ಗುರುಪೂರ್ಣಿಮೆಯ ಆಚರಣೆಯೂ ಆಷಾಢದಲ್ಲೇ ಬಂತು. ಆಷಾಢ ಅಮಾವಾಸ್ಯೆ ಭೀಮನವಮಾವಾಸ್ಯೆ ಎಂದು ಆಚರಿಸಲಾಗುತ್ತದೆ. ಆಷಾಢ ಶುಕ್ರವಾರಗಳಂದು ದೇವಿಯ ಆರಾಧನೆಯನ್ನು ಮಾಡಲಾಗುತ್ತದೆ. ಹೀಗೆ ಆಷಾಢ ಮಾಸ ಬಹಳ ವಿಶೇಷತೆಯನ್ನು ಹೊಂದಿದ ಮಾಸವಾಗಿದೆ.

### 2.ಗುರುಪೂರ್ಣಿಮೆಯ ಹಿನ್ನೆಲೆಯೇನು?

**ಉತ್ತರ:** ಬ್ರಹ್ಮದೇವನು ವೇದಗಳನ್ನು ಜಗತ್ತಿಗೆ ಕೊಟ್ಟನಷ್ಟೆ. ಆದರೆ ಅದು ಎಲ್ಲರಿಗೂ ಅರ್ಥವಾಗುವಂತೆ ಮಾಡಲು ಯಾರಾದರೊಬ್ಬ ಗುರುವಿರಬೇಕಲ್ಲ. ಸರಿ ಯಾರಿರುವರೆಂದು ಕೇಳಲು ಋಷಿಗಳೆಲ್ಲರೂ ಬ್ರಹ್ಮನ ಬಳಿಗೆ ಹೋಗುತ್ತಾರೆ. ಆಗ ಬ್ರಹ್ಮನು ಒಬ್ಬ ಯೋಗಿ ಹಿಮಾಲಯದಲ್ಲಿ ಇರುವನೆಂದೂ ಅವನು ವೇದಗಳನ್ನು ಸರಿಯಾಗಿ ವಿಶ್ಲೇಷಿಸಿ ಅರ್ಥ ಮಾಡಿಸುವನೆಂದೂ ಆದರೆ ನಿಮಗೆ ಕಾಯುವ ತಾಳ್ಮೆ ಇರಬೇಕೆಂದೂ ಹೇಳಿದನು. ಋಷಿಗಳೆಲ್ಲ ಹಿಮಾಲಯಕ್ಕೆ ಹೋಗಿ ಯೋಗಿಯನ್ನು ನೋಡಿದರು. ಅವನ ವೇಷಭೂಷಣ, ನಡೆ ಎಲ್ಲವೂ ವಿಚಿತ್ರವಾಗಿತ್ತು. ಅವನು ಕಣ್ಣು ಮಾತ್ರ ತೆರೆಯುತ್ತಿರಲಿಲ್ಲ ತೆರೆದ ಇನ್ನಾದರೂ ಅವನನ್ನು ಕೇಳೋಣವೆಂದರೆ ಜೋರಾಗಿ ನಗುತ್ತಿದ್ದ. ಒಮ್ಮೊಮ್ಮೆ ತಾಂಡವ ನೃತ್ಯವಾಡುತ್ತಿದ್ದ. ಯಾಕೆ ಹೀಗಾಡುತ್ತಾನೆಂದು ಅವರುಗಳಿಗೆ ಅರ್ಥವಾಗುತ್ತಿರಲಿಲ್ಲ. ಅವನನ್ನು ಕಾಣಲು ಕಾದೂ ಕಾದೂ ಅನೇಕ ಋಷಿಗಳು ವಾಪಸ್ಸು ಹೊರಟುಹೋದರು. ಕೆಲವರು ಮಾತ್ರವೇ ಅವನಿಗಾಗಿ ಕಾಯುತ್ತಾ ಕುಳಿತರು. ಹೀಗೆ ಆ ಋಷಿಗಳು ಬರೋಬ್ಬರಿ ಎಂಬತ್ತು ವರ್ಷಗಳು ಕಾದರು. ಕಡೆಗೊಮ್ಮೆ ಸೂರ್ಯನು ದಕ್ಷಿಣಕ್ಕೆ ಸಂಚರಿಸುವ ಸಮಯದಲ್ಲಿ ಹುಣ್ಣಿಮೆಯಂದು ಆ ಯೋಗಿಯು ದಕ್ಷಿಣಾಭಿಮುಖವಾಗಿ ಕುಳಿತುಕೊಂಡು ಋಷಿಗಳಿಗೆ ಉಪದೇಶ ಮಾಡಿದನು. ಅಂದಿನಿಂದಲೇ ಗುರುಪೂರ್ಣಿಮೆಯಂತಲೂ ಆ ಯೋಗಿಯೇ ಶಿವನೂ, ಆದಿ ಗುರುವೂ, ದಕ್ಷಿಣಾಮೂರ್ತಿಯೆಂದೂ ಕರೆಯಲ್ಪಡುತ್ತಾನೆ.

### 3.ಆಷಾಢ ಮಾಸದಲ್ಲಿ ಲಕ್ಷ್ಮೀಪೂಜೆ ಮಾಡಲು ಕಾರಣವೇನು?

**ಉತ್ತರ :** ಆಷಾಢಮಾಸದಲ್ಲಿ ಗಾಳಿ ಹೆಚ್ಚು ಜೋರಾಗಿ ಬೀಸುವುದರಿಂದ ಬೆಳೆ ಕಟಾವು ಇರುವುದಿಲ್ಲ. ಈ ಹಿನ್ನೆಲೆ ಹಣದ ಕೊರತೆ ಇರುತ್ತದೆ. ಹಾಗಾಗಿ ಹಣದ ಅಭಾವ ಉಂಟಾಗಬಾರದೆಂದು ಲಕ್ಷ್ಮೀಪೂಜೆ ಮಾಡುವುದು ರೂಢಿಗೆ ಬಂತೆಂಬುದು ಒಂದು ಕಾರಣವಾದರೆ, ಆಷಾಢಮಾಸದಲ್ಲಿ ಮೋಡ ಕವಿದು ಸದಾ ಮಳೆ ಸುರಿಯುತ್ತಿರುತ್ತದೆ. ಈ ಸಮಯದಲ್ಲಿ ಲಕ್ಷ್ಮೀಪೂಜೆ ಶ್ರೇಯಸ್ಕರ ವೆಂದೂ ದಾರಿದ್ರ್ಯ ಸಾಲಬಾಧೆ ಹಾಗೂ ಇತರ ತೊಂದರೆಗಳು ನಿವಾರಣೆ ಯಾಗುತ್ತದೆ ಎಂದೂ ಪುರಾಣಗಳಲ್ಲಿ ಉಲ್ಲೇಖವಾಗಿವೆ. ಆಷಾಢ ಶುಕ್ರವಾರ ವನ್ನು ಆಡಿಶುಕ್ರವಾರವೆಂದೂ ಕರೆಯಲಾಗುತ್ತದೆ.

### 4. ಗಾಳಿಪಟ ಹಬ್ಬದ ಆಚರಣೆಯ ವೈಶಿಷ್ಟ್ಯವೇನು?

**ಉತ್ತರ:** ಆಷಾಢ ಮಾಸದಲ್ಲಿ ಗಾಳಿ ಜಾಸ್ತಿ. ಆ ವಿಶೇಷ ಗಾಳಿಯನ್ನು ತಡೆದು ಕೊಳ್ಳಲು ಭೀಮಬಲ ಬೇಕು. ಆದರೆ ಆ ಭೀಮಬಲ ಬರುವುದು ಒಳಗಿನ ದೇವರಿಂದ. ಆದ್ದರಿಂದ ಆ ದೇವರ ಮಹಿಮೆಯ ನೆನಪಿನಲ್ಲೇ ಆ ದಿನ ಆಚರಿಸುವ ಗಾಳಿಪಟ ಹಬ್ಬದ ಗಾಳಿಪಟವು ಅದು ಗಾಳಿಯಲ್ಲಿ ಮೇಲೇರುತ್ತಾ ಹೋಗಲು ದಾರವನ್ನು ಭದ್ರವಾಗಿ ಹಿಡಿದಿರಬೇಕಾದಂತೆ ಎಂಥ ಸಂಕಷ್ಟದ ಬಿರುಗಾಳಿ ಬೀಸಿದಾಗಲೂ ಉನ್ನತಿ ಆಗಲು ಆ ದೇವರೇ ಭದ್ರವಾಗಿ ಹಿಡಿದಿರಬೇಕು. ಅದಕ್ಕಾಗಿ ನಾವು ದೇವರನ್ನು ಭದ್ರವಾಗಿ ಹಿಡಿಯಬೇಕೆಂಬುದರ ದ್ಯೋತಕ ಗಾಳಿಪಟದಲ್ಲಿದೆ.

# ಧರ್ಮಶಾಸ್ತ್ರದಲ್ಲಿ ಸಂಕಲ್ಪದ ಮಹತ್ವ



– ಪ್ರಣವ



ದೇವಸ್ಥಾನಗಳಲ್ಲಿ ಸಂಕಲ್ಪ ಮಾಡಿಸುವುದು ಮತ್ತು ಯಾವುದೇ ಪೂಜೆ, ಹೋಮ, ಜಪ ಮಾಡಬೇಕಾದರೆ ಮೊದಲು ಮಾಡುವುದೇ ಸಂಕಲ್ಪ. ಸಮ್ಯಕ್ ಕಲ್ಪನೆ-ಕ್ರಮಬದ್ಧವಾದ ಕಲ್ಪನೆ. ಸಂಕಲ್ಪ ಎಂದರೆ ನಾವು ಇರುವ ದೇಶ, ಕಾಲ,ಸಮಯ ಮಾಡ ಹೊರಟಿರುವ ಕರ್ಮ ಅದರ ಉದ್ದೇಶ ಮೊದಲಾದವುಗಳನ್ನು ವಿಧಿವತ್ತಾಗಿ ತಿಳಿಯುವ ಒಂದು ವಿಧಾನ. ಮುಖ್ಯವಾದ ಯೋಜನೆ, ಮತ್ತು ಮಾಡಬೇಕಾದ ಕಾರ್ಯಗಳು ನಿರ್ವಿಘ್ನವಾಗಿ ನಡೆಯುವಂತೆ ದೇವರ ಮುಂದೆ ಮನಸ್ಸಿನಲ್ಲಿ ಬೇಡಿಕೊಳ್ಳುವುದೇ ಸಂಕಲ್ಪ.

ಈ ಸಂಕಲ್ಪದ ಸಮಯದಲ್ಲಿ ನಮ್ಮ ತಂದೆ, ತಾಯಿ, ಗುರುಹಿರಿಯರನ್ನು ನೆನೆಸಿಕೊಂಡು ನಮ್ಮ ಕಾರ್ಯ ಅಥವಾ ಮುಂದಿನ ಗುರಿ ಸಾಧಿಸುವುದಕ್ಕೆ ನಮ್ಮ ಅಭೀಷ್ಟ ಸಿದ್ಧಿಯ ನಿಮಿತ್ತವಾಗಿ ದೇವರ ಮುಂದೆ ಪ್ರಾರ್ಥಿಸಬೇಕು ಮತ್ತು ನಮ್ಮ ಮನೋನಿಶ್ಚಯವನ್ನು ಕಾಯಾ-ವಾಚಾ-ಮನಸಾ ಆ ಭಗವಂತನಲ್ಲಿ ಅರ್ಪಣೆ ಮಾಡಿಕೊಳ್ಳಬೇಕು. ನಮ್ಮ ಸಂಕಲ್ಪವು ಎಷ್ಟು ಶ್ರದ್ಧೆ ಭಕ್ತಿ ಪ್ರೀತಿಯಿಂದ ಕೂಡಿರುವುದೋ ಫಲಿತಾಂಶ ಕೂಡ ಅಷ್ಟು ಉನ್ನತವಾಗಿಯೇ ಸಿಗುತ್ತದೆ. ಯಾರ ಸಂಕಲ್ಪವು ಸಂಶಯಾತ್ಮಕವಾಗಿರುತ್ತದೆಯೋ ಅವರ ಫಲಿತಾಂಶವೂ ಕೂಡ ಸಂಶಯವಾಗಿಯೇ ಉಳಿದು ಕೊಳ್ಳುತ್ತದೆ.

ಕೇವಲ ನಮ್ಮ ವೈಯಕ್ತಿಕವಲ್ಲದೇ ದೇಶ, ಸ್ವಗೃಹ, ವಾಸಸ್ಥಳ, ಸಂವತ್ಸರ , ಋತು ,ಮಾಸ, ಪಕ್ಷ, ವಾರ, ತಿಥಿ, ನಕ್ಷತ್ರ, ಯೋಗ, ಕರಣಗಳು ಅಲ್ಲದೆ ವಿಶ್ವಪ್ರಕೃತಿ ಸ್ಥಿತಿ ಕಾಲ ಮುಂತಾದವುಗಳ ಬಗ್ಗೆಯೂ ಅರಿವು ಮೂಡಿಸಿ ಎಲ್ಲವನ್ನು ಪ್ರೀತಿಸಿ ಗೌರವಿಸುವ ಶಕ್ತಿಯೇ ಸಂಕಲ್ಪ.

ಸಂಕಲ್ಪಕ್ಕೆ ಒಂದು ನಿರ್ದಿಷ್ಟವಾದ ಮನೋನಿಶ್ಚಯದಿಂದ ಇರುವುದು ಅತ್ಯಗತ್ಯವಾಗುತ್ತದೆ. ನಮ್ಮ ಮನಸ್ಸು ಹಿಡಿತದಲ್ಲಿ ಶುದ್ಧವಾಗಿ ಇಲ್ಲದಿದ್ದರೆ ಯಾವುದೇ ಸಂಕಲ್ಪ, ಪೂಜೆ ಜಪತಪಗಳು ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಮನಸ್ಸು ಏಕಾಗ್ರತೆಯಿಂದ ದೃಢ ನಿಶ್ಚಯದಿಂದಿದ್ದರೆ ಮಾತ್ರ ನಮ್ಮ ಎಲ್ಲಾ ಕಾರ್ಯವು ಒಳ್ಳೆಯದಾಗುತ್ತದೆ. ಯಾವುದೂ ಅಸಾಧ್ಯವಲ್ಲ. ಸಂಕಲ್ಪ ಅಂದರೆ ಚಿಂತನೆ, ಮಹಾ ಸಂಕಲ್ಪ ಎಂಬುವುದು ನಮ್ಮ ಪೂರ್ವಜರು ಒಂದು ಅದ್ಭುತವಾದ ದೇಶ ಕಾಲ ಕರ್ಮಗಳ ಜೊತೆಗೆ ಪಾವನ ಚರಿತ್ರೆ ಸಂಸ್ಮರಣೆಯೊಂದಿಗೆ ನಡೆಸುವ ಮನಸ್ಸಿನ ತೀರ್ಮಾನವೆಂದು ತಿಳಿದು ಅದನ್ನು ರೂಢಿಗೆ ತಂದರು.









1.ಚಾತುರ್ಮಾಸ್ಯ ವ್ರತ

2. ಆಷಾಢಮಾಸ

3. ಗುರು ಪೂರ್ಣಿಮೆ

ಮೇಲೆ ಹೇಳಿರುವ ಹಬ್ಬ ಹರಿದಿನಗಳಿಗೆ
ಸಂಬಂಧಿಸಿದ ಚಿತ್ರದ ಹತ್ತಿರವಿರುವ
ರೌಂಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ





## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ರು ಕಂ ಬಾ ಯು ಹ ಲು ದ್ದಂ

ವಿ ಗ ಲ್ಲಿ ಇ ಳು ಡ ತೆ ಬಿ

ಉತ್ತರಗಳು:
ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ

ಮಕ್ಕಳೇ ಇದರಲ್ಲಿರುವ ಯಾವುದೇ ಸಂಖ್ಯೆಯನ್ನು ಕೂಡಿದರೂ 5 ಬರಬೇಕು ಹಾಗೂ ವ್ಯವಕಲನ ಮಾಡಿದರೂ 5 ಬರಬೇಕು ಆ ದಾರಿಯಲ್ಲಿ ಶಿಷ್ಯ ಹೋಗಿ ಗುರುವನ್ನು ಸೇರಬೇಕು.



| | | | | | | | |
|---|---|---|---|---|---|---|---|
| 7 −2 | 8 −3 | 6 −4 | 5 +0 | 12 +4 | 8 −2 | 5 +10 | 7 −6 |
| 10 −2 | 2 +3 | 8 −3 | 8 −2 | 13 +5 | 7 −5 | 12 +2 | 9 −2 |
| 16 +4 | 5 −2 | 9 −4 | 10 −5 | 15 −10 | 1 +4 | 12 −7 | 9 −2 |
| 15 +2 | 7 −2 | 18 +3 | 3 +2 | 4 +1 | 19 +1 | 19 −14 | 0 +5 |






1. ಭೋಧಗಯಾ
2. ವೈಶಾಲಿ
3.ನಳಂದ
4. ಪಾಟ್ನಾ

ತಿರುಮಲೆ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01.ವಿಷ್ಣುವು ಯಾವಾಗ ಯೋಗ ನಿದ್ರೆಗೆ ಹೋಗುತ್ತಾರೆ?............................................................

02ಉತ್ತರಾಯಣವನ್ನು ಯಾವ ಕಾಲವೆಂದು ಭಾವಿಸಲಾಗುತ್ತದೆ?............................................................

03.ಚಾತುರ್ಮಾಸ್ಯವು ಎಂದಿನಿಂದ ಎಂದಿನವರೆಗೆ ಇರುತ್ತದೆ? ............................................................

04.ಶಿಖರದ ತುದಿಯಲ್ಲಿ ಏನು ಇದೆ?............................................................

05.ಜಗನ್ನಾಥದಾಸರು ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ ಯಾವ ಗ್ರಂಥವನ್ನು ರಚಿಸಿದರು?............................................................

06.ತಿರುಪತಿ ತಿಮ್ಮಪ್ಪನಿಗೆ ಮದುವೆಗೆ ಮುಂಚೆ ಇದ್ದ ಹೆಸರೇನು?............................................................

07.ಮಂಟಪದ ನಡುವೆ ಏನಿದೆ? ............................................................

08ಜೀವನಿಗೆ ಎಷ್ಟು ದೇಹಗಳಿವೆ ಅವು ಯಾವುವು? ............................................................

09.ಗೋಧಿಯು ನವಗ್ರಹಗಳಲ್ಲಿ ಯಾವ ದೇವರಿಗೆ ಪ್ರೀತಿ ಪಾತ್ರ? ............................................................

10.ವೇದಗಳು ಎಷ್ಟು? ............................................................

11.ಆಷಾಢಶುದ್ಧ ಏಕಾದಶಿಯನ್ನು ಏನೆಂದು ಕರೆಯುತ್ತಾರೆ? ............................................................

12.ಪೂರಿ ರಥಯಾತ್ರೆ ಎಷ್ಟು ದಿನಗಳ ಕಾಲ ನಡೆಯುತ್ತದೆ?............................................................

13. ಅವಬೃಥೋತ್ಸವ ಯಾವಾಗ ಏರ್ಪಾಟು ಮಾಡಲಾಯಿತು?............................................................

14.ವೇಂಗಡವನ್ನು ಎಷ್ಟು ಪಾಶುರಗಳಲ್ಲಿ ಹಾಡಿದ್ದಾರೆ? ............................................................

15.ಯಾರ ಸಹಾಯದಿಂದ ರಾಮನು ಸಮುದ್ರದಲ್ಲಿ ಕಾಲುದಾರಿಯನ್ನು ನಿರ್ಮಿಸಿದನು? ............................................................




## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.06.2024
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
**ತಿ.ತಿ.ದೇ. ಪ್ರೆಸ್,**
**2 ನೇ ಅಂತಸ್ತು**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು :** | **ವಿಳಾಸ :** |
| **ಚಂದಾ ಸಂಖ್ಯೆ :** | |
| **ತಂದೆಯ ಹೆಸರು :** | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ :** |



ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ

- ಪೂರಿ ಜಗನ್ನಾಥ ರಥಯಾತ್ರೆ ಈ ವರ್ಷ ಯಾವ ದಿನ ನಡೆಯುತ್ತದೆ?
- ಪೂರಿ ಜಗನ್ನಾಥ ಯಾತ್ರೆ ಎಲ್ಲಿ ನಡೆಯುತ್ತದೆ. ?
- ಜಗನಾಥ ಹಾಗೂ ಬಲರಾಮನ ಸೋದರಿ ಯಾರು?
- ಜಗನ್ನಾಥನ ರಥದ ಬಣ್ಣ ಯಾವುದು?
- ಮೂರು ದೇವತೆಗಳನ್ನು ಜಗನ್ನಾಥ ದೇವಾಲಯದಿಂದ ಯಾವ ದೇವಾಲಯಕ್ಕೆ ಕರೆದೊಯ್ಯಲಾಗುತ್ತದೆ?
- ಜಗನ್ನಾಥ ರಥದ ಹೆಸರೇನು?
- ರಥೋತ್ಸವವು ಎಷ್ಟು ದಿನ ನಡೆಯುತ್ತದೆ?
- ಬಲರಾಮನ ರಥದ ಹೆಸರೇನು?

1) ಜುಲೈ -7 2)ಒರಿಸ್ಸಾ - ಭುವನೇಶ್ವರ್ 3)ಸುಭದ್ರ 4)ಕೆಂಪು ಮತ್ತು ಹಳದಿ 5)ಗುಂಡಿಚಾ ದೇವಾಲಯ 6) ನಂಧೀ ಘೋಷ 7) 9 ದಿನ 8)ತಾಳಧ್ವಜ




ಮಕ್ಕಳೇ ಕನ್ನಡ ಅಕ್ಷರಗಳನ್ನು ಕಲಿತರೆ ಕನ್ನಡ ನಾಡಿಗೆ ಹೆಮ್ಮೆ . ಈ ಚಿತ್ರದಲ್ಲಿ ಏನು ತಪ್ಪು ಇದೆ, ನೋಡಿ ಹೇಳಿ ನೋಡೋಣ.



ಒಮ್ಮೆ ಕಾಡಿನಲ್ಲಿ ಮರದ ಕೆಳಗೆ ಸಿಂಹ ಮಲಗಿತ್ತು. ಆಗ ಅಲ್ಲಿ ಇಲಿ ಒಂದು ಬಂದು ಸಿಂಹದ ದೇಹದ ಮೇಲೆ ಹಾಗೂ ಕೆಳಗೆ ಓಡಡಾಳು ಪ್ರಾರಂಭಿಸಿತು. ಇಲಿ ಸಿಂಹದ ಮೂಗಿಗೆ ಅಡ್ಡಲಾಗಿ ಓಡಿತು. ಆಗ ಕೋಪ ಬಂದು ಸಿಂಹವು ತನ್ನ ಪಂಜಗಳಲ್ಲಿ ಚಿಕ್ಕ ಇಲಿಯನ್ನು ಇಡಿಯಿತು. ಇಲಿ ಭಯಪಟ್ಟು ಓ ರಾಜ ಈ ಬಾರಿ ನನ್ನನ್ನು ಕ್ಷಮಿಸಿ. ನಾನು ಇನ್ನು ಮುಂದೆ ಎಂದಿಗೂ ಈ ರೀತಿ ಮತ್ತೆ ಮಾಡುವುದಿಲ್ಲ. ಹಾಗೂ ನೀವು ನನ್ನಲ್ಲಿ ದಯೆ ಮಾಡಿ ಹಾಗೂ ನಾನೂ ನಿಮಗೂ ಒಂದು ಸಲ ಸಹಾಯವನ್ನು ಮಾಡುತ್ತೇನೆ.



ಆ ಸಿಂಹವು ಒಳ್ಳೆಯ ಮನಸ್ಸಿನಿಂದ ಇಲಿಯನ್ನು ಬಿಟ್ಟಿತು. ಕೆಲವು ದಿನಗಳ ನಂತರ ಸಿಂಹವು ಬೇಟೆಗಾರನ ಬಲೆಯಲ್ಲಿ ಬಿತ್ತು ಆಗ ಇಲಿಗೆ ಸಿಂಹದ ಘರ್ಜನೆಯನ್ನು ಕೇಳಿ ಅಲ್ಲಿ ಹೋಗಿ ಬಲೆಯ ಹಗ್ಗಗಳನ್ನು ಕಡಿಯಲು ಪ್ರಾರಂಭಿಸಿತು. ಆಗ ಅದು ಸಿಂಹವನ್ನು ಬಿಡಿಸಿತು. ಆದ್ದರಿಂದ ಮಕ್ಕಳೇ ಯಾವಾಗಲೂ ಪ್ರೀತಿ ಮತ್ತು ದಯೆ ವ್ಯರ್ಥವಾಗುವುದಿಲ್ಲ.

**ನೀತಿ : ನೀವು ದಯೆಯಿಂದ ಸಾಧಿಸಬಹುದು, ಬಲದಿಂದ ಸಾಧ್ಯವಿಲ್ಲ.**

## ದಯೆ ಎಂದಿಗೂ ವ್ಯರ್ಥವಾಗುವುದಿಲ್ಲ



ಚಿತ್ರಕಥೆ

# ದೈವ ದೂಷಣೆ ಮಹಾಪಾಪ

ಕಥೆ: ತೆಲುಗು ಮೂಲ : ಶ್ರೀಮತಿ. ವಿ.ನಾಗವಲ್ಲಿ
ಅನುವಾದ : ಶ್ರೀಮತಿ. ಎಸ್. ಸುರೇಖ
ಚಿತ್ರಗಳು : ದ್ವಾರಕನಾಥ್

ಶಿಶುಪಾಲ ದಮಘೋಷ ಸಾತ್ವತಿಯ ಕುಮಾರನು. ಈತನಿಗೆ ಶ್ರೀಕೃಷ್ಣನೊಂದಿಗೆ ಶತ್ರುತ್ವವಾಯಿತು. ನಂತರ ಶ್ರೀ ಕೃಷ್ಣನು ಇವನನ್ನು ತನ್ನ ಚಕ್ರಾಯುಧದಿಂದ ಸಂಹರಿಸಿದನು. ಆ ಕಥೆ ಏನೆಂದು ನೋಡೋಣ ಮಕ್ಕಳೇ!




ಧರ್ಮರಾಜ ರಾಜಸೂಯಯಾಗವನ್ನು ನಡೆಸಿ, ಆ ಯಾಗಫಲವನ್ನು ಶ್ರೀಕೃಷ್ಣಪರಮಾತ್ಮನಿಗೆ ಕೊಡಬೇಕೆಂದು ಸಭೆಯನ್ನು ಏರ್ಪಾಟು ಮಾಡಿದನು.
ಕೃಷ್ಣ! ಪರಂಧಾಮಾ! ರಾಜಸೂಯಯಾಗಫಲವನ್ನು ಸ್ವೀಕರಿಸು ಸ್ವಾಮಿ!
ಹಾಗೆಯೇ ! ಕೊಡು ಧರ್ಮಜಾ!
ಅದನ್ನು ನೋಡಿ ಶಿಶುಪಾಲನಿಗೆ ಸಹಿಸಲಾರದಷ್ಟು ಕೋಪ ಬಂತು.
ಓ ಧರ್ಮಜಾ! ಯಾಗಫಲವನ್ನು ತೆಗೆದುಕೊಳ್ಳುವ ಅರ್ಹತೆ ಆತನಿಗೆ ಇಲ್ಲ. ಆತನಿಗೆ ಕೊಡಬೇಡ. ಅದಕ್ಕೆ ನಾನು ಒಪ್ಪಿಕೊಳ್ಳುವುದಿಲ್ಲ. ಆತನು ಮಹಾಮಾಯಾವಿ.
ಅದನ್ನು ಕೇಳಿ ಭೀಷ್ಮನು ಹೀಗೆ ಹೇಳಿದನು.
ಶಿಶುಪಾಲಾ! ದೈವವನ್ನು ದೂಷಿಸುತ್ತಿರುವೆ. ಇದು ನಿನಗೆ ಒಳ್ಳೆಯದಲ್ಲ ಕುಳಿತುಕೋ.
ಓ ! ಭೀಷ್ಮಾ! ನೀನು ಸುಮ್ಮನಿರು! ಆ ಗೊಲ್ಲನಿಗೆ ಕೊಟ್ಟರೆ ನಾನು ಸುಮ್ಮನೆ ಇರುವುದಿಲ್ಲ.
ಶಿಶುಪಾಲ! ನಿನ್ನ ನೂರು ತಪ್ಪುಗಳಿಗೆ ಪ್ರಾಯಶ್ಚಿತವಾಗಿ ನನ್ನ ಚಕ್ರಾಯುಧದಿಂದ ನಿನಗೆ ಮರಣಶಿಕ್ಷೆ ವಿಧಿಸುತ್ತಿದ್ದೇನೆ.
ಶೀಘ್ರವಾಗಿ ಹೋಗು ಚಕ್ರವೇ! ಅವನ ತಲೆಯನ್ನು ಛೇದಿಸು.
ಹಾಗೇ ಆಗಲೀ! ಸ್ವಾಮಿ
ಕೃಷ್ಣಾ! ದುಷ್ಟರನ್ನು ಸಂಹರಿಸಿ ಲೋಕೋಪಕಾರವನ್ನು ಮಾಡಿದೆ. ಈಗ ಈ ಯಾಗ ಫಲವನ್ನು ಸ್ವೀಕರಿಸಿ ನಮ್ಮನ್ನು ಆಶೀರ್ವದಿಸು.
ಹಾಗೆಯೇ ಧರ್ಮಜಾ! ವಿಜಯೋಸ್ತು!
ಧನ್ಯವಾದ ಸ್ವಾಮಿ! ಧನ್ಯವಾದ!!
**ನೀತಿ :** ಯಾವುದೇ ಸಂದರ್ಭದಲ್ಲೂ ದೇವರನ್ನು ನಿಂದಿಸಬಾರದು. ಹಾಗೇ ಮಾಡಿದರೆ ಯಾರಿಗಾದರೂ, ನಷ್ಟ ತಪ್ಪದು.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507.
Editor : Dr. V. G. Chokkalingam, M.A., Ph.D.








13-06-2024 ರಂದು ಆಂಧ್ರಪ್ರದೇಶದ ರಾಜ್ಯದ ಮುಖ್ಯಮಂತ್ರಿಯಾದ ಗೌ॥ ಶ್ರೀ. ನಾರಾಚಂದ್ರಬಾಬು ನಾಯ್ಡು ರವರು ಮತ್ತು ಆಂಧ್ರಪ್ರದೇಶದ ಮಂತ್ರಿಯಾದ (ಹೆಚ್‌ಆರ್, ಐಟಿ,ಆರ್‌ಟಿಜಿ) ಗೌ॥ ಶ್ರೀ ಎನ್. ಲೋಕೇಶ್ ಅವರು ಕುಟುಂಬ ಸಮೇತವಾಗಿ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ದರ್ಶನ ಮತ್ತು ವೇದಆಶೀರ್ವಚನವನ್ನು ಪಡೆದರು.
ದರ್ಶನಾನಂತರ ಇವರಿಗೆ ಅಮ್ಮನವರ ತೀರ್ಥಪ್ರಸಾದವನ್ನು ನೀಡುತ್ತಿರುವ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮಂ ಐ.ಎ.ಎಸ್., ಮತ್ತು ಇತರ ಶಾಸನ ಸಭೆ ಸದಸ್ಯರು ಮತ್ತು ಉನ್ನತಾಧಿಕಾರಿಗಳು ಪಾಲ್ಗೊಂಡರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-06–2024 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/ 2024-2026" Posting on 5th of Every Month.

